ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 29 ಬುಧವಾರ 2026

47

ಸಂಪುಟ: 47 | ಸಂಚಿಕೆ: 14 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಗ್ರಾಮಾಂತರ ಸಾರಿಗೆಗೆ ಸೇರ್ಪಡೆಯಾದ 'ಪಲ್ಲಕ್ಕಿ'!

● ಮೊದಲ ಹಂತದಲ್ಲಿ ಬಂದಿವೆ 9 ನಾನ್ ಎಸಿ ಸ್ಲೀಪರ್ ಬಸ್‌ಗಳು ● ಬೆಂಕಿ ಗ್ರಹಿಕೆಯ ನೂತನ ತಂತ್ರಜ್ಞಾನವುಳ್ಳ ಬಸ್



ಮೈಸೂರಿನ ಗ್ರಾಮಾಂತರ ವಿಭಾಗದ ಸಾರಿಗೆ ಸಂಸ್ಥೆಗೆ ಹೊಸದಾಗಿ ಸೇರ್ಪಡೆಯಾಗಿರುವ 'ಪಲ್ಲಕ್ಕಿ' ಬ್ರಾಂಡ್ ನೂತನ ಬಸ್

ಮೈಸೂರು, ಏ.28(ಎಂಟಿವೈ)– ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಮೈಸೂರು ಗ್ರಾಮಾಂತರ ವಿಭಾಗಕ್ಕೆ ಇದೇ ಮೊದಲ ಬಾರಿಗೆ 'ಪಲ್ಲಕ್ಕಿ' ಬ್ರಾಂಡ್‌ನ 9 ಹೊಸ ನಾನ್ ಎಸಿ ಸ್ಲೀಪರ್ ಕೋಚ್ ಬಸ್ ಸೇರ್ಪಡೆಯಾಗಿದ್ದು, ಆಕಸ್ಮಿಕ ಬೆಂಕಿ ಪತ್ತೆ ತಂತ್ರಜ್ಞಾನ ಹೊಂದಿರುವ ಈ ಬಸ್, ಸುರಕ್ಷಿತ ಪ್ರಯಾಣಕ್ಕೆ ಬೇಕಾದ ವ್ಯವಸ್ಥೆ ಹೊಂದಿವೆ.

ದೇಶದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 'ಪಲ್ಲಕ್ಕಿ' ಹೆಸರಿನ ಹೊಸ ಬ್ರಾಂಡ್‌ನಲ್ಲಿ ನಾನ್ ಎಸಿ ಸ್ಲೀಪರ್ ಬಸ್‌ಗಳನ್ನು ಪ್ರಯಾಣಿಕರ ಸೇವೆಗೆ ಪರಿಚಯಿಸಿದ್ದು, 'ಸಂತೋಷವು ಪ್ರಯಾಣಿಸುತ್ತದೆ' ಟ್ಯಾಗ್‌ನಲ್ಲಿ ಪಲ್ಲಕ್ಕಿ ಬಸ್ ಸೇವೆ ಆರಂಭಿಸಲು ಸಜ್ಜಾಗಿವೆ. ಮೈಸೂರು ಗ್ರಾಮಾಂತರ ವಿಭಾಗದ ಡಿಪೋ–2ಕ್ಕೆ ಒಟ್ಟು 10 ಪಲ್ಲಕ್ಕಿ ಬಸ್ ಕಳ್ಚಿಸಿದ್ದು, ಮಂಗಳವಾರ 9 ಬಸ್ ಬಂದಿದ್ದು, ಇನ್ನೊಂದು ಬಸ್ ಬುಧವಾರ ಬರಲಿದೆ. ಈಗಾಗಲೇ 9 ಬಸ್‌ಗಳಲ್ಲಿ 6 ಬಸ್‌ಗಳನ್ನು ಆರ್‌ಟಿಓ ಕಚೇರಿಯಲ್ಲಿ ನೋಂದಣಿ ಮಾಡಿಸಲಾಗಿದ್ದು, ಉಳಿದ ಮೂರು ಬಸ್‌ಗಳಿಗೆ ಇನ್ನು ನೋಂದಣಿ ಸಂಖ್ಯೆ ಬಂದಿಲ್ಲ ಒಂದೆರಡು ದಿನದಲ್ಲಿಯೇ ಉಳಿದ ಬಸ್‌ಗಳಿಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡು ಪ್ರಯಾಣಿಕರ ಸೇವೆಗೆ ಕಲ್ಪಿಸಲಾಗುತ್ತದೆ.

ಆರು ಬಸ್‌ನಿಂದ ಸೇವೆ ಆರಂಭ: ಈ ಪಲ್ಲಕ್ಕಿ ಬಸ್‌ಗಳಲ್ಲಿ ಎರಡು (ಕೆಎ.57, ಎಫ್.6661, ಕೆಎ.57, ಎಫ್.6662) ಕೊಟ್ಟಾಯಂಗೆ ಸಂಚರಿಸಲಿವೆ. ಇನ್ನೆರಡು (ಕೆಎ.57, ಎಫ್.6663, ಕೆಎ.57, ಎಫ್.6664) ಮಂತ್ರಾಲಯಕ್ಕೆ ಹಾಗೂ ಮತ್ತೆರಡು (ಕೆಎ.09,ಎಫ್ 5632, ಕೆಎ.09,ಎಫ್ 5633) ಯಲ್ಲಾಪುರಕ್ಕೆ ಪ್ರಯಾಣಿಸಲಿವೆ. ಉಳಿದ ನಾಲ್ಕು ಬಸ್‌ಗಳಿಗೆ ನೋಂದಣಿ ಸಂಖ್ಯೆ ಬಂದ ನಂತರ ಎರಡು ಬಸ್ ಕೊಲ್ಲೂರು, ಮತ್ತೆರಡು ವಿಜಯಪುರ (ಬಿಜಾಪುರ)ಕ್ಕೆ ವೇಳಾಪಟ್ಟಿ ನಿಗದಿಯಾಗಿದೆ.

ನೂತನ ತಂತ್ರಜ್ಞಾನ: ಇತ್ತೀಚಿನ ದಿನಗಳಲ್ಲಿ ದೇಶದ ವಿವಿಧೆಡೆ ಡಬ್ಬಲ್ ಡೆಕ್ಕರ್ ಸ್ಲೀಪರ್ ಬಸ್‌ಗಳಿಗೆ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿರುವ ಹಿನ್ನೆಲೆಯಲ್ಲಿ 'ಪಲ್ಲಕ್ಕಿ' ಸ್ಲೀಪರ್ ಬಸ್‌ನಲ್ಲಿ ಬೆಂಕಿ ಪತ್ತೆ ತಂತ್ರಜ್ಞಾನ ಅಳವಡಿಸಲಾಗಿದೆ. ಇಂಜಿನ್ ಭಾಗದಲ್ಲಿ ಬೆಂಕಿ ಅಥವಾ ಹೊಗೆ ಬಂದರೆ ಸ್ಟೇರಿಂಗ್ ಪಕ್ಕ ಕೆಂಪು ಲೈಟ್ ಆನ್ ಆಗಿ ಎಚ್ಚರಿಕೆ ಸಂದೇಶ ರವಾನಿಸಲಿದೆ. ಕೂಡಲೇ ಬಸ್ ಚಾಲಕ ಡ್ಯಾಶ್ ಬೋರ್ಡ್‌ನಲ್ಲಿರುವ ಆರು ಸ್ವಿಚ್ ಆನ್ ಮಾಡಿದರೆ ಬೆಂಕಿ ಬಿದ್ದ ಸ್ಥಳಕ್ಕೆ ನೀರು ಸಿಂಪಡಣೆ ಆಗಲಿದೆ. ಇದರಿಂದ ಬೆಂಕಿ ಪ್ರಕರಣ ಪತ್ತೆ ಮಾಡಿ, ಸಣ್ಣ ಪ್ರಮಾಣದಲ್ಲಿದ್ದಾಗಲೇ ಬೆಂಕಿ ನಂದಿಸುವ ವ್ಯವಸ್ಥೆ ಪಲ್ಲಕ್ಕಿ ಬಸ್‌ನಲ್ಲಿರುವುದು ವಿಶೇಷ.


ಬಸ್ ಒಳಗಿನ ದೃಶ್ಯ

ಆರಾಮದಾಯಕ ಚಾಲನೆ: ಪಲ್ಲಕ್ಕಿ ಬಸ್ ಚಾಲಕರು ಆರಾಮದಾಯಕವಾಗಿ ಬಸ್ ಚಾಲನೆ ಮಾಡಲು ಯೋಗ್ಯವಾದ ಸೀಟ್ ಅಳವಡಿಸಲಾಗಿದೆ. ಈ ಹಿಂದೆ ವೋಲ್ವೋ ಬಸ್‌ನಲ್ಲಿ ಇಂತಹ ಡ್ರೈವರ್ ಸೀಟ್ ಅಳವಡಿಸಲಾಗಿತ್ತು. ಇದೀಗ ಪಲ್ಲಕ್ಕಿ ಬಸ್‌ನಲ್ಲೂ ಆರಾಮದಾಯಕ ಚಾಲನೆಗೆ ಬೇಕಾದ ಸೀಟ್ ಅಳವಡಿಸಲಾಗಿದೆ. ಪ್ರಯಾಣಿಕರು ಮಲಗಿ ಸುಖಕರ ಪ್ರಯಾಣಕ್ಕೆ ಬೇಕಾದ ಹಾಸಿಗೆಯ ವ್ಯವಸ್ಥೆಯೂ ಇದೆ. ಪಿಲ್ಲೋ ಕಳುವಾಗಬಾರದೆಂದು ಈ ಬಾರಿ ಹಾಸಿಗೆಯಲ್ಲೇ ಪಿಲ್ಲೋ(ದಿಂಬು) ಅಳವಡಿಸಲಾಗಿದೆ. ಅಲ್ಲದೆ, ಪ್ರತಿ ಸೀಟ್ ಮಧ್ಯೆ ಪರದೆ ವ್ಯವಸ್ಥೆ ಮಾಡಲಾಗಿದೆ.

ಭದ್ರತೆಗಾಗಿ ಬಸ್‌ನಲ್ಲಿ ಮೂರು ಸಿಸಿ ಕ್ಯಾಮರ ಅಳವಡಿಸಲಾಗಿದೆ. ಒಂದು ಡ್ರೈವರ್ ಸೀಟ್ ಬಳಿ, ಮತ್ತೊಂದು ಬಸ್ ಒಳಗಿನ ದೃಶ್ಯ ಸೆರೆ ಹಿಡಿಯಲಿದೆ. ಇನ್ನೊಂದು ಡ್ಯಾಶ್ ಬೋರ್ಡ್‌ನಲ್ಲಿ ಅಳವಡಿಸಲಾಗಿದ್ದು, ರಸ್ತೆ ದೃಶ್ಯ ಸೆರೆ ಹಿಡಿಯಲಿದೆ. ತುರ್ತು ನಿರ್ಗಮನದ ಬಾಗಿಲು, ಸೇಫ್ಟಿ ಟೂಲ್ಸ್, ವಿಶಾಲವಾದ ಲಗೇಜ್ ಕೊಠಡಿಯೂ ಪಲ್ಲಕ್ಕಿ ಬಸ್‌ನಲ್ಲಿದೆ.

ಕೊಟ್ಟಾಯಂ, ಮಂತ್ರಾಲಯ, ಯಲ್ಲಾಪುರಕ್ಕೆ ಪಲ್ಲಕ್ಕಿ ವ್ಯವಸ್ಥೆ

"ಗ್ರಾಮಾಂತರ ವಿಭಾಗಕ್ಕೆ ಬಂದಿರುವ ಪಲ್ಲಕ್ಕಿ ಬ್ರಾಂಡ್ ನಾನ್ ಎಸಿ ಸ್ಲೀಪರ್ ಬಸ್‌ಗಳಲ್ಲಿ ಆರು ಬಸ್‌ಗಳು ತಲಾ ಎರಡರಂತೆ ಕೊಟ್ಟಾಯಂ, ಮಂತ್ರಾಲಯ, ಯಲ್ಲಾಪುರಕ್ಕೆ ಸೇವೆ ಆರಂಭಿಸಲಿವೆ. ಈಗಾಗಲೇ 9 ಹೊಸ ಬಸ್‌ಗಳು ಆಗಮಿಸಿದ್ದು ಇನ್ನೊಂದು ಬಸ್ ಬರಲಿದೆ. ಅದು ಬಂದ ನಂತರ ಮತ್ತೆರಡು ಮಾರ್ಗದಲ್ಲಿ ಸಂಚರಿಸಲಿದೆ. ಈ ಹೊಸ ಬಸ್‌ಗಳು ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ್ದು, ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

– ಬಿ.ಶ್ರೀನಿವಾಸ್,
ವಿಭಾಗೀಯ ನಿಯಂತ್ರಣಾಧಿಕಾರಿ

ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಬೂತ್ ಏಜೆಂಟ್ ನೇಮಕ; ಸಮಿತಿ ರಚನೆಗೆ ಸೂಚನೆ


ಚಾಮರಾಜ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಅಧ್ಯಕ್ಷರು, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾತನಾಡುತ್ತಿರುವುದು

ಮೈಸೂರು, ಏ.28(ಎಸ್‌ಪಿಎನ್)– ಚಾಮರಾಜ ವಿಧಾನಸಭಾ ಕ್ಷೇತ್ರದ 19 ವಾರ್ಡ್‌ಗಳ ವ್ಯಾಪ್ತಿಯಲ್ಲಿ ಬೂತ್ ಏಜೆಂಟ್ ನೇಮಕ ಹಾಗೂ 15 ಸದಸ್ಯರ ಬೂತ್ ಸಮಿತಿ ರಚನೆ ತ್ವರಿತವಾಗಿ ಆಗಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರು ಜಲದರ್ಶಿನಿಯ ಶಾಸಕರ ಕಚೇರಿಯಲ್ಲಿ ಚಾಮರಾಜ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಅಧ್ಯಕ್ಷರು, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸೂಚಿಸಿದ ಶಾಸಕರು, ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ಆಯೋಗ ಮತದಾರರ ಪಟ್ಟಿ ಪರಿಷ್ಕರಣೆ ಆರಂಭಿಸಿದೆ. ಈ ಸಮಯದಲ್ಲಿ ವಾರ್ಡ್ ಅಧ್ಯಕ್ಷರು, ಬೂತ್ ಏಜೆಂಟರು, ಬಿಎಲ್‌ಎ–2 ಅವರ ಕಾರ್ಯ ಚಟುವಟಿಕೆ ಬಹಳ ಅವಶ್ಯಕತೆ ಇದೆ ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷವನ್ನು ಬೂತ್‌ಮಟ್ಟದಲ್ಲಿ ಕಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕಾರ್ಯಕರ್ತರು ಸಂಘಟನೆಯಲ್ಲಿ ಸಕ್ರಿಯ ಆಗಬೇಕಿದೆ. ಅಲ್ಲದೆ ಪಕ್ಷ ಸಂಘಟನೆ ವಿಚಾರದಲ್ಲಿ ಯಾವುದೇ ಸಹಕಾರ ಕೇಳಿದರೂ ನಾನು ನೀಡಲು ಸಿದ್ಧ. ಹಾಗಾಗಿ ಬೂತ್ ಏಜೆಂಟರ ನೇಮಕಾತಿ, ಬೂತ್ ಮಟ್ಟದ ಸಮಿತಿ, ಮತದಾರರ ಡಿಲೀಟ್ ಅಥವಾ ಬೇರೆ ವಾರ್ಡ್‌ಗಳಿಗೆ ವರ್ಗಾಯಿಸುವ ಸಂಬಂಧ ನಿಗಾವಹಿಸಬೇಕು ಎಂದು ಮಾಹಿತಿ ನೀಡಿದರು.

ಮೈಸೂರು ನಗರ ಸಂಶೋಧನಾ ವಿಭಾಗದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ನಾಗರಾಜ್ ಸಂಘಟನೆ ವಿಚಾರವಾಗಿ ಮಾತನಾಡಿದರು. ಬಿಎಲ್‌ಎ–2 ಮೈಸೂರು ನಗರ ಉಸ್ತುವಾರಿ ನಗರ ಪಾಲಿಕೆ ಮಾಜಿ ಸದಸ್ಯ ಶೌಕತ್ ಪಾಷ ಅವರು, ಬೂತ್ ಮಟ್ಟದ ಸಂಘಟನೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ವೇಳೆ ಮೈಸೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾಲತಾ ಚಿಕ್ಕಣ್ಣ, ಮಾಜಿ ಮೇಯರ್ ಮೋದಾಮಣಿ, ಮಹಿಳಾ ಮುಖಂಡರಾದ ಸುಶೀಲಾ ಮರಿಗೌಡ, ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ನಾಗಭೂಷಣ್, ಕಾಂಗ್ರೆಸ್ ಮುಖಂಡ ರವಿ ಮಂಚೇಗೌಡನಕೊಪ್ಪಲು ಸೇರಿದಂತೆ ಇತರರಿದ್ದರು.

ಮೈಸೂರು–ಹುಣಸೂರು ಹೆದ್ದಾರಿಯಲ್ಲೊಂದು ಮೃತ್ಯುಕೂಪ

ವಾಲ್ಮೀಕಿ ರಸ್ತೆ ಜಂಕ್ಷನ್‌ನ ಹೊಂಡ ಮುಚ್ಚುವಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

ಮೈಸೂರು, ಏ.28– ಹೆದ್ದಾರಿಯಲ್ಲಿ ಅಪಾಯಕಾರಿ ಹೊಂಡ ಬಿದ್ದು ತಿಂಗಳಾದರೂ ಮೈಸೂರು ಮಹಾನಗರ ಪಾಲಿಕೆ ದುರಸ್ತಿ ಮಾಡದೆ ದಿವ್ಯ ನಿರ್ಲಕ್ಷ್ಯ ತಳೆದಿದೆ ಎಂದು ಸಾರ್ವಜನಿಕರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರು–ಹುಣಸೂರು ಹೆದ್ದಾರಿ ಹಾಗೂ ವಾಲ್ಮೀಕಿ ರಸ್ತೆ ಜಂಕ್ಷನ್‌ನಲ್ಲಿ ರಸ್ತೆ ಕುಸಿದು ದೊಡ್ಡ ಹೊಂಡ ನಿರ್ಮಾಣವಾಗಿದೆ. ಪೆಟ್ರೋಲ್ ಬಂಕ್ ಬಳಿ ವಾಲ್ಮೀಕಿ ರಸ್ತೆಗೆ ತಿರುವು ಪಡೆಯುವ ಸ್ಥಳದಲ್ಲಿರುವ ಈ ಅಪಾಯಕಾರಿ ಹೊಂಡ ಯಾವಾಗ ಆಹುತಿ ಪಡೆಯುವುದೋ ದೇವರೇ ಬಲ್ಲ. ನಿಮಿಷದಲ್ಲಿ ನೂರಾರು ವಾಹನಗಳು ಸಂಚರಿಸುವ ಹೆದ್ದಾರಿಯಾಗಿದ್ದರೂ ಪಾಲಿಕೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಕಿಡಿಕಾರಿದ್ದಾರೆ.

ತಿಂಗಳ ಹಿಂದೆ ಗುಂಡಿ ಬಿದ್ದು, ದಿನ ಕಳೆದಂತೆ ದೊಡ್ಡ ಹೊಂಡವಾಗಿದೆ. ಸಂಚಾರ ಪೊಲೀಸರು ಹೊಂಡದ ಸುತ್ತಲೂ ಬ್ಯಾರಿಕೇಡ್ ಅಳವಡಿಸಿ, ಅಪಾಯ ತಪ್ಪಿಸಿದ್ದಾರೆ. ಆದರೆ ಪಡುವಾರಹಳ್ಳಿ ಸಿಗ್ನಲ್ ಕಡೆಯಿಂದ ಬಂದು ವಾಲ್ಮೀಕಿ ರಸ್ತೆಗೆ ತಿರುವು ಪಡೆಯುವ ವಾಹನಗಳಿಗೆ ಇದರಿಂದ ಅಡ್ಡಿಯಾಗುತ್ತಿದೆ. ಹತ್ತಿರಕ್ಕೆ ಬಂದು ತಕ್ಷಣ ನಿಧಾನಗೊಳಿಸಿದರೆ ಹಿಂದಿನ ವಾಹನ ಡಿಕ್ಕಿ ಹೊಡೆಯಬಹುದು ಇಲ್ಲವೇ ವೇಗವಾಗಿ ತಿರುವು ಪಡೆದರೆ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದು ಹೊಂಡದಲ್ಲಿ ಸಿಲುಕಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.


ಮೈಸೂರು–ಹುಣಸೂರು ರಸ್ತೆಯಲ್ಲಿನ ವಾಲ್ಮೀಕಿ ರಸ್ತೆ ಜಂಕ್ಷನ್‌ನಲ್ಲಿರುವ ಅಪಾಯಕಾರಿ ಹೊಂಡ.

ಈ ಜಂಕ್ಷನ್‌ನಿಂದ ನೂರು–ಇನ್ನೂರು ಮೀಟರ್ ದೂರದಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರ ಕಚೇರಿಗಳಿರುವ ಜಲದರ್ಶಿನಿ ಅತಿಥಿಗೃಹ, ಜಿಲ್ಲಾಧಿಕಾರಿಗಳ ನಿವಾಸ, ಜಿಪಂ ಸಿಇಓ ನಿವಾಸ, ಪ್ರಾದೇಶಿಕ ಆಯುಕ್ತರ ಕಚೇರಿಗಳಿವೆ. ಇದೇ ಹೊಂಡದ ಪಕ್ಕದಲ್ಲೇ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಾಹನಗಳು ಹಾದು ಹೋಗುತ್ತವೆ. ಆದರೆ ಯಾರೊಬ್ಬರೂ ಸಾರ್ವಜನಿಕರಿಗೆ ಕಂಟಕವಾಗಿರುವ ಹೊಂಡದತ್ತ ದೃಷ್ಟಿ ಹಾಯಿಸಿಲ್ಲ. ಈಗಲಾದರೂ ಹೆದ್ದಾರಿ ಹೊಂಡವನ್ನು ಮುಚ್ಚಿ, ಡಾಂಬರ್ ಹಾಕಿ ಸುಗಮ–ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ ಆಗ್ರಹಿಸಿದ್ದಾರೆ.

ಶುದ್ಧ ಕುಡಿಯುವ ನೀರಿನ ಪೂರೈಕೆ ಖಾತರಿಪಡಿಸಿಕೊಳ್ಳಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಸೂಚನೆ



ಮೈಸೂರು, ಏ.28– ಕುಡಿಯುವ ನೀರು ಕಲುಷಿತವಾದಲ್ಲಿ ಹಲವಾರು ಸಾಂಕ್ರಾಮಿಕ ರೋಗ ಹರಡುವ ಅಪಾಯವಿದ್ದು, ಕುಡಿಯುವ ನೀರಿನ ಪರಿಶೀಲನೆಯ ಬಗ್ಗೆ ಹೆಚ್ಚು ನಿಗಾ ವಹಿಸಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಿಷನ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕುಡಿಯುವ ನೀರಿನ ಮಾದರಿಯನ್ನು ಪರಿಶೀಲನೆಗೆ ಒಳಪಡಿಸಿದಾಗ ಫಲಿತಾಂಶ ತೃಪ್ತಿಕರವಾಗಿಲ್ಲ ಎಂದು ಕಂಡುಬಂದಲ್ಲಿ, ಸೂಕ್ತಕ್ರಮ ಕೈಗೊಂಡು ನಂತರ ಅದೇ ಸ್ಥಳದಲ್ಲಿ ಪುನ: ಕುಡಿಯುವ ನೀರಿನ ಮಾದರಿಯನ್ನು ಪರಿಶೀಲಿಸಿ, ಯೋಗ್ಯವಾದ ಕುಡಿಯುವ ನೀರು ಸರಬರಾಜಾಗುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು ಎಂದರು.

ಕೋಟ್ಪಾ ಕಾಯ್ದೆಯಡಿ ದಾಳಿ ನಡೆಸಿ ಸೆಕ್ಷನ್ 4ರಡಿ ಏಪ್ರಿಲ್ 2025 ರಿಂದ 2026 ರವರಗೆ 2,98,400 ರೂ. ದಂಡ ಸಂಗ್ರಹಿಸಲಾಗಿದೆ. ಹುಕ್ಕವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಇದು ಕಂಡುಬಂದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ನಿರ್ದೇಶನ ನೀಡಿದರು.

ಮಕ್ಕಳಿಗೆ ನೀಡಲಾಗುವ ಲಸಿಕೆ ಹಾಗೂ ಇನ್ನಿತರೆ ಮಾಹಿತಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾರು ನಿಗದಿತ ಅವಧಿಯಲ್ಲಿ ನೀಡಲಾಗಿರುವ ಆಪ್‌ಗಳಲ್ಲಿ ಅಪ್‌ಡೇಟ್ ಆಗಬೇಕು. ಇಲ್ಲವಾದಲ್ಲಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ರಾಷ್ಟ್ರೀಯ ಬಾಲ ಸ್ವಸ್ಥ್ಯ ಕಾರ್ಯಕ್ರಮ ಯೋಜನೆಯಡಿ ಮಕ್ಕಳ ಸ್ಕ್ರೀನಿಂಗ್ ನಡೆದ ನಂತರ ಅವರಿಗೆ ಬೇಕಿರುವ ಚಿಕಿತ್ಸೆ ಪಡೆದಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಿ, ಅಪೌಷ್ಟಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆ ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಹೆಚ್ಚಿದ್ದು, ಇಲ್ಲಿ ತೀವ್ರ ನಿಗಾ ವಹಿಸಿ ಎಂದರು.

ವೈದ್ಯಕೀಯ ತ್ಯಾಜ್ಯ ವಸ್ತುಗಳ ವಿಲೇವಾರಿ ಕುರಿತಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಹಂತದಲ್ಲೇ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲಾ ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಸಿರಾಜ್ ಅಹಮದ್, ಡಾ.ಗೋಪಿನಾಥ್, ಡಾ.ನಾಗರಾಜ್, ಡಾ.ಬೃಂದ, ಡಾ.ಸುವರ್ಣ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಗುಜರಾತ್ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಪ್ರಾಬಲ್ಯ; ಕಾಂಗ್ರೆಸ್, ಆಪ್‌ಗೆ ಶಾಕ್

ಅಹ್ಮದಾಬಾದ್: ಗುಜರಾತ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮತ ಎಣಿಕೆ ನಡೆಯುತ್ತಿದ್ದು, ಎಣಿಕೆಯ ಆರಂಭಿಕ ಸುತ್ತಿನ ಪ್ರಕಾರ, ಭಾರತೀಯ ಜನತಾ ಪಕ್ಷ (ಬಿಜೆಪಿ) 9,200ಕ್ಕೂ ಹೆಚ್ಚು ಸ್ಥಾನಗಳ ಪೈಕಿ ಇದುವರೆಗೆ 3,750 ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಮುನ್ನಡೆ ಸಾಧಿಸಿದೆ.

ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಬಿಜೆಪಿ 410 ಸ್ಥಾನಗಳನ್ನು ಗೆದ್ದಿದೆ, ನಂತರ ಕಾಂಗ್ರೆಸ್ 20 ಸ್ಥಾನಗಳನ್ನು ಗೆದ್ದಿದ್ದರೆ, ಇತರರು 4 ಸ್ಥಾನಗಳನ್ನು ಗಳಿಸಿದ್ದಾರೆ. ಪುರಸಭೆಗಳಲ್ಲಿ, ಬಿಜೆಪಿ 1,105 ಸ್ಥಾನಗಳನ್ನು ಗಳಿಸಿದೆ, ಆದರೆ ಕಾಂಗ್ರೆಸ್ 192 ಸ್ಥಾನಗಳನ್ನು ಮತ್ತು ಇತರರು 1,158 ಸ್ಥಾನಗಳನ್ನು ಗೆದ್ದಿದೆ.

ಜಿಲ್ಲಾ ಪಂಚಾಯತ್‌ಗಳಲ್ಲಿ, ಬಿಜೆಪಿ 439 ಸ್ಥಾನಗಳನ್ನು ಗೆದ್ದಿದೆ, ಕಾಂಗ್ರೆಸ್ 55 ಸ್ಥಾನಗಳನ್ನು ಪಡೆದರೆ, ಇತರರು 20 ಸ್ಥಾನಗಳನ್ನು ಗೆದ್ದಿದ್ದಾರೆ. ತಾಲೂಕು ಪಂಚಾಯತ್‌ಗಳಲ್ಲಿ, ಬಿಜೆಪಿ 1,803 ಸ್ಥಾನಗಳೊಂದಿಗೆ ಮುಂದಿದೆ, ನಂತರ ಕಾಂಗ್ರೆಸ್ 409 ಸ್ಥಾನಗಳೊಂದಿಗೆ ಮತ್ತು ಆಮ್ ಆದ್ಮಿ ಪಕ್ಷ ಸೇರಿದಂತೆ ಇತರರು 194 ಸ್ಥಾನಗಳೊಂದಿಗೆ ಮುಂದಿದ್ದಾರೆ.


ಗುಜರಾತ್ ಗೋಧ್ರಾ ವಾರ್ಡ್ ವಿಜೇತರಾದ ಅಪೇಕ್ಷಾಬೆನ್ ಸೋನಿ

ಈ ಚುನಾವಣೆಗಳು 15 ಪುರಸಭೆ ನಿಗಮಗಳು, 84 ಪುರಸಭೆಗಳು, 34 ಜಿಲ್ಲಾ ಪಂಚಾಯತ್‌ಗಳು ಮತ್ತು 260 ತಾಲೂಕು ಪಂಚಾಯತ್‌ಗಳನ್ನು ಒಳಗೊಂಡಿವೆ. ಬಿಜೆಪಿ, ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷ ಸೇರಿದಂತೆ ಪ್ರಮುಖ ಪಕ್ಷಗಳು ಮತ್ತು ಸ್ವತಂತ್ರ ಅಭ್ಯರ್ಥಿಗಳು ಸ್ಪರ್ಧಿಸಿದ ಈ ಚುನಾವಣೆಯನ್ನು ತಳಮಟ್ಟದಲ್ಲಿ ರಾಜಕೀಯ ಬಲದ ಪ್ರಮುಖ ಸೂಚಕವೆಂದು ಪರಿಗಣಿಸಲಾಗುತ್ತಿದೆ.

ಪಂಜಾಬ್ ಕಿಂಗ್ಸ್ ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಹಾಕಿದ ರಾಜಸ್ಥಾನ್ ರಾಯಲ್ಸ್



ರಾಜಸ್ಥಾನ್ ರಾಯಲ್ಸ್ ತಂಡದ ಆಟಗಾರರ ಸಂಭ್ರಮ.

ನ್ಯೂ ಚಂಡೀಗಢ, ಏ.28(ವಿವಿಹೆಚ್)– ತಂಡದ ಸಾಂಘಿಕ ಹೋರಾಟದ ಫಲವಾಗಿ ಬಲಿಷ್ಠ ಪಂಜಾಬ್ ಕಿಂಗ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದ ರಾಜಸ್ಥಾನ್ ರಾಯಲ್ಸ್, ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಹಾಕಿದೆ. ಇತ್ತ ಒಂದು ಪಂದ್ಯವನ್ನು ಸೋತಿದ್ದರು 13 ಅಂಕಗಳೊಂದಿಗೆ ಪಂಜಾಬ್ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಇಲ್ಲಿನ ಮುಲ್ಲನ್‌ಪುರ್ ಮಹಾರಾಜ ಯದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ 40ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್‌ಗೆ ಪ್ರಿಯಾನ್ಸ್ ಆರ್ಯ 29(11), ಹಾಗೂ ಪ್ರಭ್‌ಸಿಮ್ರಾನ್ ಸಿಂಗ್ (59ರನ್, 44ಎ, 6ಬೌ, 1ಸಿ) ಉತ್ತಮ ಆರಂಭ ಒದಗಿಸಿಕೊಟ್ಟರು.

ಆರ್ಯ ವಿಕೆಟ್ ಬೀಳುತ್ತಿದ್ದಂತೆ ಕ್ರೀಸ್‌ಗಿಳಿದ ಕೂಪರ್ ಕೊನೊಲಿ ಕೇವಲ 14 ಎಸೆತಗಳಲ್ಲಿ 34ರನ್ ಚಚ್ಚಿ ನಿರ್ಗಮಿಸಿದರು. ಈ ವೇಳೆ ಮಂದಗತಿಯ ಬ್ಯಾಟಿಂಗ್ ಮಾಡಿದ ನಾಯಕ ಶ್ರೇಯಸ್ ಅಯ್ಯರ್ 27 ಎಸೆತಗಳಲ್ಲಿ 30 ರನ್ ಬಾರಿಸಿ, ಸ್ಟೋಯ್ನಿಸ್‌ಗೆ ಬೆಂಬಲಿಸಿದರು.

ಇತ್ತ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಮಾರ್ಕ್ಸ್ ಸ್ಟೋಯ್ನಿಸ್ ಕೇವಲ 22 ಎಸೆತಗಳಲ್ಲಿ 4 ಬೌಂಡರಿ ಹಾಗೂ 6 ಭರ್ಜರಿ ಸಿಕ್ಸರ್‌ಗಳ ಸಹಾಯದಿಂದ 62 ರನ್ ಗಳಿಸಿ ಅಜೇಯರಾಗಿ ಉಳಿದರು. ಸೂರ್ಯಾಂಶ್ 3ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು. ಆ ಮೂಲಕ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 222 ರನ್ ಕಲೆಹಾಕಿತು.

ರಾಜಸ್ಥಾನ್ ಪರ ಯಶ್ ರಾಜ್ ಪುಂಜಾ 2 ವಿಕೆಟ್, ಜೋಫ್ರಾ ಆರ್ಚರ್ ಹಾಗೂ ನಾಂಡ್ರೆ ಬರ್ಗರ್ ತಲಾ ಒಂದೊಂದು ವಿಕೆಟ್ ಪಡೆದರು.

ಪಂಜಾಬ್ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ರಾಜಸ್ಥಾನ್‌ಗೆ ಆರಂಭಿಕ ಬ್ಯಾಟರ್‌ಗಳಾದ ವೈಭವ್ ಸೂರ್ಯವಂಶಿ ಹಾಗೂ ಯಶಸ್ವಿ ಜೈಸ್ವಾಲ್ ಭರ್ಜರಿ ಆರಂಭ ಒದಗಿಸಿದರು. ಸೂರ್ಯವಂಶಿ 16 ಎಸೆತಗಳಲ್ಲಿ 3ಬೌಂಡರಿ, 5 ಸಿಕ್ಸರ್ ಸಹಿತ 43 ರನ್ ಬಾರಿಸಿದರೆ, ಜೈಸ್ವಾಲ್ 27 ಎಸೆತಗಳಲ್ಲಿ 7 ಬೌಂಡರಿ ಹಾಗೂ 1 ಸಿಕ್ಸರ್ ನೆರವಿನಿಂದ 51 ರನ್ ಕಲೆಹಾಕಿ ಔಟಾದರು.

ಧ್ರುವ್ ಜುರೇಲ್ 16(20), ನಾಯಕ ರಿಯಾನ್ ಪರಾಗ್ 29(16) ಅಲ್ಪ ಹೋರಾಟ ನೀಡಿದ ಪೆವಿಲಿಯನ್ ಸೇರಿದರು. ಈ ವೇಳೆ ಒಂದಾದ ಡೊನೊವನ್ ಫೆರಿರಾ ಹಾಗೂ ಶುಭಂ ದುಬೆ ಗೆಲುವಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದರು. ಫೆರಿರಾ 26 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 52ರನ್ ಗಳಿಸಿದರೆ, ಶುಭಂ ದುಬೆ 12 ಎಸೆತಗಳಲ್ಲಿ ಅಜೇಯ 31 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಅಂತಿಮವಾಗಿ ರಾಯಲ್ಸ್ 19.2 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 228 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಪಂಜಾಬ್ ಪರ ಯುಜ್ವೇಂದರ್ ಚಾಹಲ್ 3 ವಿಕೆಟ್, ಅರ್ಶ್‌ದೀಪ್ ಸಿಂಗ್ ಒಂದು ವಿಕೆಟ್ ಕಿತ್ತರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 29 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 14 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಒಳಮೀಸಲಾತಿ ಜಾರಿಗೊಳಿಸಿ ಸರ್ಕಾರ ಆದೇಶ

ನೇಮಕಾತಿಗೂ ಗ್ರೀನ್ ಸಿಗ್ನಲ್

ಬೆಂಗಳೂರು: ಪರಿಶಿಷ್ಟ ಜಾತಿಗೆ ಲಭ್ಯವಿದ್ದ ಶೇ.15 ಮೀಸಲಾತಿಯಲ್ಲಿ ಪ್ರವರ್ಗ 'ಎ' (ಎಡಗೈ ಸಂಬಂಧಿತ ಜಾತಿಗಳು), ಪ್ರವರ್ಗ 'ಬಿ' (ಬಲಗೈ ಸಂಬಂಧಿತ ಜಾತಿಗಳು) ಮತ್ತು ಪ್ರವರ್ಗ 'ಸಿ'ಗೆ (ಅಸ್ಪೃಶ್ಯ, ಅತಿ ಸೂಕ್ಷ್ಮ, ಸೂಕ್ಷ್ಮ ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ 5.25, 5.25, 4.50 ಪ್ರಮಾಣದಲ್ಲಿ ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ. ಆ ಬೆನ್ನಲ್ಲೆ, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿರುವ 56,432 ಹುದ್ದೆಗಳ ನೇರ ನೇಮಕಾತಿಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆಯನ್ನೂ ನೀಡಿದೆ. ಪ್ರವರ್ಗ 'ಸಿ'ಗೆ ಲಭ್ಯವಾಗುವ ಹುದ್ದೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಾತಿ ಸೀಟುಗಳಲ್ಲಿ ಶೇ.20ರಷ್ಟನ್ನು ಪರಿಶಿಷ್ಟ ಜಾತಿಗಳಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಲಾಗುವುದು. ಒಂದೊಮ್ಮೆ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದೇ ಇದ್ದರೆ, ಆ ಹುದ್ದೆಗಳನ್ನು ಹಾಗೂ ಪ್ರವೇಶಾತಿ ಸೀಟುಗಳನ್ನು ಪ್ರವರ್ಗ 'ಸಿ'ಯಲ್ಲಿರುವ ಇತರೆ ಜಾತಿಗಳಿಗೆ ನೀಡಲಾಗುವುದು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ನೇಮಕಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು 400 ರೋಸ್ಟರ್ ಬಿಂದುಗಳ ವರ್ತುಲಗಳನ್ನು ಪಾಲಿಸಲಾಗುವುದು. ಯಾವುದೇ ವೃಂದಲ್ಲಿ ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದುಗಳು ಮೂರಕ್ಕಿಂತ ▶ 6ನೇ ಪುಟಕ್ಕೆ

8 ಸಾವಿರ ಕಾನ್‌ಸ್ಟೇಬಲ್ ನೇಮಕಕ್ಕೆ ವಾರದಲ್ಲಿ ಅಧಿಸೂಚನೆ

ಕಲಬುರಗಿ: ಒಳಮೀಸಲಾತಿ ವಿವಾದ ಬಗೆಹರಿದಿರುವುದರಿಂದ ಒಂದು ವಾರದಲ್ಲಿ 8 ಸಾವಿರ ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 545 ಪಿಎಸ್‌ಐಗಳು ಇಲಾಖೆಗೆ ಸೇರ್ಪಡೆಯಾಗಿದ್ದು, ಹೊಸದಾಗಿ 600 ಪಿಎಸ್‌ಐಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಖಾಲಿ ಇರುವ ಹುದ್ದೆಗಳ ಪೈಕಿ 8 ಸಾವಿರ ಕಾನ್‌ಸ್ಟೇಬಲ್‌ಗಳ ನೇಮಕಾತಿ ಶೀಘ್ರವೇ ನಡೆಯಲಿದೆ. 56,834 ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದಾಗಿ ಈಗಾಗಲೇ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ಅದರಲ್ಲಿ ಕಾನ್‌ಸ್ಟೇಬಲ್ ಹುದ್ದೆಗಳೂ ಸೇರಿವೆ ಎಂದರು.

ಮೇ 15ಕ್ಕೆ ಡಿ.ಕೆ.ಶಿವಕುಮಾರ್ ಸಿಎಂ ಆಗ್ತಾರೆ!

■ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅಂತಿಮ ದಿನಾಂಕ ಘೋಷಣೆ ■ ಅಂದೇ ಸಂಪುಟ ಪುನರ್ರಚನೆ; ನಾರಾಯಣಸ್ವಾಮಿ

ಬೆಂಗಳೂರು,ಏ.28(ಕೆಎಂಶಿ)–ಸಿದ್ದರಾಮಯ್ಯ ಅವರ ಪರ ದಲಿತ ಸಚಿವರು, ದೆಹಲಿಯಲ್ಲಿ ಲಾಬಿ ನಡೆಸುತ್ತಿದ್ದರೆ, ಇತ್ತ ರಾಮನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೇ 15ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಹೇಳಿ ಕುತೂಹಲ ಕೆರಳಿಸಿದ್ದಾರೆ.

ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಖಚಿತ. ಇನ್ನೂ ಹೊಸ ದಿನಾಂಕ ಕೊಡುವುದಿಲ್ಲ. ಮೇ 15 ಅಂತಿಮ ಎಂದು ಸ್ಪಷ್ಟಪಡಿಸಿದ್ದಾರೆ. ಸಿದ್ದರಾಮಯ್ಯ ಅವರ ಪರ ದಲಿತ ಸಮುದಾಯಕ್ಕೆ ಸೇರಿದ ಸಚಿವರು ಏನೇ ಲಾಬಿ ಮಾಡಿದರು. ಶಿವಕುಮಾರ್ ಮಾಡಿರುವ ಕೆಲಸಕ್ಕೆ ಎಐಸಿಸಿ ನಾಯಕರು ಮೇ ತಿಂಗಳಲ್ಲೇ ಕೂಲಿ ಕೊಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಇಕ್ಬಾಲ್ ಹುಸೇನ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೆ ನಾನು ಅನೇಕ ಬಾರಿ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆಂದು ದಿನಾಂಕಗಳನ್ನು ತಿಳಿಸಿದ್ದೆ. ಆದರೆ, ಇವತ್ತು ನೀಡಿರುವ ನನ್ನ ಹೇಳಿಕೆಗೆ ಬದ್ಧ ಹಾಗೂ ಅಂತಿಮ ಎಂದಿದ್ದಾರೆ.

ಸಂಪುಟ ಪುನರ್ರಚನೆ: ಮತ್ತೊಂದೆಡೆ ಮುಖ್ಯಮಂತ್ರಿಗಳ ಆಪ್ತ ಬಣದಲ್ಲಿರುವ ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ ಮೇ 15ಕ್ಕೆ ಸಂಪುಟ ಪುನರ್ ರಚನೆ ಆಗಲಿದೆ ಎಂದಿದ್ದಾರೆ. ನಾವೊಂದಷ್ಟು ಹಿರಿಯ ಶಾಸಕರು ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದಾಗ ದೊಡ್ಡ ಪ್ರಮಾಣದಲ್ಲಿ ಸಂಪುಟ ಸರ್ಜರಿ ಆಗಲಿದೆ. ನಿಮ್ಮಲ್ಲಿ ಕೆಲವರಿಗೆ ಅವಕಾಶ ದೊರೆಯಲಿದೆ ಎಂಬ ಭರವಸೆಯನ್ನು ಖರ್ಗೆ ಅವರೇ ನೀಡಿದ್ದಾರೆ ಎಂದರು.



ನಾರಾಯಣಸ್ವಾಮಿ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023ರಲ್ಲಿ ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲೇ ಸಚಿವರಿಗೆ 30 ತಿಂಗಳಷ್ಟೇ ಅವಕಾಶ ಎಂಬ ಒಪ್ಪಂದವಾಗಿತ್ತು. ಇದೀಗ ಅವರ ಅವಧಿ ಮುಗಿದಿದೆ. ಅವಧಿ ಮುಗಿದಿರುವವರ ಬದಲಾಗಿ ನಮಗೆ ಸಚಿವ ಸ್ಥಾನ ನೀಡಬೇಕು ಎಂದರು.



ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮುನಿಯಪ್ಪ–ಖರ್ಗೆ ಮಾತುಕತೆ

ಮತ್ತೊಂದೆಡೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್‌ರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದ್ದಾರೆ.

ಇಂದು ಪರಮೇಶ್ವರ್ ದೆಹಲಿಗೆ

ಗೃಹ ಸಚಿವ ಡಾ.ಜಿ.ಪರಮೇಶ್ವರ್, ನಾಳೆ ದೆಹಲಿಗೆ ಪ್ರವಾಸ ಕೈಗೊಳ್ಳುತ್ತಿದ್ದು, ಅವರು ಸಹ ಇದೇ ವಿಚಾರದಲ್ಲಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲಿದ್ದಾರಂತೆ.

ಮೇ ಮಧ್ಯ ಭಾಗದ ವೇಳೆಗೆ ನಾಯಕತ್ವ ಬದಲಾವಣೆ ಆಗಬಹುದು ಎಂಬ ಮಾಹಿತಿ ಹಿನ್ನೆಲೆಯಲ್ಲಿ ದಲಿತ ಸಮುದಾಯಕ್ಕೆ ಸೇರಿದ ಸಚಿವರು ದೆಹಲಿಯಲ್ಲಿ ಬಿರುಸಿನ ಲಾಬಿ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ಪದತ್ಯಾಗಕ್ಕೂ ಸಿದ್ಧ ಇಲ್ಲ ಮುಂದುವರೆಯುವುದಕ್ಕೂ ಸಿದ್ಧ; ರಾಹುಲ್ ಗಾಂಧಿ ತೀರ್ಮಾನಕ್ಕೆ ಬದ್ಧ

● ಮಾಜಿ ಸಚಿವ, ಸಿದ್ದರಾಮಯ್ಯರ ಅತ್ಯಾಪ್ತ ಕೆ.ಎನ್.ರಾಜಣ್ಣ ಅಚ್ಚರಿ ಹೇಳಿಕೆ ● 2013ರಿಂದ 18ರವರೆಗೆ ಇದ್ದ ಸಿದ್ದರಾಮಯ್ಯ ಈಗಿಲ್ಲ!

ಬೆಂಗಳೂರು: ಸಿದ್ದರಾಮಯ್ಯ ಅಧಿಕಾರ ಮುಂದುವರಿಕೆ ಇಲ್ಲ ಪದತ್ಯಾಗಕ್ಕೂ ಸಿದ್ಧರಿದ್ದಾರೆ. ಒಟ್ಟಾರೆ ರಾಹುಲ್ ಗಾಂಧಿ ಸೂಚನೆ ಪಾಲಿಸಲು ಬದ್ಧರಾಗಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.



ಕೆ.ಎನ್.ರಾಜಣ್ಣ

ಬೆಂಗಳೂರಿನಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ತಮ್ಮದೇ ಶೈಲಿಯಲ್ಲಿ ಮಹತ್ವದ ಮಾಹಿತಿ ಹಂಚಿಕೊಂಡರು.

ಸಿಎಂ ಜೊತೆಗೆ ಸಭೆ ಮಾಡಿದಾಗಲೂ ಓಪನ್ ಮೈಂಡ್‌ನಲ್ಲಿ ಇದ್ದಾರೆ. ರಾಹುಲ್ ಗಾಂಧಿ ಸೂಚನೆ ಪಾಲನೆ ಮಾಡುತ್ತೇನೆ. ಆಗಲೂ ನಿಮ್ಮೆಲ್ಲರ ಸಹಕಾರ ಇರಬೇಕು ಎಂಬುದು ಅವರ ಅಭಿಮತವಾಗಿದೆ. ರಾಹುಲ್ ಗಾಂಧಿ ಏನು ತೀರ್ಮಾನ ಕೊಡುತ್ತಾರೋ ಅದರಂತೆ ನಡೆಯೋಣ ಎಂದಿದ್ದಾರೆ ಎಂದರು.

ಅಧಿಕಾರ ಶಾಶ್ವತವಲ್ಲ, ಅಧಿಕಾರ ಕಳೆದುಕೊಂಡವರು ಗಳಿಸುತ್ತಾರೆ. ಸಿಎಂ ಮನಸ್ಥಿತಿ ರಾಹುಲ್ ನಿರ್ದೇಶನದಂತೆ ಹೋಗಬೇಕು ಎಂಬುದು. ಸಿದ್ದರಾಮಯ್ಯರನ್ನು ಮುಂದುವರಿಸಬೇಕು ಎಂಬ ಬಗ್ಗೆ ನಮ್ಮ ನಮ್ಮ ಅಭಿಪ್ರಾಯಗಳನ್ನು ನಾವೆಲ್ಲ ಹೈಕಮಾಂಡ್‌ಗೆ ಹೇಳಿದ್ದೇವೆ. ಹಾಗೆಯೇ ದಲಿತ ಸಿಎಂ ಆಗಬೇಕು ಎಂಬುದಕ್ಕೆ ನಾವು ಈಗಲೂ ಬದ್ಧರಿದ್ದೇವೆ ಎಂದರು.

ಗೊಂದಲ ಬಗೆಹರಿಸಬೇಕು: ಅಧಿಕಾರ ಹಸ್ತಾಂತರ ವಿಚಾರವಾಗಿ ಉಂಟಾಗಿರುವ ಗೊಂದಲವನ್ನು ಬಗೆಹರಿಸಿದಷ್ಟು ರಾಜ್ಯಕ್ಕೆ ಒಳ್ಳೆಯದು. ಗೊಂದಲ ಮುಂದುವರಿಯಲು ಹೈಕಮಾಂಡ್ ಅವಕಾಶ ನೀಡಬಾರದು. ಹೈಕಮಾಂಡ್ ಏನು ಹೇಳುತ್ತದೆಯೋ ಅದಕ್ಕೆ ಸಿಎಂ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಇದು ಆತುರದಲ್ಲಿ ತೆಗೆದುಕೊಳ್ಳುವ ನಿರ್ಧಾರ ಅಲ್ಲ. ಪಕ್ಷದ ಭವಿಷ್ಯ ಆ ಒಂದು ನಿರ್ಧಾರದಲ್ಲಿ ಅಡಗಿರುತ್ತದೆ.

ಸಿದ್ದರಾಮಯ್ಯ ಪರ ಬ್ಯಾಟಿಂಗ್

ಈ ನಡುವೆ ದೆಹಲಿಯಲ್ಲೇ ಬಿಡಾರ ಹೂಡಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಸತೀಶ್ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪ್ರಮುಖ ನಾಯಕರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅವರ ಬದಲಾವಣೆ ಬೇಡ ಎಂದು ಮನವಿ ಮಾಡಿಕೊಂಡಿದ್ದಾರೆ.

ಬದಲಾವಣೆ ಅನಿವಾರ್ಯವಾದರೆ ಅವರು ಹೇಳಿದವರ ಸಿಎಂ ಮಾಡಿ: ಒಂದು ವೇಳೆ ನಾಯಕತ್ವ ಬದಲಾವಣೆ ಮಾಡುವುದೇ ಆದರೆ, ಸಿದ್ದರಾಮಯ್ಯ ಅವರು ಹೇಳಿದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕು. ಅದಾಗದಿದ್ದರೆ, ಸರ್ಕಾರ ಅಸ್ಥಿರಗೊಳ್ಳುವುದನ್ನು ತಳ್ಳಿ ಹಾಕುವಂತಿಲ್ಲ ಎಂಬ ಎಚ್ಚರಿಕೆ ನೀಡಿದ್ದಾರೆ. ಅಧಿಕಾರ ಹಸ್ತಾಂತರ ಗೊಂದಲದಿಂದ ಅಧಿಕಾರಿಗಳು ಯಾವ ಸಚಿವರ ಮಾತನ್ನು ಕೇಳುತ್ತಿಲ್ಲ. ಆಡಳಿತ ನಮ್ಮ ಹಿಡಿತ ತಪ್ಪಿದೆ. ತಕ್ಷಣವೇ, ಈ ಗೊಂದಲಕ್ಕೆ ತಿಲಾಂಜಲಿ ನೀಡಿ ಹಳಿ ತಪ್ಪಿರುವ ಆಡಳಿತವನ್ನು ಸರಿಪಡಿಸುವ ಜವಾಬ್ದಾರಿ ನಿಮ್ಮದು ಎಂದು ವರಿಷ್ಠರ ಬಳಿ ಸಚಿವದ್ವಯರು ರಾಜ್ಯದ ಪರಿಸ್ಥಿಯನ್ನು ವಿವರಿಸಿದ್ದಾರೆ.

ಹೀಗಾಗಿ ಸೂಕ್ತ ನಿರ್ಧಾರವನ್ನು ಹೈಕಮಾಂಡ್ ತೆಗೆದುಕೊಳ್ಳುವ ವಿಶ್ವಾಸವಿದೆ ಎಂದು ಹೇಳಿದರು.

ಹಿಂದಿನ ಸಿದ್ದರಾಮಯ್ಯ ಈಗಿಲ್ಲ: 2013ರಿಂದ 2018ರ ಸಿದ್ದರಾಮಯ್ಯಗೂ ಈಗಿನ 2023–28ರ ಸಿದ್ದರಾಮಯ್ಯಗೂ ಬಹಳ ವ್ಯತ್ಯಾಸ ಇದೆ. ರಾಹುಲ್ ಗಾಂಧಿ ಹೇಳಿದಂತೆ ಕೇಳಬೇಕು ಎನ್ನುತ್ತಿದ್ದಾರೆ. ಮುಂದಿನ ಚುನಾವಣೆಗೆ ಎರಡು ವರ್ಷ ಇದೆ. ಮುಂದೆ ರಾಜಕೀಯ ಹೀಗೇ ಆಗಬಹುದು ಎಂದು ಹೇಳುವುದು ಈಗಲೇ ಸಾಧ್ಯವಿಲ್ಲ. ರಾಜಕಾರಣದಲ್ಲಿ ಬಹಳಷ್ಟು ನೀರು ಹರಿಯಬೇಕಾದ ಸಮಯವೂ ಇದೆ ಎಂದು ಕೆ.ಎನ್.ರಾಜಣ್ಣ ಮಾರ್ಮಿಕವಾಗಿ ಹೇಳಿದರು. ▶ 6ನೇ ಪುಟಕ್ಕೆ

ತಹಶೀಲ್ದಾರ್ ಆದೇಶ ಧಿಕ್ಕರಿಸಿ ಬಲಮುರಿ, ಎಡಮುರಿಯಲ್ಲಿ ಪ್ರವಾಸಿಗರ ದರ್ಬಾರ್

● ಪೊಲೀಸರ ಆರಂಭ ಶೂರತ್ವ ● ಪ್ರಭಾವಿಗಳ ಮಾತಿಗೆ ಮಣಿದು ಬಂದವರಿಗೆಲ್ಲಾ ಮೋಜು–ಮಸ್ತಿಗೆ ಅವಕಾಶ



ನಿರ್ಬಂಧ ನಿಯಮವಿದ್ದರೂ ಬಲಮುರಿಯಲ್ಲಿ ಮುಳುಗೇಳುತ್ತಿರುವ ಪ್ರವಾಸಿಗರು.

ಮೈಸೂರು,ಏ.28(ಎಂಟಿವೈ, ವಿನಯ್ ಕಾರೇಕುರ)–ನೀರಿನಲ್ಲಿ ಮುಳುಗಿ ಸಾವನ್ನಪ್ಪುವ ಸಾಲು ಸಾಲು ದುರ್ಘಟನೆಗಳು ಕಣ್ಮುಂದೆ ಇದ್ದರೂ ಜನ ಎಚ್ಚೆತ್ತುಕೊಂಡಿಲ್ಲ. ಮೋಜು–ಮಸ್ತಿ ಹಾಗೂ ಕೆಲಕಾಲದ ಮನರಂಜನೆಗಾಗಿ ಅಪಾಯವನ್ನೂ ಲೆಕ್ಕಿಸದೆ ತಮ್ಮ ಅಮೂಲ್ಯವಾದ ಜೀವವನ್ನೇ ಪಣಕ್ಕಿಟ್ಟು ನೀರಿಗಿಳಿಯುತ್ತಿದ್ದಾರೆ. ತಾಲೂಕು ದಂಡಾಧಿಕಾರಿಗಳ ನಿಷೇಧಾಜ್ಞೆಯನ್ನೂ ಗಾಳಿಗೆ ತೂರಿ, ಕೆಲ ವ್ಯಾಪಾರಿಗಳ ಕುಮ್ಮಕ್ಕಿನಿಂದ ನದಿಯಲ್ಲಿ ಚೆಲ್ಲಾಟವಾಡುತ್ತಿದ್ದಾರೆ.

ಹೌದು, ಇದು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಬಲಮುರಿ–ಎಡಮುರಿ ಸೇರಿದಂತೆ ಕಾವೇರಿ ನದಿ ತೀರದಲ್ಲಿ ಕಂಡುಬರುತ್ತಿರುವ ಚಿತ್ರಣ. ಇತ್ತೀಚೆಗೆ ಕೆ.ಆರ್.ನಗರ, ಪಿರಿಯಾಪಟ್ಟಣ, ತಲಕಾಡು ಸೇರಿದಂತೆ ಹಲವೆಡೆ ನದಿಯಲ್ಲಿ ಮುಳುಗಿ ಹಲವರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕು ದಂಡಾಧಿಕಾರಿ ಚೇತನಾ ಯಾದವ್, ▶ 6ನೇ ಪುಟಕ್ಕೆ

ಕೆ.ಆರ್.ಪೇಟೆಯಲ್ಲಿ ಅಪ್ರಾಪ್ತ ಗರ್ಭಿಣಿಯರಿಗೆ ಸ್ಕ್ಯಾನಿಂಗ್

ಪೋಕ್ಸೋ ಕಾಯ್ದೆಯಡಿ ಮೂವರು ವೈದ್ಯರ ಬಂಧನ

● ಅಕ್ರಮ ಭ್ರೂಣ ಲಿಂಗ ಪತ್ತೆ ಕರ್ಮಕಾಂಡ ಬಯಲು; ಮತ್ತೊಬ್ಬ ವೈದ್ಯ ನಾಪತ್ತೆ
● ಸರ್ಕಾರಿ ಆಸ್ಪತ್ರೆಗಳಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ ಅಕ್ರಮ ಬಳಕೆ
● ಸರ್ಕಾರಿ ನೌಕರರ ಅಧಿಕಾರ ದುರುಪಯೋಗ ● ವಯಸ್ಸಿನ ದೃಢೀಕರಣ ದಾಖಲಾತಿ ಇಲ್ಲದೆ ಸ್ಕ್ಯಾನಿಂಗ್ ● ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಶಿಫಾರಸು

ಕೆ.ಆರ್.ಪೇಟೆ, ಏ.28(ಶ್ರೀನಿವಾಸ್)–ಅಪ್ರಾಪ್ತ ಗರ್ಭಿಣಿ ಹುಡುಗಿಯರ ಸ್ಕ್ಯಾನಿಂಗ್ ಹಾಗೂ ಅಕ್ರಮವಾಗಿ ಭ್ರೂಣ ಲಿಂಗ ಪತ್ತೆ ಮಾಡಿರುವ ಆರೋಪದ ಮೇಲೆ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆಯ ಮೂವರು ವೈದ್ಯರನ್ನು ಪೋಕ್ಸೋ ಪ್ರಕರಣದಡಿ ಪೊಲೀಸರು ಬಂಧಿಸಿದ್ದು, ಮತ್ತೊಬ್ಬ ವೈದ್ಯೆ ತಲೆಮರೆಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಅಕ್ರಮ ಭ್ರೂಣ ಲಿಂಗ ಪತ್ತೆ ಜಾಲ ಭೇದಿಸಿದಂತೆ ಹಲವು ಆತಂಕಕಾರಿ ಪ್ರಕರಣಗಳು ಬಯಲಾಗುತ್ತಿವೆ. ಈ ಬಾರಿ ಅಕ್ರಮ ಭ್ರೂಣ ಲಿಂಗ ಪತ್ತೆ ಜಾಲ ಪತ್ತೆಗೆ ಲೋಕಾಯುಕ್ತರೇ ತನಿಖೆಗಿಳಿದಿದ್ದಾರೆ.



ಕೆ.ಆರ್.ಪೇಟೆಯ ಚೇತನ ಮೆಟರ್ನಿಟಿ ಸೆಂಟರ್‌ನ ಡಾ.ದಿವ್ಯ ಚೇತನಾ, ನಾವಿ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ.ಹರ್ಷಿತಾ ಹಾಗೂ ಕುಶಾಲ್ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ.ಹರೀಶ್ ಬಂಧಿತ ಆರೋಪಿಗಳಾಗಿದ್ದಾರೆ.

ಅಕ್ರಮ ಭ್ರೂಣ ಲಿಂಗ ಪತ್ತೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರಗಳ ಅಕ್ರಮ ಬಳಕೆ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಏಪ್ರಿಲ್ 16ರಂದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು.

ಈ ಸಂಬಂಧ ಶೋಧನೆ ಮಾಡಲು ಮಂಡ್ಯ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದಲ್ಲಿ ಮೈಸೂರು, ಚಾಮರಾಜನಗರ ಮತ್ತು ರಾಮನಗರದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ತಂಡ ರಚನೆ ಮಾಡಿದ್ದರು.

ತರುವಾಯ ಸುರೇಶ್ ಬಾಬು ಅವರ ನೇತೃತ್ವದ ತಂಡ ನಾಗಮಂಗಲ, ಮಳವಳ್ಳಿ, ಮದ್ದೂರು, ಕೆ.ಆರ್.ಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆ, ಮಂಡ್ಯದ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ನಾವಿ ಡಯಾಗ್ನೋಸ್ಟಿಕ್ ಸೆಂಟರ್, ಕುಶಾಲ್ ಡಯಾಗ್ನೋಸ್ಟಿಕ್ ಸೆಂಟರ್ ಮೇಲೆ ದಾಳಿ ಮಾಡಿದ್ದರು.

ದಾಳಿ ವೇಳೆ ಸರ್ಕಾರಿ ನೌಕರರು ತಮ್ಮ ಅಧಿಕಾರ ದುರುಪಯೋಗ ಮತ್ತು ಅಪರಾಧಿ ಕೃತ್ಯ ಎಸಗಿರುವುದು ಕಂಡು ಬಂದಿತು. 7 ಪ್ರಕರಣಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳಿಗೆ ಸ್ಕ್ಯಾನಿಂಗ್ ಮಾಡಿರುವುದು ಕಂಡು ಬಂದಿತು. ಅಲ್ಲದೆ 64 ಪ್ರಕರಣಗಳಲ್ಲಿ ವಯಸ್ಸಿನ ದೃಢೀಕರಣ ದಾಖಲಾತಿ ಪಡೆಯದೇ ಸ್ಕ್ಯಾನಿಂಗ್ ಮಾಡಿರುವ ಅಂಶ ಬಯಲಾಯಿತು. ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗೈನಾಕಾಲಜಿಸ್ಟ್‌ಗಳು ಮಹಿಳೆಯರ ಗರ್ಭಧಾರಣೆ ಸಂಬಂಧ ಪರೀಕ್ಷೆ ನಡೆಸಲು ಉನ್ನತ ದರ್ಜೆಯ ಸರ್ಕಾರಿ ಆಸ್ಪತ್ರೆಗಳಿಗೆ ಶಿಫಾರಸು ಮಾಡಬೇಕಾಗಿದ್ದರೂ ಖಾಸಗಿ ಡಯಾಗ್ನೋಸ್ಟಿಕ್ ಸೆಂಟರ್‌ಗಳಿಗೆ ಶಿಫಾರಸ್ಸು ಮಾಡಿರುವುದು ಕಂಡು ಬಂದಿತು. ಈ ಸಂಬಂಧ ಕೆ.ಆರ್.ಪೇಟೆ ಟೌನ್ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 12 ಪ್ರಕರಣ ದಾಖಲಾಗಿದ್ದು, ಪೋಕ್ಸೋ ಹಾಗೂ ಇತರೆ ಪ್ರಕರಣಗಳಲ್ಲಿ ಆರೋಪಿ ವೈದ್ಯರಾದ ಡಾ.ದಿವ್ಯ ಚೇತನಾ, ಡಾ.ಹರ್ಷಿತಾ ಹಾಗೂ ಡಾ.ಹರೀಶ್ ಅವರನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ನ್ಯಾಯಾಲಯವು ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಈ ಪ್ರಕರಣದಲ್ಲಿ ಮತ್ತೊಬ್ಬ ವೈದ್ಯ ಡಾ.ಪ್ರಿಯಾಂಕ ಎಂಬುವರು ತಲೆಮರೆಸಿಕೊಂಡಿದ್ದು, ಇವರ ಬಂಧನಕ್ಕೆ ಪೊಲೀಸರು ಮುಂದಾಗಿದ್ದಾರೆ. ಈ ಅಕ್ರಮ ಪ್ರಕರಣ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಉಳಿದಂತೆ ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು, ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ಹಾಗೂ ಶ್ರೀರಂಗಪಟ್ಟಣ ತಾಲೂಕುಗಳ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆ ಪ್ರಗತಿಯಲ್ಲಿದೆ.

ಮೈಸೂರಲ್ಲಿ ಬಿಡಾಡಿ ಜಾನುವಾರುಗಳಿಂದ ರೋಸಿ ಹೋಗಿರುವ ವಾಹನ ಸವಾರರಿಗೆ ಈಗ ಬೀದಿ ಬಸವಣ್ಣನೂ ಅಡ್ಡಿ!



ಮೈಸೂರಿನ ಕೆಆರ್‌ಎಸ್ ಮುಖ್ಯರಸ್ತೆಯ ಆಕಾಶವಾಣಿ ಬಳಿಯ ಸಿಗ್ನಲ್‌ನಲ್ಲಿ ವಾಹನಗಳ ನಡುವೆ ನುಸುಳುತ್ತಿರುವ ಬಸವಣ್ಣ.

● ಸಿಗ್ನಲ್‌ಗಳಲ್ಲಿ ವಾಹನ ದಟ್ಟಣೆ ನಡುವೆ ಬೇಡುವುದು ಅವರಿಗೂ ಕ್ಷೇಮವಲ್ಲ ● ಸೂಕ್ತ ಕ್ರಮಕ್ಕೆ ಸಂಚಾರ ಪೊಲೀಸರಿಗೆ ಸಾರ್ವಜನಿಕರಿಂದ ಮನವಿ

> ಟ್ರಾಫಿಕ್ ಸಿಗ್ನಲ್ ಬಳಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ. ದಟ್ಟಣೆ ನಡುವೆಯೂ ವಾಹನಗಳ ನಡುವೆ ನುಸುಳಿ ಬಸವಣ್ಣನನ್ನು ಎಳೆದಾಡಿಕೊಂಡು ಹಣ ಬೇಡುತ್ತಾರೆ. ಕೆಲವರು ಚಿಲ್ಲರೆ ನೀಡಿದರೆ, ಮತ್ತಷ್ಟು ಮಂದಿ ಚಿಲ್ಲರೆ ಇಲ್ಲ ಎಂದು ಮುಂದಕ್ಕೆ ಕಳುಹಿಸುತ್ತಾರೆ. ಇದು ಹೊಟ್ಟೆ ಪಾಡಿನ ಕೆಲಸ ಎಂದೆನಿಸಿದರೂ ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ. ಸಿಗ್ನಲ್ ದಾಟುವ ಭರದಲ್ಲಿ ಬಸವಣ್ಣ ಹಾಗೂ ಅದರ ಪಾಲಕರಿಗೆ ವಾಹನಗಳು ಡಿಕ್ಕಿ ಹೊಡೆಯುವ ಸಾಧ್ಯತೆಯೂ ಇರುತ್ತದೆ. ಅಪಘಾತ ಸಂಭವಿಸಿದರೆ ವಾಹನ ಸವಾರರು ಬಿದ್ದು ಗಾಯಗೊಳ್ಳಬಹುದು. ತೀವ್ರತೆ ಹೆಚ್ಚಾಗಿದ್ದರೆ ಪ್ರಾಣಾಪಾಯವೂ ಉಂಟಾಗಬಹುದು ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು: ಮೈಸೂರಿನಲ್ಲಿ ಮೊದಲೇ ಬಿಡಾಡಿ ಜಾನುವಾರುಗಳಿಂದ ರೋಸಿ ಹೋಗಿರುವ ವಾಹನ ಸವಾರಿಗೆ, ಇದೀಗ ಬೀದಿ ಬಸವಣ್ಣಗಳಿಂದ ಹೊಸ ಸಮಸ್ಯೆ ಸೃಷ್ಟಿಯಾಗಿದೆ

ಬಲಾಢ್ಯವಾದ ಹೋರಿ ಅಥವಾ ಎತ್ತುಗಳನ್ನು ಸಿಂಗರಿಸಿ, ವಾದ್ಯ ನುಡಿಸುತ್ತಾ ಹಳ್ಳಿಗಳಲ್ಲಿ ಸುತ್ತುಹಾಕುವ ಮೂಲಕ ಜನ ನೀಡಿದ್ದನ್ನು ಪಡೆಯುವ ಸಮುದಾಯವೇ ಇದೆ. ಮನೆ ಬಾಗಿಲಲ್ಲಿ ನಿಂತು ಕತ್ತು ಅಲುಗಾಡಿಸಿ ಗಂಟೆ ಸದ್ದು ಮಾಡುವ ಬಸವಣ್ಣನಿಗೆ ಪೂಜೆ ಸಲ್ಲಿಸಿ, ಬಾಳೆಹಣ್ಣು–ಬೆಲ್ಲ ಇನ್ನಿತರ ತಿನಿಸು ನೀಡುವುದರ ಜೊತೆಗೆ ಅದನ್ನು ಕರೆತಂದವರಿಗೂ ಹಣ ಅಥವಾ ಧಾನ್ಯ ನೀಡುವ ರೂಢಿ ಇದೆ.

ಆದರೆ ಈಗ ಕಾಲ ಬದಲಾಗಿದೆ. ಎಲ್ಲರಂತೆ ಬಸವಣ್ಣ ಪಾಲಕರೂ ಹಣದ ಹಿಂದೆ ಹೊರಟಿದ್ದಾರೆ. ಹಳ್ಳಿಗಳನ್ನು ತೊರೆದು ನಗರಗಳತ್ತ ಧಾವಿಸಿದ್ದಾರೆ. ಹೊರ ವಲಯದಲ್ಲಿ ಟೆಂಟ್ ಹಾಕಿ, ಹಗಲಲ್ಲಿ ಬಸವಣ್ಣನೊಂದಿಗೆ ನಗರ ಪ್ರದಕ್ಷಿಣೆ ನಡೆಸುತ್ತಾರೆ. ಬಡಾವಣೆಗಳ ರಸ್ತೆಗಳಲ್ಲಿ ಸುತ್ತುಹಾಕಿ ಕೊಟ್ಟಷ್ಟು ಹಣ ಪಡೆಯುತ್ತಿದ್ದವರು ಇದೀಗ ಸದಾ ವಾಹನ ದಟ್ಟಣೆ ಇರುವ ರಸ್ತೆಗಳ ಸಿಗ್ನಲ್ ಬಳಿ ಬೇಡುತ್ತಿರುವುದು ಸಮಸ್ಯೆಯಾಗಿ ಬಿಗಡಾಯಿಸಿದೆ. ಕೆಆರ್‌ಎಸ್ ರಸ್ತೆ ಆಕಾಶವಾಣಿ ವೃತ್ತದ ಬಳಿ ಇಂತಹ ದೃಶ್ಯವನ್ನು ನಿತ್ಯ ಕಾಣಬಹುದು. ಹೊರ ರಾಜ್ಯಗಳಿಂದ ಬಂದು ವಿಜಯನಗರದ ಖಾಲಿ ಜಾಗದಲ್ಲಿ ಟೆಂಟ್ ಹಾಕಿಕೊಂಡಿರುವ ಜನ, ಹೀಗೆ ಬಸವಣ್ಣನನ್ನು ಸಿಗ್ನಲ್ ಬಳಿ ಕರೆತಂದು ವಾಹನ ಸವಾರರ ಬಳಿ ಬೇಡುತ್ತಾರೆ. ನಗರ ಸಾರಿಗೆ ಹಾಗೂ ಖಾಸಗಿ ಬಸ್‌ಗಳ ಜೊತೆಗೆ ಪ್ರವಾಸಿ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಗುವ ಈ ಮಾರ್ಗದಲ್ಲಿ ತೀವ್ರ ಅಡೆತಡೆ ಉಂಟಾಗುತ್ತಿದೆ. ಸಿಗ್ನಲ್ ಬಳಿಯೇ ರಸ್ತೆಯ ಎರಡೂ ಕಡೆ ಪ್ರಯಾಣಿಕರ ತಂಗುದಾಣಗಳಿವೆ. ಮಹಾರಾಣಿ ಕಾಲೇಜಿನ ನೂರಾರು ಸಂಖ್ಯೆಯ ವಿದ್ಯಾರ್ಥಿನಿಯರು ಸೇರಿದಂತೆ ಅಪಾರ ಸಂಖ್ಯೆಯ ಪ್ರಯಾಣಿಕರು, ಚೆಲುವಾಂಬ ಉದ್ಯಾನವನಕ್ಕೆ ವಾಯುವಿಹಾರಕ್ಕೆ ಹೋಗುವವರು, ಪಾಲಿಕೆ ವಲಯ ಕಚೇರಿಗೆ ತೆರಳುವವರು ನಡೆದು ಓಡಾಡುತ್ತಾರೆ. ಕೆಲ ಪಾದಚಾರಿಗಳು ಬಸವಣ್ಣನಿಗೆ ಹೆದರಿ ಓಡಿದರೆ ವಾಹನಗಳಿಗೆ ಸಿಲುಕಬಹುದು.

ಆದ್ದರಿಂದ ಸಂಚಾರ ಪೊಲೀಸರು, ಸಿಗ್ನಲ್ ಬಳಿ ಹೀಗೆ ಬಸವಣ್ಣನನ್ನು ಕರೆತಂದು ಬೇಡುವವರು ಇಲ್ಲವೇ ಸಣ್ಣ ಪುಟ್ಟ ವಸ್ತುಗಳ ಮಾರುವವರಿಗೆ ತಿಳಿಹೇಳಬೇಕು. ಇದು ಬೇಡಿ ತಿನ್ನುವವರ ಹೊಟ್ಟೆಗೆ ಹೊಡೆಯುವ ಕೆಲಸವೆಂದು ಭಾವಿಸುವವರು ಅಮಾಯಕ ವಾಹನ ಸವಾರರ ಸುರಕ್ಷತೆ ಬಗ್ಗೆಯೂ ಕಾಳಜಿ ತೋರಬೇಕು. ಸೂಕ್ತ–ಸುರಕ್ಷಿತ ಸ್ಥಳದಲ್ಲಿ ತಮ್ಮ ಕಾಯಕ ನಡೆಸಿದರೆ ನಿಮಗೂ ಕ್ಷೇಮ ಎಂಬುದನ್ನು ಮನದಟ್ಟು ಮಾಡಿಕೊಡಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಬಿಇ ಮುಗಿಸಿಕೊಂಡು ಮನೆಗೆ ಬರುವಾಗ ಜೊತೆಯಲ್ಲಿ ಹುಡುಗಿ ಕರೆದುಕೊಂಡು ಬಂದ ಮಗ.

ಅಪ್ಪ : ಯಾರ್ಲಾ ಇವಳು?

ಮಗ : ಅಪ್ಪ ಕ್ಯಾಂಪಸ್ ಸೆಲೆಕ್ಷನ್ !

ಮೈಸೂರು ಮಿತ್ರ

ಬುಧವಾರ, ಏಪ್ರಿಲ್ 29, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಹಣವಿದ್ದರೆ ಅಪರಿಚಿತರು ಕೂಡ ಸಂಬಂಧಿಕರು,
ಹಣವಿಲ್ಲದಿದ್ದರೆ ಸಂಬಂಧಿಕರು ಕೂಡ ಅಪರಿಚಿತರು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

ನಿಮ್ಮ ಪತ್ರಗಳು

ಹಿಂದಿಗೆ ಗ್ರೇಡ್ ಬದಲು ಅಂಕವನ್ನೇ ನೀಡುವುದು ಸೂಕ್ತ

ಮಾನ್ಯರೆ,

2025–26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವ ಪ್ರಸ್ತಾಪ ಸರ್ಕಾರದ ಮುಂದಿತ್ತು. ಆದರೆ ರಾಜ್ಯ ಹೈಕೋರ್ಟ್ ನ ನಿರ್ದೇಶನದಂತೆ ಸರ್ಕಾರ ಗ್ರೇಡ್ ವ್ಯವಸ್ಥೆ ಕೈಬಿಟ್ಟು ಬದಲಿಗೆ ಅಂಕಗಳನ್ನೇ ನೀಡಿ ಫಲಿತಾಂಶ ಪ್ರಕಟಿಸಿರುವುದು ಸ್ವಾಗತಾರ್ಹವಾಗಿದೆ.

ಪರೀಕ್ಷೆ ಹೊತ್ತಿನಲ್ಲಿ ಸರ್ಕಾರ ಹಿಂದಿ ಭಾಷಾ ಪರೀಕ್ಷೆಗೆ ಗ್ರೇಡ್ ನೀಡುವ ನಿರ್ಧಾರದಿಂದ ಮಕ್ಕಳಲ್ಲಿ, ಶಿಕ್ಷಕರಲ್ಲಿ ಹಾಗೂ ಪೋಷಕರಲ್ಲಿ ಗೊಂದಲ ಉಂಟಾಗಿತ್ತು. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಯಾಗಿ ಹಿಂದಿಯನ್ನು ಆಯ್ಕೆ ಮಾಡಿಕೊಂಡಿದ್ದ 7,02,009 ವಿದ್ಯಾರ್ಥಿಗಳ ಪೈಕಿ, 6,92,528 ಮಕ್ಕಳು ಉತ್ತೀರ್ಣರಾಗಿದ್ದಾರೆ. ಅಲ್ಲದೆ ತೃತೀಯ ಭಾಷೆ ಹಿಂದಿಯಲ್ಲಿ 31,255 ವಿದ್ಯಾರ್ಥಿಗಳು ಶೇಕಡ 100 ಅಂಕ ಗಳಿಸಿ ಸಾಧನೆಗೈದಿದ್ದಾರೆ. ಸರ್ಕಾರದ ಗ್ರೇಡ್ ಹಾಗೂ ಅಂಕಗಳ ಗೊಂದಲದ ನಡುವೆಯೂ ಮಕ್ಕಳು ಪರೀಕ್ಷೆಯನ್ನು ಬರೆದು ಹಿಂದಿ ವಿಷಯದಲ್ಲಿ ಇಷ್ಟೊಂದು ದಾಖಲೆಯ ಫಲಿತಾಂಶವನ್ನು ನೀಡಿರುವುದು ಮೆಚ್ಚುಗೆಯ ಸಂಗತಿಯಾಗಿದೆ.

ಹಿಂದಿ ಕೇಂದ್ರದ ಆಡಳಿತ ಭಾಷೆ ಹಾಗೂ ನಮ್ಮ ದೇಶದಲ್ಲಿ ಅತೀ ಹೆಚ್ಚು ಜನರು ಮಾತನಾಡುವ ಭಾಷೆಯು ಕೂಡ ಹೌದು. ಹಲವು ದಶಕಗಳಿಂದ ನಾವು ನೀವು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಯನ್ನು ತೃತೀಯ ಭಾಷೆಯಾಗಿ ಕಲಿತಿದ್ದೇವೆ. ನಮ್ಮ ಮಕ್ಕಳು ಕೂಡ ಹಿಂದಿಯನ್ನು ಇಷ್ಟಪಟ್ಟು ಕಲಿತರೆ ನಷ್ಟವೇನು ಇಲ್ಲ. ಅಲ್ಲದೆ ಹಿಂದಿಯಲ್ಲಿ ಆಸಕ್ತಿ ಇರುವ ಮಕ್ಕಳು, ಹಿಂದಿ ವಿಷಯದಲ್ಲಿ ಹೆಚ್ಚು ಅಂಕ ಪಡೆದುಕೊಳ್ಳುವುದರಿಂದ ಅವರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಒಟ್ಟಾರೆ ಫಲಿತಾಂಶದ ಶೇಕಡವಾರು ಅಂಕಗಳು ಕೂಡ ಹೆಚ್ಚಾಗಲು ನೆರವಾಗುತ್ತದೆ. ಹೀಗಾಗಿ ಸರ್ಕಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ತೃತೀಯ ಭಾಷೆಯಾದ ಹಿಂದಿಗೆ ಗ್ರೇಡ್ ನೀಡುವ ನಿರ್ಧಾರದಿಂದ ಹಿಂದೆ ಸರಿದು, ಅಂಕವನ್ನೇ ನೀಡಿ ಹೀಗಿರುವ ಪದ್ಧತಿಯನ್ನು ಮುಂದುವರಿಸಿ ಕೊಂಡು ಹೋಗುವುದು ಹೆಚ್ಚು ಸೂಕ್ತವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ರಿಸರ್ವೇಶನ್ ವಿಭಾಗದಲ್ಲಿ ಹವಾನಿಯಂತ್ರಣ ಕೆಲಸ ಮಾಡುತ್ತಿಲ್ಲ!

ಮಾನ್ಯರೆ,

ಮೈಸೂರು ರೈಲ್ವೆ ನಿಲ್ದಾಣದ ರಿಸರ್ವೇಶನ್ ವಿಭಾಗದಲ್ಲಿ ಫ್ಯಾನ್ ಹಾಗೂ ಎಸಿ ಯಾವುದೂ ಕೆಲಸ ಮಾಡುತ್ತಿಲ್ಲ. ಸಾರ್ವಜನಿಕರು ಟಿಕೆಟ್ ಮುಂಗಡವಾಗಿ ಖರೀದಿಸಲು ಗಂಟೆಗಟ್ಟಳೆ ಸರದಿ ಸಾಲಿನಲ್ಲಿ ನಿಂತು ಕುಳಿತು ಕಾಯುತ್ತಿದ್ದಾರೆ. ಈಗ ಬೇಸಿಗೆಯ ಕಾಲವಾದ್ದರಿಂದ 35 ಡಿಗ್ರಿ ತಾಪಮಾನ ಇರುವುದರಿಂದ ಜನರು ದಗೆಯನ್ನು ಸಹಿಸಲಾಗದೇ ಕರ್ಚೀಫ್ ಅಥವಾ ಯಾವುದಾದರೂ ರಟ್ಟನ್ನು ಹಿಡಿದು ಗಾಳಿಯಾಡುವಂತೆ ಮಾಡುತ್ತಿದ್ದಾರೆ. ರೈಲ್ವೆ ಅಧಿಕಾರಿಗಳಿಗೆ ಇದು ಯಾವುದೂ ಗಮನಕ್ಕೆ ಬರುವುದಿಲ್ಲವೇ? ಎಸಿ ಇಲ್ಲದಿದ್ದರೂ ಪರವಾಗಿಲ್ಲ, ಕನಿಷ್ಠ ಪಕ್ಷ ನಾಲ್ಕೈದು ಫ್ಯಾನನ್ನಾದರೂ ಅಲ್ಲಿ ಅಳವಡಿಸಿದರೆ ಜನರಿಗೆ ಸ್ವಲ್ಪ ನಿರಾಳವಾಗುತ್ತದೆ. ಈಗಿರುವ ಒಂದೇ ಫ್ಯಾನ್ ನಿಧಾನ ಗತಿಯಲ್ಲಿ ಒಂದೇ ಕಡೆ ತಿರುಗುತ್ತಿದೆ. ಆಸಿಲೇಶನ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ರೈಲ್ವೆ ಇಲಾಖೆಯಲ್ಲಿ ಆದಾಯಕ್ಕೇನೂ ಕೊರತೆ ಇಲ್ಲ. ಹೀಗಿರುವಾಗ ಜನರಿಗೆ ಅನುಕೂಲ ಮಾಡಿಕೊಡಬೇಕಿದೆ. ಇದಲ್ಲದೇ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಸರಿಯಾಗಿ ಇಲ್ಲ. ರೈಲ್ವೆ ಇಲಾಖೆ ಈ ಎರಡೂ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಲ್ಪಿಸಿ, ಸ್ಪಂದಿಸಬೇಕಿದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಬೇಸಿಗೆಯಲ್ಲಿ ಹೆಲ್ಮೆಟ್ ಧರಿಸುವುದರಿಂದ ತಾತ್ಕಾಲಿಕ ವಿನಾಯ್ತಿಗೆ ಮನವಿ

ಮಾನ್ಯರೆ,

ದ್ವಿಚಕ್ರ ವಾಹನ ಚಾಲಕರು ಹೆಲ್ಮೆಟ್ ಧರಿಸುವುದು ಅತ್ಯಾವಶ್ಯಕ ಎಂಬುದು ಎಷ್ಟು ನಿಜವೋ, ತಾಪಮಾನ ಒಮ್ಮೆಲೇ ಹೆಚ್ಚುತ್ತಿದ್ದಾಗ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವುದೂ ಅಷ್ಟೇ ಕಷ್ಟ, ಇಂತಹ ಸಂದರ್ಭ ತಾತ್ಕಾಲಿಕ ವಿನಾಯ್ತಿ ಕೊಡುವುದೂ ಅವಶ್ಯಕ ಎಂದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಸ್ವಾಗತಾರ್ಹ.

ನಮ್ಮಲ್ಲಿ ಕೆಲ ಆದೇಶಗಳು, ಕಾನೂನುಗಳು ಅವುಗಳ ಅನುಷ್ಠಾನದ ಬಗ್ಗೆ ಯೋಚಿಸದೇ ಹೇರಲ್ಪಡುತ್ತವೆ ಎಂಬುದನ್ನು ಅಲ್ಲಗಳೆಯಲಾಗದು. ವಾಹನ ಸವಾರರ ಹಿತದೃಷ್ಟಿಯಲ್ಲಿ ಹೆಲ್ಮೆಟ್ ಧರಿಸುವುದು ಸೂಕ್ತ ಅದರೂ, ಇಂದು ಮೈಸೂರಿನಂತಹ ತಂಪು ಹವೆ ಪ್ರದೇಶದಲ್ಲೂ ಉಷ್ಣಾಂಶ ಹೆಚ್ಚಾಗಿ, ಬೆವರು ಸುರಿಸುತ್ತ, ಆರೋಗ್ಯವನ್ನೂ ಹಾಳುಮಾಡಿಕೊಳ್ಳುವ ಸಾಧ್ಯತೆಗಳೂ ಇರುವಾಗ, ಕನಿಷ್ಠ ಉಷ್ಣಾಂಶ ಕಡಿಮೆ ಆಗುವವರೆಗೆ ವಿನಾಯ್ತಿ ಕೊಟ್ಟರೆ ನಿಜಕ್ಕೂ ಅನುಕೂಲ. ಕಾನೂನು ಸಹ, ಜನ–ಸ್ನೇಹಿಯಾಗಿರಬೇಕೇ ಹೊರತು ಶಾಪವಲ್ಲ. ಕ್ಲಿಷ್ಟಕರ ಪರಿಸ್ಥಿತಿಯಲ್ಲಿ, ಜನರ ಕಷ್ಟಗಳನ್ನೂ ಅರಿತು ಕಾನೂನು ಜಾರಿಯಾದರೇನೇ ಒಳಿತು.

ನಮ್ಮ ದೇಶದಲ್ಲಿ ಕೆಲ ಕಾರ್ಪೊರೇಟ್ ಕಂಪನಿಗಳು ತಮ್ಮ ಪುರುಷ ಉದ್ಯೋಗಿಗಳಿಗೆ 'ಟೈ' ಇರಲೇಬೇಕು ಅನ್ನುವುದೂ ಇಂತಹುದೇ ಸಮಸ್ಯೆ ತಂದೊಡ್ಡುತ್ತದೆ. ಇಲ್ಲೂ ಕೆಲ ಕಂಪನಿಗಳು ಏಪ್ರಿಲ್ – ಮೇ ತಿಂಗಳಲ್ಲಿ ವಿನಾಯ್ತಿ ಕೊಡುತ್ತಾರೆ. ಇದು ಅವಶ್ಯಕವೂ ಹೌದು. ಹೀಗಾಗಿ ಈ ಹೆಲ್ಮೆಟ್ ವಿಚಾರದಲ್ಲೂ, ಕನಿಷ್ಠ ಈ ಎರಡು ತಿಂಗಳು ವಿನಾಯ್ತಿ ಸಿಗುವಂತಾಗಲಿ.

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

ಬಸ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ


ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮೈಸೂರು ಹಾಗೂ ಇತರ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ 36 ರಿಂದ 38 ರವರೆಗೆ ಹೆಚ್ಚುತ್ತಿದೆ. ಸಾರ್ವಜನಿಕರು, ವಿದ್ಯಾರ್ಥಿಗಳು ಸಾರಿಗೆ ಬಸ್‌ಗಳಲ್ಲಿ ದಿನ ನಿತ್ಯ ಪ್ರಯಾಣ ಮಾಡುತ್ತಾರೆ. ಅದರಲ್ಲೂ ಶುಗರ್, ಬಿಪಿ ಇರುವವರಿಗೆ ಪದೇ ಪದೆ ಬಾಯಾರಿಕೆ ಆಗುತ್ತದೆ. ಅದುದರಿಂದ ಸಾರಿಗೆ ಬಸ್ ನಿಲ್ದಾಣ ಹಾಗೂ ಬಸ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ. ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಶಾಸಕರು, ಸಂಸದರು ಕೂಡಲೇ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಮನವಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್. ಡಿ. ಕೋಟೆ ತಾ.

ಅಮೂಲ್ಯ ನೆನಪುಗಳ ಫ್ರೇಂ....


–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ರಾಜಕುಮಾರ ಜಯಚಾಮರಾಜೇಂದ್ರ ಒಡೆಯರ್ ಅವರ ಉಪನಯನ ಸಮಾರಂಭವು 1930ರ ಮೇ 23ರಂದು ಅರಮನೆಯ ಕಲ್ಯಾಣ ಮಂಟಪದಲ್ಲಿ ನಡೆಯಿತು. ಈ ಛಾಯಾಚಿತ್ರದಲ್ಲಿ ಪಲಾಶ ಮರದ ಕೊಂಬೆ ಹಿಡಿದುಕೊಂಡು ಹೋಮ ಕುಂಡದ ಎದುರು ಯುವ ರಾಜಕುಮಾರರು ಕುಳಿತಿರುವುದನ್ನು ಕಾಣಬಹುದು.

ರಾಜಕುಮಾರರ ಬಲಗೈ ಮಣಿಕಟ್ಟಿಗೆ ಕಂಕಣ ಕಟ್ಟಿರುವುದನ್ನು ಚಿತ್ರದಲ್ಲಿ ಗಮನಿಸಬಹುದು. ಅವರ ಎರಡು ಬದಿಗಳಲ್ಲಿ ಕುಳಿತಿರುವ ಪುರೋಹಿತರು (ಬಿಳಿ ವಸ್ತ್ರ ಧರಿಸಿದವರು) ಯಾರೆಂದು ಇನ್ನು ಗುರುತಿಸಲಾಗಿಲ್ಲ. ಆದರೆ ಗಾಢ ಬಣ್ಣದ ಶಾಲು ಹೊದ್ದುಕೊಂಡಿರುವ ಹಿರಿಯರನ್ನು ಆಸ್ಥಾನದ ಮಹಾ ವಿದ್ವಾನ್ ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿ ಎಂದು ಗುರುತಿಸಲಾಗಿದೆ. ಅವರು ಈ ಧಾರ್ಮಿಕ ಕಾರ್ಯದ ನೇತೃತ್ವ ವಹಿಸಿದ್ದರು.

ಆಸಕ್ತಿದಾಯಕವೆಂದರೆ, 1926ರಲ್ಲಿ ತಮ್ಮ ಅಧಿಕೃತ ವೃತ್ತಿಯಿಂದ ನಿವೃತ್ತರಾದ ಶ್ರೀ ರಾಮಶೇಷ ಶಾಸ್ತ್ರಿಗಳನ್ನು ಅರಮನೆ ಆಡಳಿತವು ಯುವರಾಜ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ಖಾಸಗಿ ಬೋಧನೆ ನೀಡುವಂತೆ ವಿನಂತಿಸಿಕೊಂಡರು. ಮೂರು ಕಾಲುಗಳನ್ನು ಹೊಂದಿರುವ ಸಾಂಪ್ರದಾಯಿಕ ವೃತ್ತಾಕಾರದ ಬೆಳ್ಳಿ ಆಸನಗಳ ಮೇಲೆ ಮಂಗಳ ದ್ರವ್ಯ, ಬಾಳೆಹಣ್ಣು, ತೆಂಗಿನಕಾಯಿ ಮತ್ತು ಹೊಸ ವಸ್ತ್ರಗಳನ್ನು ಇಟ್ಟಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಪಯಣಪರಿಯೇ ಮುದವೊ ಮುದ್ದುರಾಮ

ಬೆಟ್ಟದ ಮೇಲೆ ಇರುವ ದೇವಸ್ಥಾನವನ್ನು ನೋಡಲು ಹೋಗುತ್ತೇವೆ. ಪ್ರಯಾಣವನ್ನು ಮಾಡುವಾಗ ಉತ್ಸಾಹ –ಬೆಟ್ಟದ ಬುಡದಿಂದ ಹತ್ತುವಾಗ ಸುತ್ತಲಿನ ಪ್ರಕೃತಿಯ ಚಂದದ ನೋಟ. ಮೆಟ್ಟಿಲುಗಳನ್ನು ಹತ್ತುವಾಗ ಸ್ಪರ್ಧೆ. ನಾನು ಮುಂದೆ, ತಾನು ಮುಂದೆ ಎಂಬ ಪೈಪೋಟಿ. ಇದನ್ನು ಸಂಸ್ಕೃತ ಕಾವ್ಯಗಳಲ್ಲಿ ಅಹಂಪೂರ್ವಿಕಾ ಎಂದು ಕರೆದಿದ್ದಾರೆ (ಅಹಂಪೂರ್ವಮಹಂ ಪೂರ್ವ ಮಿತ್ಯಹಂ ಪೂರ್ವಿಕಾ ಕ್ರಿಯಾ). ದಾರಿಯಲ್ಲಿ ಕಾಣುವ ಮರಗಿಡಗಳ ಬಗೆಗೆ, ಅಲ್ಲಿ ಹಾರಾಡುವ ಪಕ್ಷಿಗಳ ಹೆಸರಿನ ಬಗೆಗೆ ಚರ್ಚೆ, ಎಷ್ಟು ಚೆನ್ನಾಗಿ ಕಳೆಯುವ ಕಾಲ! ಮೇಲೆ ಹೋಗಿ ನೋಡಿದರೆ ಕ್ಷಿತಿಜದವರೆಗೆ ಹರಡಿದ ಅದ್ಭುತ ದೃಶ್ಯ! ಹೀಗೆ ಪಯಣ ಸುಂದರ. ಆದರೆ ಬೆಟ್ಟದ ಮೇಲಿರುವುದು ಯಾವುದೋ ಹಳೆಯ ಗುಡಿ ಅಷ್ಟೆ. ಅಲ್ಲೇನು ಶಿಲ್ಪ ಕಲಾವೈಭವ ಇಲ್ಲ. ಇದಕ್ಕಿಂತ ಚೆಲುವಾದ ದೇವಾಲಯ ಊರಿನಲ್ಲೇ ಇದೆಯಲ್ಲ. ಇದನ್ನು ನೋಡಲು ಇಷ್ಟು ದೂರ ಬರಬೇಕಿತ್ತೆ? ಎಂಬ ಭಾವನೆ ಮನಸ್ಸಿನಲ್ಲಿ ಸುಳಿದು ಹೋಗುತ್ತದೆ. ಆದರೆ ಬಂದದ್ದು ವ್ಯರ್ಥವಲ್ಲ, ಪಯಣದ ಪರಿಯೇ ಮುದವನ್ನು ನೀಡುತ್ತದೆ.

ಅದೇ ರೀತಿ ನಮ್ಮ ಬದುಕಿನ ಪಯಣವೂ ಎಪ್ಪತ್ತೋ ಎಂಬತ್ತೋ ನೂರೋ ವರುಷ ಪಯಣಿಸುತ್ತೇವೆ. ಅಷ್ಟಾದರೂ ಜೀವನದಲ್ಲಿ ನಾವು ಸಾಧಿಸಿದ್ದು ಅತ್ಯಲ್ಪ. ಆದರೂ ಪಯಣದ ಕ್ಷಣ ಕ್ಷಣದಲ್ಲೂ ಉಂಡ ನೋವು ನಲಿವುಗಳು, ಒಂದೊಂದು ದಿನದ ಸಿಹಿ ಕಹಿ ಅನುಭವಗಳನ್ನು ಮೆಲುಕು ಹಾಕಿದಾಗ ಅವುಗಳ ನೆನಪೇ ಎಂತಹ ಸುಖವನ್ನು ನೀಡುತ್ತದೆ. ಕೇವಲ ದುಃಖಗಳನ್ನೇ ನೆನೆಸಿಕೊಂಡು ಅಳುವುದು ಬೇಡ, ಒಳ್ಳೆಯ ಘಳಿಗೆಗಳನ್ನು ನೆನೆಸಿಕೊಂಡು ನಲಿಯೋಣ. ಕವಿ ಹೇಳುತ್ತಾನೆ –

ಬಿಡು ಮೊದಲು ಕಾತರವ, ಬಿಡು ಚಿಂತೆ ಉಬ್ಬಸವ;
ನಿನ್ನ ಈ ಇಳೆಪಯಣ, ಉದ್ದವೇನಲ್ಲ
ನಿಂತು ನೀ ಕೆಲ ನಿಮಿಷ, ಸುಖಿಸು ಹೂ –ನರುಗಂಪ
ಪಯಣ ಪರಿಯೇ ಮುದವೊ ಮುದ್ದುರಾಮ ॥

ಕಾತರ, ಚಿಂತೆ, ಉಬ್ಬಸ ಎಲ್ಲರ ಬದುಕಿನಲ್ಲೂ ಇದ್ದದ್ದೇ. ಅದನ್ನು ಬಿಡಬೇಕು. ರೋಗ, ಅಪಘಾತ, ನೆಂಟರಿಷ್ಟರ ಸಾವು, ಮಿತ್ರರೆನಿಸಿಕೊಂಡವರಿಂದ ಆಗುವ ಮೋಸ, ವಂಚನೆ–ಇತ್ಯಾದಿಗಳು ಯಾರ ಜೀವನದಲ್ಲಿಲ್ಲ? ಅದನ್ನು ನೆನೆದು ಅಳುವುದು ವ್ಯರ್ಥ. ಬೆಟ್ಟದ ದಾರಿಯಲ್ಲಿ ಕಂಡಿದ್ದ ಒಂದು ಚೆಲುವಾದ ಹೂವಿನ ನರುಗಂಪನ್ನು ನಾವು ನೆನಪಿಸಿಕೊಂಡು ಸುಖಿಸಬೇಕು. ಪ್ರಯಾಣದ ರೀತಿಯೇ ಆನಂದವನ್ನು ತರುತ್ತದೆ ಅಲ್ಲವೆ?

ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ!. ನಮ್ಮಲ್ಲೇ ಅಂತರ್ಯಾಮಿಯಾಗಿರುವ ಭಗವಂತನನ್ನು ನಾವು ಎಲ್ಲೆಲ್ಲೋ ಹುಡುಕಿ ಸಿಗದೆ ನಿರಾಶರಾಗುತ್ತೇವೆ. ಹಾಗೆಯೇ ಸುಖದ ಬುಗ್ಗೆ ನಮ್ಮ ಎದೆಯಲ್ಲೇ ಇದೆ. ಅದನ್ನು ಮರೆತು ಎಲ್ಲೆಲ್ಲೋ ಸುಖವನ್ನು ಹುಡುಕಲು ಅಲೆದಾಡಿ ಬಳಲುತ್ತೇವೆ. ಇದನ್ನು ಮುದ್ದುರಾಮ ಮುದ್ದಾಗಿ, ಹಾಸ್ಯಪೂರ್ಣವಾಗಿ ಹೇಳುತ್ತಾನೆ–

ಟೋಪಿಯಿದೆ ತಲೆ ಮೇಲೆ ಎನುವುದನೆ ನೀ ಮರೆತು
ಮನೆ ಮೂಲೆ ಮೂಲೆಯಲಿ ಅರಸುತಿರುವೇಕೆ?
ಸಂತಸದ ಈ ಚಿಲುಮೆ ಇದೆ ನಮ್ಮ ಎದೆಯಲ್ಲೆ
ಬಾಚಿಕೋ ಸುಖಸೆಲೆಯ ಮುದ್ದುರಾಮ

ಟೋಪಿ ತಲೆಯ ಮೇಲೆ ಇದ್ದರೂ ಅದು ಅಲ್ಲಿದೆಯೆಂಬ ಅರಿವಿಲ್ಲದೆ ಅದಕ್ಕಾಗಿ ಮನೆಯನ್ನೆಲ್ಲ ಹುಡುಕಿದ ಅನುಭವ ನಮ್ಮೆಲ್ಲರದೂ ಆಗಿದೆ. ಎಷ್ಟೋ ಬಾರಿ ಕನ್ನಡಕ ಹಾಕಿಕೊಂಡಿದ್ದು ಅದ ಎಲ್ಲೋ ಕಳೆದು ಹೋಯಿತೆಂದು ಹುಡುಕಿದ್ದೇನೆ. ಸಂತೋಷದ, ಆನಂದದ, ಹರ್ಷದ, ಕಾರಂಜಿ ನಮ್ಮ ಎದೆಯಲ್ಲೇ ಇದೆ. ಆನಂದ ಸ್ವರೂಪನಾದ ಪರಮಾತ್ಮನು ಹೃದಯನಿವಾಸಿಯೆಂದು ಉಪನಿಷತ್ತುಗಳು ಘೋಷಿಸುತ್ತಿವೆ. ಅವನನ್ನು ಹುಡುಕಲು ಕಾಶೀ, ರಾಮೇಶ್ವರ ಎಂದು ಎಲ್ಲೆಲ್ಲೋ ನಮ್ಮ ಯಾತ್ರೆ. ನಮ್ಮಲ್ಲೇ ಇರುವ ಸಂತಸದ ಸೆಲೆಯನ್ನು ಮರೆತಿರುವುದೇಕೆ?

ಜೀವನದಲ್ಲಿ ಸುಖದ ಅಭಿವ್ಯಕ್ತಿ ನಗುವಿನಿಂದ. ನಗು ಸಹಜ ಧರ್ಮ ಎಂದಿದ್ದಾನೆ ಮಂಕುತಿಮ್ಮ. ನಗುವೇ ಬದುಕಿನ ಅತ್ಯುತ್ತಮ ಔಷಧ (Laughter is the best medicine) ಎನ್ನುತ್ತದೆ. ಇಂಗ್ಲೀಷ್ ಗಾದೆ. ಮನುಷ್ಯನನ್ನು ಬಿಟ್ಟರೆ ಬೇರೆ ಯಾವ ಪ್ರಾಣಿಗೆ ನಗುವಿನ ವರವಿದೆ? ನಗುವೇ ಇಲ್ಲದ ನಾಟಕವನ್ನು ನೋಡಲು ಯಾರು ಬಂದಾರು? ಭರತನೂ ನಾಟ್ಯ ಶಾಸ್ತ್ರದಲ್ಲಿ ಹಾಸ್ಯವೂ ನವರಸಗಳಲ್ಲಿ ಒಂದೆಂದು ಪರಿಗಣಿಸಿದ್ದಾನೆ. ನಗುವಿನ ಬಗೆಗೆ ಮುದ್ದುರಾಮನ ಮಾತು.

ಜಗ ಸುತ್ತಿ ಬರಬಹುದು, ಕಲಿಯದಿರೆ ಏನಂದ?
ಅಗ ಅಗೆಯಬಹುದು ನೀ, ಉದ್ಧಾರವೇನು?
ನೊಗ ಹೂಡಬಹುದು ನೀ ಬಿತ್ತದಿರೆ ಬಂತೇನು
ಮೊಗ ನಗದೆ ಸೊಗವೆಲ್ಲಿ ಮುದ್ದುರಾಮ ॥

ಕೆಲವರು ಲೋಕವನ್ನೆಲ್ಲ ಸುತ್ತಿ ಬರುತ್ತಾರೆ. ಸಾವಿರಾರು ಸಾವಿರಗಳನ್ನು ಖರ್ಚು ಮಾಡಿರುತ್ತಾರೆ. ಆ ದೇಶಗಳಲ್ಲಿ ಏನು ವಿಶೇಷ? ಏನನ್ನು ಕಲಿತಿರಿ ಎಂದು ಕೇಳಿದರೆ, ಕಣ್ಣು ಕಣ್ಣು ಬಿಡುತ್ತಾರೆ. ಒಂದೊಂದು ದೇಶದಲ್ಲೂ ನಗರದಲ್ಲೂ ಊರಿನಲ್ಲೂ ಕಲಿಯಬೇಕಾದದ್ದು ಎಷ್ಟೋ ಇರುತ್ತದೆ. ಏನನ್ನೂ ಕಲಿಯದೆ ಬಂದರೆ ಏನು ಚಂದ? ಅಗ ಎಂದರೆ ಬೆಟ್ಟ – ಅದನ್ನು ಅಗೆದರೂ ಸಾಧಿಸಿದ್ದೇನು? ನೇಗಿಲಿನ ನೊಗವನ್ನು ಹೂಡಬಹುದು, ಬಿತ್ತನೆ ಮಾಡದಿದ್ದರೆ ಫಲವೇನು? ನೊಗ ಹೂಡಿದ್ದು ವ್ಯರ್ಥ. ಹಾಗೆ ಮುಖದಲ್ಲಿ ನಗು ಮೂಡದಿದ್ದರೆ ಸೊಗ (ಸ್ವರ್ಗ) ಎಲ್ಲಿಯದು? ನಗುವಿಲ್ಲದ ಸ್ವರ್ಗ ನಿಷ್ಪ್ರಯೋಜಕ. ಅಷ್ಟೇ ಅಲ್ಲ.

ಸುಂಕ ತರಬೇಕೇನು ನಗೆಪುಷ್ಪ ದರ್ಪಣೆಗೆ?
ನಗೆ ಹೊನಲಿಗೆಲ್ಲಿದೆಯೊ ಅಡೆತಡೆಯ ಕಟ್ಟೆ?
ಸಂಕಟವ ಸದೆಬಡಿವ ಸಾಧನವೊ ನಗೆಸೊಬಗು।
ತೇಲಬಿಡು ನಗೆಮೋಡ ಮುದ್ದುರಾಮ ॥

ಭಗವಂತನಿಗೆ ಹೂವನ್ನು ಅರ್ಪಿಸಿದಂತೆ ಮಿತ್ರರಿಗೆ ನಗುವೆಂಬ ಹೂವನ್ನು ಅರ್ಪಿಸಬೇಕು. ಹಾಗೆ ಮಾಡುವುದಕ್ಕೆ ಯಾರೂ ಸುಂಕವನ್ನು ತೆರಬೇಕಾಗಿಲ್ಲ. ಯಾವ ಸರ್ಕಾರದವರೂ ಸದ್ಯ ಇದುವರೆಗೂ ನಕ್ಕರೆ ಇಷ್ಟು ತೆರಿಗೆ ಎಂಬ ನಿಯಮವನ್ನು ಮಾಡಿಲ್ಲ. ನಗೆಯ ಹೊನಲಿಗೆ, ಎಂದರೆ ಹಾಸ್ಯದ ಪ್ರವಾಹಕ್ಕೆ ಅಡ್ಡ ಹಾಕುವ ಕಟ್ಟೆಯನ್ನು ಯಾರೂ ಕಟ್ಟಿಲ್ಲ. ಯಾರು ಯಾರನ್ನು ಬೇಕಾದರೂ ಹಾಸ್ಯಕ್ಕೆ ಈಡು ಮಾಡಬಹುದು. ನಗೆಯ ಸೊಬಗು ಸಂಕಟವನ್ನು ಸದೆಬಡಿಯುವ ಪ್ರಬಲ ಸಾಧನ. ಆದ್ದರಿಂದ ಮುದ್ದುರಾಮನ ಸಲಹೆ ಎಲ್ಲರಿಗೂ ಏನೆಂದರೆ ನಗೆ ಮೋಡವನ್ನು ತೇಲಿ ಬಿಡಬೇಕು. ಮನಸ್ಸನ್ನು ಹಗುರಗೊಳಿಸಲು ನಗುವಿಗಿಂತ ಉತ್ತಮ ಸಾಧನವಿಲ್ಲ. ಅದು ಎಲ್ಲರೂ ಬಳಸಬಹುದಾದ ಅಸ್ತ್ರ. ಯಾರಿಗೂ ಅಪಾಯವನ್ನುಂಟು ಮಾಡದ ಅಸ್ತ್ರ. ಅನೇಕರಿಗೆ ಇತರರ ಮುಂದೆ ತಮ್ಮ ಗೋಳಿನ ಕಥೆಯನ್ನು ಹೇಳುವ ಚಾಳಿ. ಎಲ್ಲರಿಗೂ ತಮ್ಮ ತಮ್ಮ ಚಿಂತೆಗಳೇ ಹಾಸಲುಂಟು, ಹೊದೆಯಲುಂಟು. ಇನ್ನು ನಮ್ಮ ಗೋಳನ್ನು ಕೇಳಲು ಅವರಿಗೆಲ್ಲಿ ಅವಕಾಶ? ಮುದ್ದುರಾಮ ಹೇಳುತ್ತಾನೆ –

ಗೋಳಕತೆಯನೆ ಹೇಳಿ ನೋವ ಹಂಚುವೆ ಏಕೆ?
ನಕ್ಕು ಬಿಡು ಕಿಲಕಿಲನೆ, ಅದೆ ಬಾಳ ಭಾಗ್ಯ.
ತರುವಿಂದ ಕೆಳಬಿದ್ದ ಎಲೆಯಂತೆ ಗೊಣಗುವಿಕೆ
ಸುಖ ಹಂಚಿದರೆ ಚೆಂದ ಮುದ್ದುರಾಮ॥

ನಮ್ಮ ಗೋಳಿನ ಕಥೆಯನ್ನು ಇತರರಿಗೆ ಹೇಳುವುದೆಂದರೆ, ನೋವೆಂಬ ಕಹಿ ಪ್ರಸಾದವ ಅವರಿಗೆ ಹಂಚಿದಂತೆ. ಹಾಗೆ ಮಾಡಬಾರದು. ನಮ್ಮ ಕಷ್ಟ, ತೊಂದರೆ, ದುಃಖ ಎಷ್ಟಿದ್ದರೂ ಅದನ್ನೆಲ್ಲ ಮರೆತು ಕಿಲಕಿಲನೆ ನಕ್ಕು ಬಿಡಬೇಕು. ಅದೇ ಬಾಳಿನ ಭಾಗ್ಯ. ಮರದಿಂದ ಬಿದ್ದ ಒಣ ಎಲೆ ಅಸ್ಪಷ್ಟವಾಗಿ ಶಬ್ದ ಮಾಡುವಂತೆ ಗೊಣಗುವುದು ಸರಿಯಲ್ಲ. ಯಾರಿಗಾದರೂ ಹಂಚಬೇಕಾಗಿದ್ದರೆ ಸುಖವನ್ನು, ಸಂತೋಷವನ್ನು ಹಂಚಬೇಕು, ಅದೇ ಬದುಕಿನಲ್ಲಿ ಚೆಂದ. ಜೀವನದಲ್ಲಿರುವ ಒಂದು ಸತ್ಯವೇನೆಂದರೆ ಎಲ್ಲರೂ ತಮ್ಮ ನೋವನ್ನು ತಾವೇ ಅನುಭವಿಸಬೇಕು. ಅದನ್ನು ಹೇಗೆ ಎದುರಿಸಬೇಕು ಎಂದು ಮುದ್ದುರಾಮ ತಿಳಿಸುತ್ತಾನೆ–

ಯಾರೆಷ್ಟೇ ಪ್ರೀತಿಸಲಿ, ಯಾರೆಷ್ಟೇ ಕರುಣಿಸಲಿ
ತನ್ನ ನೋವನು ತಾನೆ ಅನುಭವಿಸಬೇಕು
ಕುಂದದಿರು ಕೇಡಿನಲಿ, ತೊಳಲದಿರು ತೊಡರಿನಲಿ
ನಗುವಿನೌಷಧ ಲೇಸು ಮುದ್ದುರಾಮ ॥

ನಮ್ಮನ್ನು ಯಾರೋ ಅತ್ಯಂತ ಪ್ರೀತಿಸುತ್ತಿರಬಹುದು. ಆದರೆ ಅವರು ನಮ್ಮ ನೋವನ್ನು ತೆಗೆದುಕೊಳ್ಳಲಾರರು. ವ್ಯಕ್ತಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದರೆ ಅವನೇ ಆ ನೋವನ್ನು ಸಹಿಸಬೇಕಾಗುತ್ತದೆ. ಪ್ರೀತಿಸುವ ಹೆಂಡತಿಯೋ ಮಕ್ಕಳೋ ಆ ನೋವನ್ನು ಹಂಚಿಕೊಳ್ಳಲಾಗುವುದಿಲ್ಲ. ದೇವರೋ ರಾಜನೋ ಕರುಣಿಸಿದರೂ ಅಷ್ಟೇ. ತನ್ನ ನೋವನ್ನು ತಾನೇ ಅನುಭವಿಸಬೇಕು. ಆದ್ದರಿಂದ ಮನುಷ್ಯನು ಕೇಡಿನಲ್ಲಿ ಕುಂದದೆ, ತೊಡರಿನಲ್ಲಿ ತೊಳಲದೆ ಬದುಕಬೇಕು. ಇಂತಹ ಕ್ಷಣಗಳಲ್ಲಿ ನಗುವಿನೌಷಧ ಲೇಸು ಎನ್ನುತ್ತಾನೆ ಮುದ್ದುರಾಮ.

ಮುದ್ದುರಾಮನ ಚಿಂತನೆಗಳಲ್ಲಿ ಉಪನಿಷತ್ತುಗಳ ಸಿದ್ಧಾಂತಗಳು ಕೆಲವೊಮ್ಮೆ ಹಾಸುಹೊಕ್ಕಾಗಿ ಸೇರಿಕೊಳ್ಳುತ್ತವೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯ ಮನೋಯುಕ್ತ ಭೋಕ್ತೇತ್ಯಾಹುರ್ಮನೀಷಿಣಂ॥

ಎಂಬುದು ಕಠೋಪನಿಷತ್ತಿನ ಮಂತ್ರ.

ಆತ್ಮನು ರಥದಲ್ಲಿ ಕುಳಿತಿರುವ ಯೋಧ. ಶರೀರವೇ ಅವನ ರಥ. ಬುದ್ಧಿಯೇ ಆ ರಥವನ್ನು ನಡೆಸುವ ಸಾರಥಿ. ಇಂದ್ರಿಯಗಳು ಶರೀರವೆಂಬ ರಥವನ್ನು ಎಳೆದೊಯ್ಯುವ ಕುದುರೆಗಳು. ಅವನ್ನು ನಿಯಂತ್ರಿಸುವ ಹಗ್ಗ (ಲಗಾಮು) ಮನಸ್ಸು. ವಿಷಯಗಳು ರಥದ ಓಡುವ ಪ್ರದೇಶ. ಇಂದ್ರಿಯ ಮನೋಯುಕ್ತನಾದ ಆತ್ಮನು ಭೋಕ್ತಾ ಎಂದು ಮೇಲಿನ ಉಪನಿಷನ್ಮಂತ್ರಗಳ ಭಾವಾರ್ಥ. ಮುದ್ದುರಾಮನ ವಚನದಲ್ಲಿ ಇದು ಪ್ರತಿಫಲಿತವಾಗಿರುವುದನ್ನು ನೋಡಿರಿ –

ಈ ದೇಹರಥಕೊಬ್ಬ ಅರಿವು ಸಾರಥಿಬೇಕು
ಇಂದಿನಶ್ವವ ರಥಕೆ ನೀ ಹೂಡಬೇಕು.
ನೀ ಮೌನ ಕಡಿವಾಣ ಹಿಡಿಯದಿರೆ ಆಪತ್ತು
ಮನ ಶಾಂತವಾಗಿರಲಿ ಮುದ್ದುರಾಮ ॥

ದೇಹವೇ ರಥ, ಅರಿವು ಸಾರಥಿ ಎಂಬುದು ಉಪನಿಷತ್ತಿಗೆ ಸಮಾನವಾಗಿದೆ. ಇಂದಿನಶ್ವವ ಎಂದರೇನು? ಕವಿಯ ಮನಸ್ಸಿನಲ್ಲಿ ಇಂದ್ರಿಯಾಶ್ವ ಇದ್ದಿರಬಹುದೆ? 'ಮೌನ ಕಡಿವಾಣ' ಎಂಬುದಕ್ಕೆ ಬದಲಾಗಿ 'ಮನದ ಕಡಿವಾಣ' ಎಂದರೆ ಉಪನಿಷದರ್ಥ ಹೊಂದಿಕೊಳ್ಳುತ್ತದೆ. ಮನ ಶಾಂತವಾಗಿರಲಿ ಎಂಬ ಮುಂದಿನ ಮಾತಿಗೂ ಅದು ಸರಿಯಾಗುತ್ತದೆ.

ಹೀಗೆ ಮುದ್ದುರಾಮನ ವಚನಗಳು ಅಥವಾ ಮುಕ್ತಕಗಳು ಅಥವಾ ಚೌಪದಿಗಳು ನಮ್ಮನ್ನು ಚಿಂತನೆಗೆ ಹೆಚ್ಚುತ್ತವೆ. ಅವುಗಳ ಗಂಭೀರಾಧ್ಯಯನ ಆವಶ್ಯಕ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾವೇರಿ ತೀರ್ಪು ವಿರೋಧಿಸಿ ಸುಪ್ರೀಂಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲು ಕಾವೇರಿ ನದಿ ರಕ್ಷಣಾ ಸಮಿತಿ ನಿರ್ಧಾರ

ಮೈಸೂರು, ಏ.28(ಎಸ್‌ಪಿಎನ್)– ಕರ್ನಾಟಕ ಮತ್ತು ತಮಿಳುನಾಡು ಕಾವೇರಿ ನದಿ ನೀರು ಹಂಚಿಕೆ ಸಂಬಂಧ 2018ರ ಸುಪ್ರೀಂಕೋರ್ಟ್ ತೀರ್ಪಿನಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಹಾಗಾಗಿ ಈ ತೀರ್ಪನ್ನು ವಿರೋಧಿಸಿ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ಕಾವೇರಿ ನದಿ ರಕ್ಷಣಾ ಸಮಿತಿ ಮಂಗಳವಾರ ನಿರ್ಧರಿಸಿದೆ.

ಮೈಸೂರು ಜಲದರ್ಶಿನಿಯಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರ ನೇತೃತ್ವದಲ್ಲಿ ನಡೆದ ಪೂರ್ವ ಸಿದ್ಧತೆ ಸಭೆ ಬಳಿಕ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಸಮಿತಿ, 2018ರ ತೀರ್ಪಿನಿಂದ ರಾಜ್ಯಕ್ಕೆ ಸಾಕಷ್ಟು ಅನ್ಯಾಯವಾಗಿದೆ. ಸದ್ಯಕ್ಕೆ 284.75 ಟಿಎಂಸಿ ನೀರು ನಮ್ಮ ರಾಜ್ಯಕ್ಕೆ ಹಂಚಿಕೆಯಾಗಿದೆ. ಇನ್ನೂ ಹೆಚ್ಚುವರಿಯಾಗಿ 70 ಟಿಎಂಸಿ ನೀರು ಹಂಚಿಕೆ ಮಾಡಬೇಕು ಹಾಗೂ ಹೆಚ್ಚುವರಿಯಾಗಿ ಕಾವೇರಿಕೊಳ್ಳದಲ್ಲಿ ಹರಿದು ಸಮುದ್ರ ಸೇರುವ ನೀರನ್ನು ತಡೆಹಿಡಿಯಲು ಅನುಮತಿ ನೀಡುವಂತೆ ಆಗ್ರಹಿಸಿ ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತ್ಯೇಕ ಪೀಠ ಪ್ರಸ್ತಾಪ: ಈ ಸಂಬಂಧ ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರು, ಮೂರು ದಿನಗಳ ಕಾಲ ಪ್ರವಾಸ ಕೈಗೊಂಡು ಕೊಡಗಿನ ಬಾಗಮಂಡಲದ ತಲಕಾವೇರಿಯಿಂದ ಅಧ್ಯಯನ ಆರಂಭಿಸಿ, ಹಾರಂಗಿ ಅಣೆಕಟ್ಟು, ಹೇಮಾವತಿ ಅಣೆಕಟ್ಟು ವೀಕ್ಷಣೆ ಮಾಡಿ, ಸ್ಥಳೀಯ ರೈತರು, ಕೃಷಿ ಕಾರ್ಮಿಕರ ಜತೆ ಸಮಾಲೋಚನೆ ನಡೆಸಲಾಗಿದೆ. ಅಂತೆಯೇ ಕಾವೇರಿ ನದಿ ನೀರು ಹಂಚಿಕೆ ಸಂಬಂಧ ತ್ವರಿತವಾಗಿ ವಿಚಾರಣೆ ನಡೆಸಲು ಪ್ರತ್ಯೇಕ ಪೀಠ ರಚಿಸುವುದಾಗಿಯೂ ಸುಪ್ರೀಂಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ. ಈ ವಿಚಾರ ಸಂಬಂಧ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ ಬೆನ್ನಿಗೆ ಕರ್ನಾಟಕ ಸರ್ಕಾರವೂ ಅರ್ಜಿ ಸಲ್ಲಿಸಿದ ಬಳಿಕ ಈ ಬೆಳವಣಿಗೆ ನಡೆದಿದೆ ಎಂದು ಕಾವೇರಿ ನದಿ ರಕ್ಷಣಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಬಾರಿ ರಾಜ್ಯದಲ್ಲಿ ಬೇಸಿಗೆ ತೀವ್ರವಾಗಿದೆ. ಮುಂದೆ ಮುಂಗಾರು ಕೂಡ ದುರ್ಬಲವಾಗುವ ಮುನ್ಸೂಚನೆ ಹವಮಾನ ಇಲಾಖೆಯಿಂದ ಸಿಗುತ್ತಿದೆ. ಅಲ್ಲದೆ, 2023ರಲ್ಲಿ ಇದೇ ಪರಿಸ್ಥಿತಿ ಉಂಟಾಗಿ ರಾಜ್ಯ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದರು. ಜನ–ಜಾನುವಾರುಗಳಿಗೆ ನೀರಿಲ್ಲದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಪ್ರಸಂಗವನ್ನು ನೆನಪಿಸಿರುವ ಸಮಿತಿ, ಕಾವೇರಿ ಕೊಳ್ಳದ ಪ್ರದೇಶದಲ್ಲಿ ಸದ್ಯ ಹಿಂದಿನ ಪರಿಸ್ಥಿತಿ ಈಗಿಲ್ಲ. ಬೆಂಗಳೂರಿಗೆ ಕುಡಿಯುವ ನೀರು ಪೂರೈಸಲು ಸಾಕಾಗುತ್ತಿಲ್ಲ. ಜೊತೆಗೆ ಜನಸಂಖ್ಯೆ ಹೆಚ್ಚಳವಾಗಿರುವುದರಿಂದ ಹಿಂದಿನ ತೀರ್ಪಿನ ಪ್ರಕಾರ ಈಗಲೂ ನೀರು ಹಂಚಿಕೆ ಮಾಡುತ್ತಿರುವುದು ಅನ್ಯಾಯದ ಪರಮಾವಧಿ ಹಾಗೂ ರಾಜ್ಯದ ರೈತರ ಪಾಲಿನ ಕುಣಿಕೆಯಾಗಿ ಪರಿಣಮಿಸಿದೆ ಎಂದು ಸಮಿತಿ ಆರೋಪಿಸಿದೆ.

ಪಕ್ಕದ ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ಗೆ ಆಪೀಲು ಸಲ್ಲಿಸುವಂತೆ ರಾಜ್ಯದ ಅಡ್ವೋಕೇಟ್ ಜನರಲ್ ಅವರಿಗೆ ಕರ್ನಾಟಕ ಸಚಿವ ಸಂಪುಟ ಶನಿವಾರ ಸೂಚನೆ ನೀಡಿತ್ತು. ಕಳೆದ ವಾರ ತಮಿಳುನಾಡು ಸರ್ಕಾರವು ಸುಪ್ರೀಂಕೋರ್ಟ್ ಅರ್ಜಿ ಸಲ್ಲಿಸಿ, ರಾಜ್ಯದ ಬೆಳೆಗಳಿಗೆ ಪ್ರತಿದಿನ 24 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸೂಚಿಸಬೇಕೆಂದು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಕೋರಿತ್ತು ಎಂದು ಮಾಹಿತಿ ನೀಡಿದೆ.

ಮಳೆ ಕೊರತೆ: ಕಾವೇರಿ ಕೊಳ್ಳದ ಜನರಿಗೆ ಕುಡಿಯುವ ನೀರು ಪೂರೈಕೆ ಮತ್ತು ಕಾವೇರಿ ಸುತ್ತಲಿನ ಪ್ರದೇಶದಲ್ಲಿನ ಬೆಳೆಗಳಿಗೆ ನೀರಿನ ಅವಶ್ಯಕತೆಗಳನ್ನು ಪರಿಗಣಿಸಿ ಬಳಿಕ ತಮಿಳುನಾಡಿಗೆ ನೀರು ಪೂರೈಸುವುದಾಗಿ ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿದೆ. ಈ ಅರ್ಜಿಯಲ್ಲಿ ರಾಜ್ಯದಲ್ಲಿ ಮಳೆ ಕೊರತೆಯನ್ನೂ ಉಲ್ಲೇಖಿಸಿದೆ. ಈ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಲು ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂಕೋರ್ಟ್ ಒಪ್ಪಿಗೆ ಸೂಚಿಸಿದೆ ಎಂದು ತಿಳಿಸಿದೆ.

ನಿತ್ಯ 10 ಸಾವಿರ ಕ್ಯೂಸೆಕ್ಸ್ ನೀರಿಗೆ ಬೇಡಿಕೆ: ರಾಜ್ಯ ಜಲ ಸಂಪನ್ಮೂಲ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕಳೆದ ವಾರ ಈ ವಿವಾದ ಕುರಿತು ಪ್ರತಿಕ್ರಿಯಿಸಿ, ಕರ್ನಾಟಕವು ಪ್ರತಿನಿತ್ಯ ತಮಿಳುನಾಡಿಗೆ 10 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸುವ ಸಂಬಂಧ ಮಾಧ್ಯಮಗಳಿಗೆ ತಿಳಿಸಿದ್ದರು. ಇದೇ ಸಂದರ್ಭದಲ್ಲಿ ತನ್ನದೇ ಅಗತ್ಯತೆಗಳಿಗೆ ರಾಜ್ಯಕ್ಕೆ ನೀರಿನ ಕೊರತೆಯಿರುವ ಅಂಶ ಉಲ್ಲೇಖಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಪ್ರತಿದಿನ 10 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆಗೊಳಿಸಬೇಕೆಂಬ ಆದೇಶವನ್ನು ಪರಿಶೀಲಿಸುವಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿರುವ ಅಂಶವನ್ನು ಸಮಿತಿ ತಿಳಿಸಿದೆ.

ಪೂರ್ವ ಸಿದ್ಧತಾ ಸಭೆಯಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಾನಿಧ್ಯವಹಿಸಿದ್ದರು. ಕಾವೇರಿ ನದಿ ರಕ್ಷಣಾ ಸಮಿತಿ ಅಧ್ಯಕ್ಷ ಎಚ್.ಕೆ.ರಾಮು, ಕಾರ್ಯಾಧ್ಯಕ್ಷ ಕೆ.ಟಿ.ಚಂದ್ರು, ಖಜಾಂಚಿ ಸಿ.ಜಗದೀಶ, ಅಂದಾನಪ್ಪ, ಪದಾಧಿಕಾರಿಗಳಾದ ಮಾಲತೇಶ್ ವೈ ಅಣ್ಣಿಗೇರಿ, ಎಚ್.ಎನ್.ರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ.ಚಂದ್ರಶೇಖರ್, ಸುಬ್ರಹ್ಮಣ್ಯ, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ನಿವೃತ್ತ ಪ್ರಾಧ್ಯಾಪಕ ಪ್ರೊ.ನಾಗಣ್ಣ, ರಾಜು, ಪ್ರಶಾಂತ್ ಉಪಸ್ಥಿತರಿದ್ದರು.



ಜಲದರ್ಶಿನಿಯಲ್ಲಿ ಕಾವೇರಿ ನದಿ ರಕ್ಷಣಾ ಸಮಿತಿ ಸದಸ್ಯರ ನೇತೃತ್ವದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆ

PUBLIC NOTICE

My client Smt. Tabassum Fathima, W/o Dr. Imtiyaz Mohammed Khan, aged about 53 years, Residing at No. 7, 2nd Cross, 2nd Stage, M.G. Road, Mysuru, hereby inform the general public that, My client has initiated proceedings under the Protection of Women from Domestic Violence Act, 2005 against her husband Dr. Imtiyaz Mohammed Khan in Crl. Misc. No. 321/2018 on the file of the Hon'ble II Addl. Civil Judge & JMFC, Mysuru, wherein by order dated 22/01/2021 the Hon'ble Court has been pleased to grant right of residence in below mentioned property in favour of my client and her daughter; it has come to my client knowledge that Dr. Imtiyaz Mohammed Khan is attempting to alienate/sell the said property with an intention to defeat my client lawful residential rights and the said court order, hence the general public are hereby cautioned that any person intending to purchase or deal with the said property shall do so at their own risk and any such transaction, without providing alternative residential accommodation as per law, would amount to violation of the subsisting court order, and the purchaser or third party shall be bound by the outcome of the said proceedings and shall have no claim against my client in future.

SCHEDULE

Property bearing No 7, 2nd cross, 2nd stage, MG Road, Udayagiri, Mysuru, measuring East to West 40 Sq mtr and North to south 60 Sq mtr, in altogether it measure 2400 sq Mt, bounded by: East: Site No 8, West: Site No 6 North: Road, South: Site No 20

Sd/- G.P.Chandrashekar,
Advocate, KAR-1041/98
No 7, 2nd floor, Siddappaji temple building, K.G.Koppal,
Mysuru. Ph: 9886692014
Place: Mysuru
Date; 28-04-26

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀಮತಿ ಚಂದ್ರಮ್ಮ (ಆಧಾರ್ ಸಂಖ್ಯೆ: 9058 5331 7717), ಇವರು ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಲಾದ ಸ್ಥಿರ ಆಸ್ತಿಯನ್ನು ಶ್ರೀ ಕಿಶನ್ ಕುಮಾರ್ ಬೆಂಗಳೂರು (ಆಧಾರ್ ಸಂಖ್ಯೆ: 2702 3461 0401), ಬಿನ್ ನಾಗೇಂದ್ರ ಕುಮಾರ್ (ಇವರ ಪರವಾಗಿ ಇವರ ಸಹೋದರ ಹಾಗೂ ಸಾಮಾನ್ಯ ಅಧಿಕಾರ ಪತ್ರ (GPA) ಹೊಂದಿರುವ ಶ್ರೀ ಸೂರಜ್ ಕುಮಾರ್ ಬಿ, ಆಧಾರ್ ಸಂಖ್ಯೆ: (5224 2505 6814) ಇವರಿಂದ ಖರೀದಿಸಿರುತ್ತಾರೆ.

ಆಸ್ತಿಯ ಅನುಸೂಚಿ (SCHEDULE)

- ಆಸ್ತಿಯ ಪ್ರಕಾರ: ನಿವೇಶನ ಸಂಖ್ಯೆ: 99 (12 x 18)
- ಸ್ಥಳ: ಮೈಟೆಕ್ ಎಸ್ಟೇಟ್ ಡೆವಲಪರ್ಸ್ ಮತ್ತು ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್, ಮೈನಗೆರೆ, ವಾಜಮಂಗಲ ಗ್ರಾಮ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.
- ವಿಸ್ತೀರ್ಣ: 12 x 18 = ಒಟ್ಟು 216.00 ಚದರ ಮೀಟರ್‌ಗಳು.

ಮೇಲೆ ತಿಳಿಸಲಾದ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಆಸಕ್ತಿ, ಹಕ್ಕುಸ್ವಾಮ್ಯ ಅಥವಾ ಆಕ್ಷೇಪಣೆಗಳಿದ್ದಲ್ಲಿ (ಅಡಮಾನ, ಲೀನ್, ಶುಲ್ಕ ಅಥವಾ ಉತ್ತರಾಧಿಕಾರ ಸೇರಿದಂತೆ), ಅಂತಹವರು ಈ ಪ್ರಕಟಣೆ ಪ್ರಕಟವಾದ 7 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತವಾಗಿ ತಿಳಿಸಬೇಕೆಂದು ಕೋರಲಾಗಿದೆ. ನಿಗದಿಪಡಿಸಿದ ಅವಧಿಯೊಳಗೆ ಯಾವುದೇ ಹಕ್ಕು ಅಥವಾ ಆಕ್ಷೇಪಣೆಗಳು ಬರದಿದ್ದಲ್ಲಿ, ಅಂತಹ ಯಾವುದೇ ಹಕ್ಕುಗಳಿಲ್ಲವೆಂದು ಪರಿಗಣಿಸಲಾಗುವುದು ಮತ್ತು ಈ ಖರೀದಿ ವ್ಯವಹಾರವು ಅಂತಿಮವಾಗಿದ್ದು, ಎಲ್ಲಾ ರೀತಿಯ ಋಣಭಾರಗಳಿಂದ ಮುಕ್ತವಾಗಿದೆ ಎಂದು ಭಾವಿಸಲಾಗುವುದು.

ಸಹಿ/–[ನಿರಂಜನ್ ಜಿ. ಎಸ್] ವಕೀಲರು.
ಸಂಖ್ಯೆ: KAR/ 4802/2023,
No.2610, Ground floor, Valmiki Road, V V Mohalla, Mysore-570002
ದಿನಾಂಕ: 28.04.2026 ಫೋನ್: 9008351834
ಸ್ಥಳ: ಮೈಸೂರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹುಣಸೂರು

ಜಿಲ್ಲೆ: ಮೈಸೂರು) ಪಿನ್– 571 105 (ರಾಜ್ಯ:ಕರ್ನಾಟಕ
ಕ್ರಮ ಸಂಖ್ಯೆ:ಕೃ.ಉ.ಮಾ.ಸ.(ಹು)/28/2026–27 ದಿನಾಂಕ: 23.04.2026

ಹಂಚಿಕೆ ಪ್ರಕಟಣೆ

ಸಮಿತಿಯ ಮುಖ್ಯ ಮಾರುಕಟ್ಟೆ ಹಾಗೂ ರತ್ನಪುರಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಖಾಲಿಯಿರುವ ಒಟ್ಟು ವಿವಿಧ ಅಳತೆ ಮತ್ತು ದರಗಳ 12 ಸಂಖ್ಯೆ ಗೋದಾಮು ಮತ್ತು ಅಂಗಡಿ ಮಳಿಗೆಗಳನ್ನು ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ ಮತ್ತು 33 ತಿಂಗಳಿಗೊಮ್ಮೆ ಪ್ರತಿ ಶತ ಶೇ.5 ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕದ ದರಗಳನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಇಲಾಖೆಯ 2004 ಹಂಚಿಕೆ ನಿಯಮಗಳನ್ವಯ ಜೇಷ್ಠತೆಯ ಆಧಾರದ ಮೇಲೆ ಹಂಚಿಕೆ ಮಾಡಲು ಪೇಟೆಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಂಚಿಕೆ ಮಾಡಲು ಉದ್ದೇಶಿಸಿರುವ ಕಟ್ಟಡಗಳ ಪೈಕಿ 02 ಸಂಖ್ಯೆ ಕಟ್ಟಡಗಳನ್ನು ಪರಿಶಿಷ್ಟ ಜಾತಿಯವರಿಗೆ, ತಲಾ 01 ಕಟ್ಟಡಗಳನ್ನು ಪರಿಶಿಷ್ಟ ಪಂಗಡ, ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ ಮೀಸಲಿರಿಸಲಾಗಿರುತ್ತದೆ. ಉಳಿದಂತೆ ಕಟ್ಟಡಗಳ ಮಾಸಿಕ ಲೀವ್ ಅಂಡ್ ಲೈಸೆನ್ಸ್ ಶುಲ್ಕ ಮತ್ತು ಠೇವಣಿ, ಮೀಸಲಾತಿ ವಿವರ, ಮೀಸಲಿರಿಸಿದ ಕಟ್ಟಡಗಳ ಅಳತೆ ಮತ್ತು ಸಾಮರ್ಥ್ಯ ಇತ್ಯಾದಿ ವಿವರಗಳನ್ನು ಕಛೇರಿಯಲ್ಲಿ ಸಂಪರ್ಕಿಸಿ ಪಡೆಯುವುದು.


ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ ಹುಣಸೂರು
ಸಹಿ/– ಆಡಳಿತಾಧಿಕಾರಿ, ಕೃ.ಉ.ಮಾ.ಸ., ಹುಣಸೂರು
DIPR/DDMYS/110/KSMCA/99/2026-27













ಮೇ 7, ಪಾಂಡವಪುರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ

ಮಂಡ್ಯ ಸರ್ಕಲ್‌ನಿಂದ ಬೃಹತ್ ಮೆರವಣಿಗೆ, ನಿಖಿಲ್ ಕುಮಾರಸ್ವಾಮಿಗೆ ಭವ್ಯ ಸ್ವಾಗತ

ಪಾಂಡವಪುರ, ಏ.28– ಜನರೊಂದಿಗೆ ಜನತಾದಳ ಹಾಗೂ ಜೆಡಿಎಸ್ ಪಕ್ಷದ 25ನೇ ವರ್ಷದ ಬೆಳ್ಳಿ ಹಬ್ಬದ ಕಾರ್ಯಕ್ರಮವನ್ನು ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಮೇ 7ರಂದು ಪಟ್ಟಣದಲ್ಲಿ ಆಯೋಜಿಸಿದ್ದು ಈ ಕಾರ್ಯಕ್ರಮಕ್ಕೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಕ್ಷೇತ್ರದ ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಮನವಿ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಮಂಡ್ಯ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಜನರೊಂದಿಗೆ ಜನತಾದಳ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಪಕ್ಷ ಸಂಘಟನೆ ಮಾಡಲಾಗಿದೆ. ನಮ್ಮ ಕ್ಷೇತ್ರದಲ್ಲೂ ಈ ಹಿಂದೆ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು ಮಳವಳ್ಳಿಯ ಸುತ್ತೂರು ಕಾರ್ಯಕ್ರಮಕ್ಕೆ ರಾಷ್ಟ್ರಪತಿಗಳು ಹಾಗೂ ಮೇಲುಕೋಟೆಗೆ ಉಪರಾಷ್ಟ್ರಪತಿಗಳು ಆಗಮಿಸಿದ ಹಿನ್ನೆಲೆಯಿಂದಾಗಿ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು ಇದೀಗ ಆಯೋಜನೆ ಮಾಡಲಾಗಿದೆ ಎಂದರು.

ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗದ ಆವರಣದಲ್ಲಿ ಬೃಹತ್ ವೇದಿಕೆ ನಿರ್ಮಿಸಿ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಅಂದು ಮಂಡ್ಯ ಸರ್ಕಲ್‌ನಿಂದ ಬೆಳಗ್ಗೆ 10 ಗಂಟೆಗೆ ತೆರೆದ ವಾಹನದ ಮೂಲಕ ಬೃಹತ್ ಮೆರವಣಿಗೆ ಮೂಲಕ ನಿಖಿಲ್ ಕುಮಾರಸ್ವಾಮಿ ಅವರನ್ನು ವೇದಿಕೆಗೆ ಕರೆತರಲಾಗುವುದು, ವಾಹನಗಳ ಪಾರ್ಕಿಂಗ್ ಮಾಡಲು ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಲಾಗುವುದು. ಪ್ರತಿ ಜಿಪಂಗೆ 10 ಮಂದಿ ಮುಖಂಡರನ್ನು ನೇಮಕ ಮಾಡಲಾಗಿದ್ದು ಜನರನ್ನು ಕರೆತರುವ ಜವಾಬ್ದಾರಿ ನೀಡಲಾಗಿದೆ ಎಂದರು.



ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ತಾಯಿ ಹೃದಯಿ ಎಚ್‌ಡಿಕೆ

ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ತಾಯಿ ಹೃದಯಿ, ಬಡವರು, ಮಹಿಳೆಯರು, ರೈತರು ಹಾಗೂ ವಿಕಲಚೇತನರ ಮೇಲೆ ವಿಶೇಷ ಅಭಿಮಾನ ಇಟ್ಟುಕೊಂಡಿದ್ದಾರೆ. ಅವರ ಮಗ ನಿಖಿಲ್ ಕುಮಾರಸ್ವಾಮಿ ಅವರು ಸಹೃದಯಿ ವ್ಯಕ್ತಿತ್ವರೂಡಿಸಿಕೊಂಡಿದ್ದಾರೆ. ಅಂದಿನ ಕಾರ್ಯಕ್ರಮಕ್ಕೆ ರಾಜ್ಯದ ನಾಯಕರಾದ ಸುರೇಶ್ ಬಾಬು, ಕೃಷ್ಣಾರೆಡ್ಡಿ ಸೇರಿದಂತೆ ಜಿಲ್ಲೆಯ ಎಲ್ಲಾ ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ಮುಖಂಡರು ಭಾಗವಹಿಸಲಿದ್ದಾರೆ. ನಮ್ಮ ಯುವನಾಯಕ ನಿಖಿಲ್ ಕುಮಾರಸ್ವಾಮಿ ಅವರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. – ಸಿ.ಎಸ್.ಪುಟ್ಟರಾಜು

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಮಾತನಾಡಿ, ಜನರೊಂದಿಗೆ ಜನತಾದಳ ಕಾರ್ಯಕ್ರಮವು ಪಕ್ಷದ ಸಂಘಟನೆಯ ಜತೆಗೆ ವಿರೋಧ ಪಕ್ಷದ ಕಾಂಗ್ರೆಸ್ ಸರಕಾರದ ದುರಾಳಿತದ ಬಗ್ಗೆ ಜನರಿಗೆ ಅರಿವು ಮೂಡಿಸುವುದಾಗಿದೆ. ಈಗಾಗಲೆ ದೇಶದಲ್ಲಿ ಕಾಂಗ್ರೆಸ್ ಪಕ್ಷ ನಿರ್ಮೂಲನೆ ಅಂಚಿನಲ್ಲಿದೆ. ವಿರೋಧ ಪಕ್ಷವಾಗಿಯೂ ಉಳಿಯಲು ಸಾಧ್ಯವಾಗುತ್ತಿಲ್ಲ. ಸಂಸತ್‌ನಲ್ಲಿ ನಡೆದ ಮಹಿಳಾ ಮೀಸಲಾತಿಯ ಪರವಾದ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸುವ ಮೂಲಕ ಮಹಿಳಾ ವಿರೋಧಿ ಎಂಬುದನ್ನು ಸಾಬೀತುಪಡಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ದೇಶದ ಮಹಿಳೆಯರು ಕಾಂಗ್ರೆಸ್‌ಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಕಿಡಿಕಾರಿದರು.

ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಪಕ್ಷವನ್ನು ಸಂಘಟಿಸಿದ್ದಾರೆ. ಕ್ಷೇತ್ರದಲ್ಲಿ ನಡೆದ ಎಲ್ಲಾ ಸ್ಥಳೀಯ ಸಂಸ್ಥೆಯ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವ ಮೂಲಕ ಪಕ್ಷವನ್ನು ಬಲಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ನಡೆಯುವ ಚುನಾವಣೆಗಳಲ್ಲಿ ಈ ಫಲಿತಾಂಶವೇ ದಿಕ್ಸೂಚಿಯಾಗಲಿದ್ದು, ಜೆಡಿಎಸ್ ಬೆಂಬಲಿತರು ಆಯ್ಕೆಯಾಗಲಿದ್ದಾರೆ ಎಂದರು.

ಸಭೆಯಲ್ಲಿ ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಎಚ್.ಮಂಜುನಾಥ್, ಟಿಎಪಿಸಿಎಂಎಸ್ ಅಧ್ಯಕ್ಷ ಗಿರೀಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಪುಟ್ಟಸ್ವಾಮೀಗೌಡ, ಯೋಗೇಶ್, ನಂಜೇಗೌಡ, ದ್ಯಾವಪ್ಪ, ಎಸ್.ಆನಂದ್, ಸಿ.ಎಸ್.ಗೋಪಾಲ ಗೌಡ, ಆರ್.ಸೋಮಶೇಖರ್, ಗಿರೀಶ್, ರಾಧಕೃಷ್ಣ, ಬಸವರಾಜು, ಸುರೇಶ್, ಶಂಕರೇಗೌಡ, ಅಬ್ದುಲ್‌ವಾಯಿದ್ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.

ಕುರುಬರ ಸಂಘಕ್ಕೆ ಚುನಾವಣೆ ನಡೆಸಲು ಹೈಕೋರ್ಟ್ ಸೂಚನೆ

ಮಂಡ್ಯ: ಮಂಡ್ಯ ಜಿಲ್ಲಾ ಕುರುಬರ ಸಂಘದ ಮುಂದಿನ ಆಡಳಿತ ಮಂಡಳಿಯ ಆಯ್ಕೆಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ ಎಂದು ಸಂಘದ ಮಾಜಿ ನಿರ್ದೇಶಕ ಎ.ಕೃಷ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ಮಂಡಳಿಯವರ ಪರ–ವಿರೋಧದ ಜಟಾಪಟಿಗೆ ಕೊನೆಗೂ ಹೈಕೋರ್ಟ್ ಬ್ರೇಕ್ ಹಾಕಿದೆ. ಮಳವಳ್ಳಿ ಸುರೇಶ್ ನೇತೃತ್ವದ ಮಂಡ್ಯ ಜಿಲ್ಲಾ ಕುರುಬರ ಸಂಘದ ಆಡಳಿತ ಮಂಡಳಿಯ ಅವಧಿ ಮುಗಿದಿದೆ. ಆದರೂ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಸುಳ್ಳು ಮಾಹಿತಿ ನೀಡಿ, ಕಾನೂನುಬಾಹಿರವಾಗಿ ಅಧಿಕಾರದಲ್ಲಿ ಮುಂದುವರೆಯುತ್ತಿರುವುದನ್ನು ಖಂಡಿಸಿದೆ ಎಂದು ಹೇಳಿದರು.

ಹಾಲಿ ಅಧ್ಯಕ್ಷ ಸುರೇಶ್ ನೇತೃತ್ವದ ಬಣ ಮತ್ತು ವಿರೋಧಿ ಬಣಗಳ ನಡುವೆ ಆರೋಪ–ಪ್ರತ್ಯಾರೋಪ, ಪರಸ್ಪರ ವಾಕ್ಸಮರ ಜಿಲ್ಲೆಯಲ್ಲಿ ಸದ್ದು ಮಾಡಿತ್ತು ಇತ್ತೀಚೆಗೆ, ಸಂಘದ ಆವರಣದಲ್ಲೇ ಅಧ್ಯಕ್ಷ ಸುರೇಶ್ ಅವರನ್ನ ಅಡ್ಡಗಟ್ಟಿದ್ದ ಗುಂಪೊಂದು ಅವರ ಮೇಲೆ ಕಪ್ಪು ಮಸಿ ಎರಚಿ ತಮ್ಮ ಆಕ್ರೋಶವನ್ನು ಹೊರಹಾಕಿತ್ತು. ಇದೀಗ ನ್ಯಾಯಾಲಯ ಸಹಕಾರ ಸಂಘಗಳ ಉಪನಿರ್ದೇಶಕರ ಆದೇಶಕ್ಕೆ ತಡೆಯಾಜ್ಞೆ ನೀಡಿದೆ ಎಂದರು.

ಅಲ್ಲದೇ, ಮಂಡ್ಯ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಈ ಕೂಡಲೇ ಮೇಲ್ಕಂಡ ಸಂಘದ ಎಲ್ಲ ದಾಖಲಾತಿಗಳನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬೇಕು. ಕೋರ್ಟ್ ಆದೇಶದಂತೆ ಸಂಘದ ಎಲ್ಲಾ ದಾಖಲಾತಿಗಳನ್ನು ವಶಕ್ಕೆ ಪಡೆದು, ಕಾನೂನಿನ ಪ್ರಕಾರ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಂತೆ ಆಗ್ರಹಿಸಿದ್ದಾರೆ.

ಇತ್ತೀಚೆಗೆ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಜೆ.ಶಶಿಧರ್ ಎಂಬುವವರು ಕಾನೂನು ಹೋರಾಟ ಮಾಡಲಿ ಎಂದಿದ್ದರು. ಇವತ್ತು ಕಾನೂನು ಮೂಲಕವೇ ಅವರಿಗೆ ಉತ್ತರ ಕೊಟ್ಟಿದ್ದೇವೆ. ಬಹಿರಂಗವಾಗಿ ಸಮುದಾಯದ ಕ್ಷಮೆ ಕೇಳಿ ಚುನಾವಣೆ ಎದುರಿಸಿ ಮತ್ತೆ ಆಯ್ಕೆಯಾದರೆ ನಮ್ಮ ಅಭ್ಯಂತರವಿಲ್ಲ ಎಂದರು.

ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್, ಮಿತ್ರ ಪಕ್ಷಗಳ ವಿರೋಧ
ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಪ್ರತಿಭಟನೆ

ಶ್ರೀರಂಗಪಟ್ಟಣ: ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ನಡೆಯನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಸೋಮವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ವಿರುದ್ಧ ಸಾಲುಸಾಲು ಘೋಷಣೆ ಕೂಗಿದರು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ವ್ಯಕ್ತಪಡಿಸುವ ಮೂಲಕ ಮಹಿಳೆಯರಿಗೆ ಅಪಮಾನ ಮಾಡಿವೆ. ಆ ಮೂಲಕ ಮಹಿಳೆಯರ ಮತ ಕೇಳುವ ನೈತಿಕತೆ ಕಳೆದುಕೊಂಡಿವೆ. ಇಬ್ಬಗೆಯ ನೀತಿ ಪ್ರದರ್ಶಿಸಿರುವ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ಮಂಡಲದ ಅಧ್ಯಕ್ಷ ಪೀಹಳ್ಳಿ ರಮೇಶ್ ಟೀಕಿಸಿದರು.



ಶ್ರೀರಂಗಪಟ್ಟಣದಲ್ಲಿ ಬಿಜೆಪಿಯಿಂದ ಪ್ರತಿಭಟನೆ

ಶಾಸಕ ವಿನಯ್ ಕುಲಕರ್ಣಿ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿದ್ದು, ಅವರ ಪರ ಹೋರಾಟ ಮಾಡಲು ರಾಜ್ಯ ಸರ್ಕಾರ ಅನುಮತಿ ನೀಡುತ್ತದೆ. ಆದರೆ ನಿರುದ್ಯೋಗಿ ಯುವಕರು ಉದ್ಯೋಗಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಹೊರಟರೆ ಹತ್ತಿಕ್ಕುತ್ತದೆ. ಸರ್ಕಾರದ ಜನ ವಿರೋಧಿ ನೀತಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಎಸ್.ಸಿದ್ದರಾಮಯ್ಯ, ಮುಖಂಡ ಕೆ.ಎಸ್.ನಂಜುಂಡೇಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಮಾನಸ, ಪ್ರಧಾನ ಕಾರ್ಯದರ್ಶಿ ಶಕುಂತಲಾ ಮಾತನಾಡಿದರು.

ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾ ಘಟಕದ ಉಪಾಧ್ಯಕ್ಷ ಎಲ್.ಮಂಜುನಾಥ್, ಜಿಲ್ಲಾ ಘಟಕದ ಉಪಾಧ್ಯಕ್ಷೆ ಜಯಲಕ್ಷ್ಮಿ, ದೇವೀರಮ್ಮ, ಗಾಯಿತ್ರಮ್ಮ, ಉಮೇಶಕುಮಾರ್, ಬಿ.ಸಿ.ಕೃಷ್ಣೇಗೌಡ, ಸಾಮಾಜಿಕ ಜಾಲತಾಣ ಪ್ರಮುಖ ಕಿರಣ್‌ಸಿಂಗ್, ಮಂಡಲದ ಕಾರ್ಯದರ್ಶಿ ಹೇಮಂತ ಕುಮಾರ್, ಸುನಿಲ್, ಬಲ್ಲೇನಹಳ್ಳಿ ಮಂಜುನಾಥ್, ಅಭಿಷೇಕ್,ರವಿಲಕ್ಷಣ, ಮೊಳ್ಳೇನಹಳ್ಳಿ ಚಂದ್ರು, ರಾಮ ಕೃಷ್ಣ ಭಾಗವಹಿಸಿದ್ದರು.


ಮಡೇನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಶೇ 100 ಫಲಿತಾಂಶ

ಭಾರತೀನಗರ, ಏ.28– ಇಲ್ಲಿಗೆ ಸಮೀಪದ ಮಡೇನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 100 ರಷ್ಟು ಫಲಿತಾಂಶ ಲಭಿಸಿದೆ.

ಒಟ್ಟು 20 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ಇಬ್ಬರು ಅತ್ಯುನ್ನತ ಶ್ರೇಣಿ, 12 ವಿದ್ಯಾರ್ಥಿಗಳು ಪ್ರಥಮ, 3 ವಿದ್ಯಾರ್ಥಿಗಳು ದ್ವಿತೀಯ ಹಾಗೂ ಓರ್ವ ವಿದ್ಯಾರ್ಥಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಗುಣಸಾಗರ ವಿದ್ಯಾರ್ಥಿ ಕನ್ನಡದಲ್ಲಿ 125 ಕ್ಕೆ 125 ಅಂಕ ಗಳಿಸಿದ್ದಾರೆ. ಆಟಿಸಂ ಸ್ಪೆಕ್ಟ್ರಮ್ ನ್ಯೂನ್ಯತೆ ಉಳ್ಳ ವಿಕಲ ಚೇತನ ವಿದ್ಯಾರ್ಥಿ ಕೋಮಲ್ ಬರವಣಿಗೆ ಸಹಾಯಕರಿಂದ ಪರೀಕ್ಷೆ ಎದುರಿಸಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾನೆ.

ಶಾಸಕ ನರೇಂದ್ರಸ್ವಾಮಿ ಸಹೋದರ ನಿಧನ



ಪರಶಿವಮೂರ್ತಿ


ಮಳವಳ್ಳಿ, ಏ.28– ಕ್ಷೇತ್ರದ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರ ಸಹೋದರ ಪಿ.ಎಂ.ಪರಶಿವ ಮೂರ್ತಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಬೆಂಗಳೂರಿನಲ್ಲಿ ವಾಸವಿದ್ದ ಪರಶಿವ ಮೂರ್ತಿ ಅವರು ಹೃದಯಾಘಾತದಿಂದ ಸಾವನ್ನಪ್ಪಿದ್ದು, ಮೃತರು ಪತ್ನಿ, ಪುತ್ರಿ, ಪುತ್ರ ಹಾಗೂ ತಾಯಿ ಸೇರಿದಂತೆ ಸಹೋದರ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರಾದ ಮಳವಳ್ಳಿ ತಾಲೂಕಿನ ಮರಿಗಾಲಿಯಲ್ಲಿ ನೆರವೇರಿತು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಎ.ಬಿ.ರಮೇಶ್ ಬಾಬು, ಹೆಚ್.ಟಿ.ಮಂಜು, ಅರಕಲಗೂಡು ಮಂಜು, ಎ.ಆರ್.ಕೃಷ್ಣಮೂರ್ತಿ, ಕೆ.ಎಂ.ಉದಯ್, ದರ್ಶನ್ ಪುಟ್ಟಣ್ಣಯ್ಯ, ರವಿಕುಮಾರ್, ಎಂಎಲ್ಸಿ ದಿನೇಶ್‌ಗೂಳಿಗೌಡ, ಮಾಜಿ ಶಾಸಕರಾದ ಬಿ.ರಾಮಕೃಷ್ಣ, ಡಾ.ಕೆ.ಅನ್ನದಾನಿ, ಮಾಜಿ ಎಂಎಲ್ಸಿ ಮರಿತಿಬ್ಬೇಗೌಡ ಸೇರಿದಂತೆ ಹಲವರು ಅಂತಿಮ ನಮನ ಸಲ್ಲಿಸಿದರು.

ಸಚಿವ ಚಲುವರಾಯಸ್ವಾಮಿ ಮಾತನಾಡಿ, ಪರಶಿವಮೂರ್ತಿ ಅವರು ಸರಳತೆಯ ಪ್ರತೀಕವಾಗಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಸದಾ ಮುಂಚೂಣಿಯಲ್ಲಿದ್ದ ಅವರು ಎಲ್ಲರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದರು. ಅವರ ಅಗಲಿಕೆ ಕುಟುಂಬಕ್ಕೆ ಹಾಗೂ ಮಳವಳ್ಳಿ ಭಾಗದ ಜನತೆಗೆ ತುಂಬಲಾರದ ನಷ್ಟ. ಶಾಸಕ ನರೇಂದ್ರಸ್ವಾಮಿ ಅವರಿಗೆ ಈ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ. ಅವರ ಕುಟುಂಬ ವರ್ಗ, ಬಂಧು–ಬಳಗ ಹಾಗೂ ಅಭಿಮಾನಿಗಳ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ ಎಂದರು.

ಮೇ 1, ಭಗವಾನ್ ಬುದ್ಧ ಜಯಂತಿ



ಮಂಡ್ಯ, ಏ.28– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಮೇ 1 ರಂದು ಬೆಳಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ರಾಹುಲ್ ಗಾಂಧಿ ತೀರ್ಮಾನಕ್ಕೆ ಬದ್ಧ

ಹಾಲಿ ಸಚಿವರ ಸೋಲುವ ವರದಿ ವಿಚಾರವಾಗಿ ಇದೇ ವೇಳೆ ಮಾತನಾಡಿದ ಅವರು, ಸೋಲು–ಗೆಲುವು ರಾಜಕೀಯದಲ್ಲಿ ಇದ್ದದ್ದೇ. ಈ ಹಿಂದೆ ಎಸ್.ಎಂ.ಕೃಷ್ಣ ಕಾಲದಲ್ಲಿ ಬಹುತೇಕ ಸಚಿವರು ಸೋತುಹೋದ್ರು. ಹೀಗೆ ಆಗುತ್ತೆ ಅಂತ ಈಗಲೇ ಏನು ಹೇಳಲು ಆಗಲ್ಲ. ರಾಜಕೀಯ ದಿಕ್ಸೂಚಿ ಹೇಳಲು ಕಾಲ ಪಕ್ವವಾಗಿಲ್ಲ ಎಂದು ಅಭಿಪ್ರಾಯಿಸಿದರು. ಸಚಿವ ರಾಜಣ್ಣ ಈ ಹಿಂದೆಯೂ ಸಿದ್ದರಾಮಯ್ಯರ ಬಗ್ಗೆ ಇಂತಹದ್ದೇ ಹೇಳಿಕೆ ನೀಡಿದ್ದರು. ದಾವಣಗೆರೆ ಉಪಚುನಾವಣೆ ವೇಳೆ ನಡೆದ ವಿದ್ಯಮಾನದ ಬಗ್ಗೆ ಪ್ರತಿಕ್ರಿಯಿಸುವಾಗ ಸಿದ್ದರಾಮಯ್ಯ ಸೈಲೆಂಟ್ ಆಗಿದ್ದು, ಯಾರೋ ಮಾಟ–ಮಂತ್ರ ಮಾಡಿಸಿರಬೇಕು ಎಂದು ಹೇಳುವ ಮೂಲಕ ಸುದ್ದಿಯಾಗಿದ್ದರು. ಸದ್ಯ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಲವೇ ದಿನಗಳಲ್ಲಿ ಮುಖ್ಯಮಂತ್ರಿಯಾಗಲಿದ್ದಾರೆಂಬ ಗಂಭೀರ ಚರ್ಚೆ ನಡೆದಿರುವ ಸಂದರ್ಭದಲ್ಲಿ ರಾಜಣ್ಣ, ಸಿದ್ದರಾಮಯ್ಯ ಈ ಹಿಂದೆ ಇದ್ದಂತೆ ಇಲ್ಲ, ಸಿಎಂ ಕುರ್ಚಿ ಬಿಡೋಕು ಸಿದ್ಧರಿದ್ದಾರೆ ಎಂದು ಹೇಳಿಕೆ ನೀಡುವ ಮೂಲಕ ಕುತೂಹಲ ಹೆಚ್ಚಿಸಿದ್ದಾರೆ.

ಒಳಮೀಸಲಾತಿ ಜಾರಿಗೊಳಿಸಿ ಸರ್ಕಾರ ಆದೇಶ

ಕಡಿಮೆ ಲಭ್ಯವಾಗದೇ ಇದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಆ ಹುದ್ದೆಗಳನ್ನು 'ಪರಿಶಿಷ್ಟ ಜಾತಿ (ಸಾಮಾನ್ಯ)' ಎಂದು ಪರಿಗಣಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶದ ಅನ್ವಯ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ 17ರಿಂದ ಶೇ 15ಕ್ಕೆ ಸೀಮಿತಗೊಳಿಸಿ ಒಳ ಮೀಸಲಾತಿ ಜಾರಿಗೊಳಿಸಲಾಗುತ್ತಿದೆ .ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಾಜ್ಯ ಸರ್ಕಾರ ಹೆಚ್ಚಿಸಿರುವ ಶೇ 24ರಷ್ಟು ಮೀಸಲಾತಿ ಪ್ರಮಾಣವನ್ನು ಕೋರ್ಟ್ ಒಪ್ಪಿದರೆ, ಈ ಹೆಚ್ಚುವರಿ ಶೇಕಡಾ 6ರಷ್ಟು ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ನೇಮಕಾತಿ ಮಾಡಬೇಕು ಎಂದೂ ಆದೇಶದಲ್ಲಿದೆ.

ತಕ್ಷಣ ಪರಿಷ್ಕೃತ ನೇಮಕಾತಿ ಅಧಿಸೂಚನೆ: ಸರ್ಕಾರ 2025ರ ಸೆ. 3ರಂದು ಹೊರಡಿಸಿದ್ದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆಯ ಹಂತದಲ್ಲಿರುವ ಅಥವಾ 2026ರ ಫೆ. 27ರಂದು ಹೊರಡಿಸಿದ ಆದೇಶದ ಅನ್ವಯ ಒಳ ಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಪ್ರವರ್ಗ 'ಎ', ಪ್ರವರ್ಗ 'ಬಿ', ಪ್ರವರ್ಗ 'ಸಿ'ಗೆ ಕ್ರಮವಾಗಿ ಶೇ 5.25, 5.25, 4.50 ಒಳ ಮೀಸಲಾತಿ ಅಳವಡಿಸಿ ತಕ್ಷಣ ಪರಿಷ್ಕೃತ ನೇಮಕಾತಿ ಅಧಿಸೂಚನೆ ಹೊರಡಿಸಿ, ನೇಮಕಾತಿಗಳನ್ನು ಮಾಡಬೇಕು ಎಂದು ರಾಜ್ಯ ಸರ್ಕಾರ ಸೂಚನೆ ನೀಡಿದೆ. ಏಪ್ರಿಲ್ 24ರಂದು ನಡೆದಿದ್ದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಿ ನಿರ್ಣಯ ಕೈಗೊಳ್ಳಲಾಗಿತ್ತು.

ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ
ತನ್ನ ಹೇಳಿಕೆ ದಾಖಲಿಸುವಂತೆ ಕೋರ್ಟ್‌ಗೆ ಸ್ನೇಹಮಯಿ ಕೃಷ್ಣ ಮನವಿ

ಮೈಸೂರು,ಏ.28(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾದಿಂದ ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂಬ ಆರೋಪದ ಬಗ್ಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164ರ ಪ್ರಕಾರ ಹೇಳಿಕೆ ದಾಖಲಿಸಲು ಅವಕಾಶ ನೀಡಬೇಕೆಂದು ಆರ್ ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಸಿದ್ದರಾಮಯ್ಯ ಅವರು ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂಬ ಆರೋಪ ಸಂಬಂಧ ಲೋಕಾಯುಕ್ತ ತನಿಖಾಧಿಕಾರಿಗಳು ಪ್ರಭಾವಿ ಆರೋಪಿಗಳ ರಕ್ಷಣೆ ಮಾಡಲು ಬಹಳಷ್ಟು ಸಾಕ್ಷ್ಯ ಹಾಗೂ ದತ್ತಾಂಶವನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆಪಾದಿಸಿದ್ದಾರೆ.



ತನಿಖಾಧಿಕಾರಿಗಳು 1ರಿಂದ 4 ನೇ ಆರೋಪಿಗಳ ವಿರುದ್ಧ ಬಿ ಅಂತಿಮ ವರದಿಯನ್ನು ಹಾಗೂ 5, 6 ಮತ್ತು 7ನೇ ಆರೋಪಿಗಳ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ್ದು, ಉಳಿದ ಆರೋಪಿಗಳ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಆದರೆ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಸತ್ಯಾಂಶ ಮರೆಮಾಚಿದ್ದು, ಆರೋಪಿಗಳನ್ನು ರಕ್ಷಿಸುವ ಯತ್ನ ನಡೆದಿದೆ ಎಂದು ದೂರಿದ್ದಾರೆ. ಈ ಹಿನ್ನೆಲೆಯಲ್ಲಿ ನನ್ನ ಹೇಳಿಕೆಯನ್ನು ನ್ಯಾಯಾಲಯ ದಾಖಲಿಸಿದ್ದಲ್ಲಿ, ಸತ್ಯಾಂಶವನ್ನು ತಿಳಿಯಲು ಅನುಕೂಲವಾಗುತ್ತದೆ. ಈ ಪ್ರಕರಣದ ಬಗ್ಗೆ ಹಲವು ವಿಚಾರಗಳನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುತ್ತೇನೆ. ಈ ನಿಟ್ಟಿನಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಪ್ರಕಾರ ನನ್ನ ಹೇಳಿಕೆ ದಾಖಲಿಸಲು ಅವಕಾಶ ನೀಡಬೇಕೆಂದು ಕೋರಿದ್ದಾರೆ. ಅಲ್ಲದೆ ಯಾವುದೇ ಕಾರಣಕ್ಕೂ ಬೇರೆ ನ್ಯಾಯಾಲಯಕ್ಕೆ ಈ ಪ್ರಕರಣ ವರ್ಗಾಯಿಸದೆ ತಾವೇ ವಿಚಾರಣೆ ನಡೆಸಬೇಕೆಂದು ಸ್ನೇಹಿಮಯಿ ಕೃಷ್ಣ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ತಹಶೀಲ್ದಾರ್ ಆದೇಶ ಧಿಕ್ಕರಿಸಿ ಬಲಮುರಿ, ಎಡಮುರಿಯಲ್ಲಿ ಪ್ರವಾಸಿಗಳ ದರ್ಬಾರ್

ಬಲಮುರಿ–ಎಡಮುರಿ ಪ್ರವಾಸಿ ತಾಣಗಳು ಸೇರಿದಂತೆ ಕಾವೇರಿ ನದಿ ಪ್ರದೇಶಗಳಿಗೆ ಪ್ರವಾಸಿಗರು ಮತ್ತು ಸಾರ್ವಜನಿಕರ ಪ್ರವೇಶ ನಿಷೇಧಿಸಿ, ಆದೇಶ ಹೊರಡಿಸಿದ್ದರು.

ಆದರೆ ಮಂಗಳವಾರ ಬೆಳಗ್ಗೆ ಮಹಿಳೆಯರು, ಮಕ್ಕಳು ಸೇರಿದಂತೆ ಸುಮಾರು ನೂರಾರು ಪ್ರವಾಸಿಗರು ಬಲಮುರಿಯಲ್ಲಿ ನದಿಗೆ ಇಳಿದಿದ್ದರು. ಅಡ್ಡಲಾಗಿ ನಿರ್ಮಿಸಿರುವ ಕಾಂಕ್ರೀಟ್ ತಡೆಗೋಡೆ ಬಳಿ ನೀರಿನಲ್ಲಿ ಆಟವಾಡುತ್ತಿದ್ದರು. ಹಲವರು ಅಪಾಯದ ಅರಿವಿಲ್ಲದೆ ಜಾರು ಬಂಡೆಗಳ ಮೇಲೆ ನಿಂತು, ಸುರಿಯುವ ನೀರಿಗೆ ತಲೆಯೊಡ್ಡಿದ್ದರು. ನೀರಿನಲ್ಲಿ ಇಳಿಯದಂತೆ ಸ್ಥಳೀಯರು ಎಚ್ಚರಿಕೆ ನೀಡುತ್ತಿದ್ದರು. ನೀರಿನಲ್ಲಿ ನಿರ್ಲಕ್ಷ್ಯದಿಂದ ಆಟವಾಡಬೇಡಿ, ಯಾವ ಸಂದರ್ಭದಲ್ಲಿ ಏನಾಗುವುದೋ ಗೊತ್ತಾಗುವುದಿಲ್ಲ ಎಂದು ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಿದ್ದರು. ಆದರೆ ಪ್ರವಾಸಿಗರು ಮಾತ್ರ ಯಾವುದಕ್ಕೂ ಕಿವಿಗೊಡದೆ ಅಪಾಯಕಾರಿ ಸ್ಥಳಗಳಲ್ಲಿ ಚೆಲ್ಲಾಟ ಮುಂದುವರಿಸಿದ್ದರು.

ನಿರೀಕ್ಷೆಯಂತೆ ಆರಂಭಿಕ ಶೂರತ್ವ: ತಾಲೂಕು ದಂಡಾಧಿಕಾರಿಗಳು ಏ.16 ರಂದು ಆದೇಶ ಹೊರಡಿಸಿದ ಬಳಿಕ ಪ್ರವಾಸಿಗರು ಪ್ರವೇಶಿಸದಂತೆ ನಿಗಾ ವಹಿಸಲು ಕೆಆರ್‌ಎಸ್ ಠಾಣೆ ಪೊಲೀಸ್ ಸಿಬ್ಬಂದಿ ಹಾಗೂ ಹೋಂಗಾರ್ಡ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಐದಾರು ದಿನ ಗೇಟ್ ದಾಟಿ ಯಾರೂ ನುಸುಳದಂತೆ ಭಾರೀ ಕಟ್ಟೆಚ್ಚರ ವಹಿಸಿದ್ದರು. ಬ್ಯಾರಿಕೇಡ್ ಅಳವಡಿಸಿ, ದೊಡ್ಡ ಸೂಚನಾ ಫ್ಲೆಕ್ಸ್ ಹಾಕಿ ವಾಹನಗಳನ್ನು ವಾಪಸ್ ಕಳುಹಿಸಲಾಯಿತು. ಆದರೆ ಇದೆಲ್ಲಾ ಆರಂಭಿಕ ಶೂರತ್ವ ಎಂಬುದು ಇಂದು ಸಾಬೀತಾಗಿದೆ. ಕಟ್ಟುನಿಟ್ಟಿನ ಆದೇಶವಿದ್ದರೂ ನೂರಾರು ಪ್ರವಾಸಿಗರು ನದಿಗಿಳಿದು ಮೋಜು–ಮಸ್ತಿ ಮಾಡಲು ಮುಕ್ತಗೊಳಿಸಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಸಿಬ್ಬಂದಿಯೇ ಇಲ್ಲವಂತೆ: ನದಿ ಪ್ರದೇಶದುದ್ದಕ್ಕೂ ಪ್ರವಾಸಿಗರನ್ನು ತಡೆಯಲು ಸಿಬ್ಬಂದಿ ನಿಯೋಜಿಸುವುದು ಕಷ್ಟ ಸಿಬ್ಬಂದಿ ಕೊರತೆಯಿಂದಾಗಿ ನಿಗಾ ವಹಿಸಲು ಆಗುತ್ತಿಲ್ಲ. ಪೊಲೀಸರು ದೈನಂದಿನ ಕರ್ತವ್ಯ, ವಿಐಪಿ ಭದ್ರತಾ ವ್ಯವಸ್ಥೆ ಸೇರಿದಂತೆ ಇತರ ತುರ್ತು ಕಾರ್ಯಗಳಿಗೆ ನಿಯೋಜಿಸಿರುವುದರಿಂದ ಪ್ರವಾಸಿ ತಾಣಗಳ ಪ್ರವೇಶ ದ್ವಾರಗಳನ್ನು ಕಾಯಲು ಸಾಧ್ಯವಾಗುತ್ತಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ.

ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರದಿದ್ದರೆ, ಆದೇಶ ಹಿಂಪಡೆಯಲಿ

"ನಿರ್ಬಂಧವಿರುವ ಮಾಹಿತಿ ಇಲ್ಲದೆ ಬೆಂಗಳೂರಿಂದ ಬಂದಿದ್ದೆವು. ಆದರೆ ರಸ್ತೆಯಲ್ಲಿ ನಮ್ಮನ್ನು ತಡೆದು ವಾಪಸ್ ಹೋಗುವಂತೆ ಸೂಚಿಸಿದರು. ಅದಕ್ಕೆ ಗೌರವ ಕೊಟ್ಟು ವಾಹನವನ್ನು ವಾಪಸ್ ತಿರುಗಿಸಿ ಸ್ವಲ್ಪ ದೂರ ಬಂದು ನಿಂತೆವು. ಆಗ, ನಮ್ಮ ಹಿಂದೆ ಬಂದಿದ್ದ ಎರಡು ಕಾರಿನಲ್ಲಿದ್ದವರನ್ನು ಕೆಲವರು ಒಳಗೆ ಕರೆದುಕೊಂಡು ಹೋದರು. ನಾವು ಸಿಬ್ಬಂದಿಯನ್ನು ಕೇಳಿದಾಗ ಅವರೆಲ್ಲಾ ಸ್ಥಳೀಯರ ಕಡೆಯವರು ಎಂದು ಹೇಳಿದರು. ಒಬ್ಬರಿಗೆ ಒಂದು ನ್ಯಾಯ, ಬೇರೆಯವರಿಗೆ ಮತ್ತೊಂದು ನ್ಯಾಯವಾ, ನಿರ್ಬಂಧ ಆದೇಶವಿದ್ದರೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲವಾದರೆ ಆದೇಶ ಹಿಂಪಡೆಯಬೇಕು.
– ತ್ರಿಲೋಕ್ ಮತ್ತು ಸ್ನೇಹಿತರು, ಬೆಂಗಳೂರು

"ಕಾವೇರಿ ನದಿ ಪ್ರದೇಶಕ್ಕೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಪ್ರವೇಶ ನಿರ್ಬಂಧ ಹಿಂಪಡೆದಿಲ್ಲ. ಆದಾಗ್ಯೂ ಪ್ರವಾಸಿಗರು ನದಿಗೆ ಇಳಿಯುತ್ತಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. –ಚೇತನಾ ಯಾದವ್, ತಾಲೂಕು ದಂಡಾಧಿಕಾರಿ

12 ವರ್ಷಗಳಲ್ಲಿ 79 ಮಂದಿ ಬಲಿ

ಶ್ರೀರಂಗಪಟ್ಟಣ: ಪೊಲೀಸ್ ಇಲಾಖೆ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ 2015ರಿಂದ ಪ್ರಸಕ್ತ 2026ರ ಏಪ್ರಿಲ್ 17ವರೆಗೆ 79 ಪ್ರವಾಸಿಗರು ಎಡಮುರಿ, ಬಲಮುರಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. 2015ರಲ್ಲಿ 8 ಮಂದಿ, 2016ರಲ್ಲಿ 4, 2017ರಲ್ಲಿ 9, 2018ರಲ್ಲಿ 1, 2019ರಲ್ಲಿ 12, 2020ರಲ್ಲಿ 4, 2021ರಲ್ಲಿ 3, 2022ರಲ್ಲಿ 2, 2023ರಲ್ಲಿ 8, 2024ರಲ್ಲಿ 13, 2025ರಲ್ಲಿ 11 ಮತ್ತು 2026 (ಏಪ್ರಿಲ್‌ವರೆಗೆ)ರಲ್ಲಿ 4 ಮಂದಿ ಮುಳುಗಿ ಜೀವ ಕಳೆದುಕೊಂಡಿದ್ದಾರೆ. ನೀರಿಗಿಳಿಯುವುದು ಎಷ್ಟು ಅಪಾಯಕಾರಿ ಎಂಬುದನ್ನು ಸಾಕ್ಷೀಕರಿಸುವ ಸಾವಿನ ಅಂಕಿಅಂಶ ಇಟ್ಟುಕೊಂಡಿರುವ ಕೆಆರ್‌ಎಸ್ ಠಾಣೆ ಪೊಲೀಸರು ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ದಂಡಾಧಿಕಾರಿಗಳ ಆದೇಶವನ್ನು ಗಾಳಿಗೆ ತೂರಿ, ಕೆಲ ಪ್ರಭಾವಿಗಳ ಮಾತನ್ನು ಶಿರಸಾವಹಿಸಿ ಪಾಲಿಸುತ್ತಿದ್ದಾರೆ. ಏನಾದರೂ ಪ್ರಶ್ನಿಸಿದರೆ ಸ್ಥಳೀಯರೆಂದು ಹೇಳಿ, ನುಣುಚಿಕೊಳ್ಳುತ್ತಾರೆ. ವಾದ ಮುಂದುವರೆಸಿದರೆ ಬೆದರಿಸಿ, ಸ್ಥಳದಿಂದ ಕಳುಹಿಸುತ್ತಾರೆ. ಮುಂದೇನಾದರೂ ಅನಾಹುತ ಸಂಭವಿಸಿದರೆ ಅದಕ್ಕೆ ಪೊಲೀಸರೇ ನೇರ ಹೊಣೆಗಾರರಾಗುತ್ತಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗುವಿನಹಳ್ಳಿ ಬಳಿ ಕಾವೇರಿಯಲ್ಲೇ ಮೋಜು–ಮಸ್ತಿ: ಗ್ರಾಮಸ್ಥರ ಬೇಸರ

ಮೈಸೂರು: ಬಲಮುರಿ, ಎಡಮುರಿ, ಮೀನಾಕ್ಷಿಪುರ, ಮೇಕೆದಾಟು ಸಂಗಮ ಕ್ಷೇತ್ರದಲ್ಲಿ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ನಗುವಿನಹಳ್ಳಿ ಬಳಿಯ ಕಾವೇರಿ ನದಿಯಲ್ಲೇ ಮೋಜು–ಮಸ್ತಿ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ನಗುವಿನಹಳ್ಳಿ ಬಳಿ ವಿವಿಧೆಡೆಯಿಂದ ಬಂದ ಪ್ರವಾಸಿಗರು ಕಾವೇರಿ ನದಿಯ ಮಧ್ಯದಲ್ಲಿಯೇ ಮದ್ಯಪಾನದೊಂದಿಗೆ ಮೋಜು ಮಸ್ತಿ ಮಾಡುತ್ತಿದ್ದು, ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

ಎಲ್ಲಿಂದಲೋ ಬರುವ ಯುವಕರ ಗುಂಪು ನದಿಯೊಳಗೆ ಕುಡಿಯುತ್ತಾ ಖಾಲಿ ಬಾಟಲನ್ನು ನದಿ ಒಳಗೆ ಹಾಗೂ ದಡದಲ್ಲಿ ಬೀಸಾಡುವುದರಿಂದ ಗಾಜಿನ ಚೂರು ಜಾನುವಾರು ಹಾಗೂ ಸ್ಥಳೀಯರ ಕಾಲುಗಳಿಗೆ ಚುಚ್ಚಿಕೊಳ್ಳುತ್ತಿವೆ. ಜಾನುವಾರುಗಳಿಗೆ ನೀರು ಕುಡಿಸಲು ನದಿಯತ್ತ ಹೋಗಲು ಭಯವಾಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಕಾವೇರಿ ನದಿ ಪಾತ್ರ ಹಸಿರು ಮತ್ತು ಸೂಕ್ಷ್ಮ ವಲಯವಾಗಿದ್ದು, ನಗುವಿನಹಳ್ಳಿ ಸುತ್ತಮುತ್ತ ವಿವಿಧ ಪಕ್ಷಿಗಳು ಸಂತಾನೋತ್ಪತ್ತಿ ಮಾಡಲು ಸೂಕ್ತ ಜಾಗ ಗುರುತಿಸಿಕೊಳ್ಳಲಿವೆ. ಆದರೆ, ನದಿಯಲ್ಲಿ ಮೋಜು ಮಸ್ತಿ ಮಾಡಲು ಬರುವವರು ದೊಡ್ಡ ಸ್ಪೀಕರ್ ತಂದು ಮ್ಯೂಸಿಕ್ ಹಾಕಿಕೊಂಡು ಡ್ಯಾನ್ಸ್ ಮಾಡುತ್ತಾರೆ, ಕಿರುಚಾಡುತ್ತಾರೆ. ಇದರಿಂದ ಈ ಭಾಗದಲ್ಲಿರುವ ಪಕ್ಷಿ ಸಂಕುಲಕ್ಕೆ ಧಕ್ಕೆಯಾಗುತ್ತಿದೆ. ಅಲ್ಲದೆ, ಕಾವೇರಿ ನದಿಯಲ್ಲಿ ಅಪರೂಪದ ನೀರು ನಾಯಿಗಳಿಗೂ ತೊಂದರೆಯಾಗುತ್ತಿದೆ ಎಂದು ಸ್ಥಳೀಯರು ಅಸಮದಾನ ವ್ಯಕ್ತಪಡಿಸಿದ್ದಾರೆ.

ಕೆಲ ವ್ಯಾಪಾರಿಗಳ ಕುಮ್ಮಕ್ಕು: ಜನರ ಜೀವ ರಕ್ಷಣೆ ದೃಷ್ಟಿಯಿಂದ ತಾಲೂಕು ದಂಡಾಧಿಕಾರಿಗಳು ಸೂಕ್ತ ಆದೇಶ ಹೊರಡಿಸಿದ್ದಾರೆ. ಆದರೆ ಇದರಿಂದ ನಷ್ಟವಾಗುತ್ತಿದೆ ಎಂಬ ಕಾರಣದಿಂದ ವಿವಿಧ ಟೆಂಡರ್ ಪಡೆದಿರುವವರ ಹಾಗೂ ಅಂಗಡಿ ಮಾಲೀಕರು, ನಿಯಮ ಉಲ್ಲಂಘಿಸಿ ಬಲಮುರಿ ಫಾಲ್ಸ್‌ಗೆ ಪ್ರವಾಸಿಗರನ್ನು ಕಳುಹಿಸುತ್ತಿದ್ದಾರೆ. ಇವರ ಒತ್ತಡಕ್ಕೆ ಮಣಿದು ಪೊಲೀಸರೂ ಮೌನವಾಗಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಅನಾಹುತಕ್ಕೆ ಯಾರು ಹೊಣೆ: ವಿವಿಧೆಡೆಯಿಂದ ಬರುವ ಪ್ರವಾಸಿಗರನ್ನು ಪೊಲೀಸರು, ಹೋಮ್‌ಗಾರ್ಡ್ ತಡೆದರೂ ಕೆಲ ಪ್ರಭಾವಿಗಳು ನಮ್ಮ ಕಡೆಯವರೆಂದು ಹೇಳಿಕೊಂಡು ಬಲಮುರಿಗೆ ಕರೆದೊಯ್ಯುತ್ತಿದ್ದಾರೆ. ಮತ್ತೆ ಕೆಲವರು ನಾವು ಸ್ಥಳೀಯರು ಎಂದು ಹೇಳಿ ಬಲಮುರಿ, ಎಡಮುರಿಗೆ ಹೋಗುತ್ತಿದ್ದಾರೆ. ಮತ್ತಷ್ಟು ಮಂದಿ ದೇವಾಲಯಕ್ಕೆ ಹೋಗುವುದಾಗಿ ತಿಳಿಸಿ ನೀರಿನಲ್ಲಿ ಈಜಲು ಹೋಗುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನಿಬಾಯಿಸುವುದು ಹೋಮ್ ಗಾರ್ಡ್ ಅಥವಾ ಪೊಲೀಸ್ ಸಿಬ್ಬಂದಿಗೆ ಸವಾಲಾಗಿದೆ. ನೀರಿಗಿಳಿದಾಗ ಏನಾದರು ಅನಾಹುತವಾದರೆ ಯಾರು ಹೊಣೆ. ಹಾಗೇನಾದರೂ ಆದರೆ ಭದ್ರತಾ ಸಿಬ್ಬಂದಿ ತಲೆದಂಡವಾಗುವುದು ಖಚಿತ. ಈ ಹಿನ್ನೆಲೆಯಲ್ಲಿ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಶೀಘ್ರದಲ್ಲೇ ಆಧಾರ್ ಕಾರ್ಡ್‌ಗೆ ಹೈಟೆಕ್ ಸ್ಪರ್ಶ; ಹೆಸರು, ವಿಳಾಸ, ನಂಬರ್ ಸಹ ಇರಲ್ಲ

ನವದೆಹಲಿ: ನಿಮ್ಮ ಆಧಾರ್ ಕಾರ್ಡ್ ಶೀಘ್ರದಲ್ಲೇ ಹೊಸ ರೂಪವನ್ನು ಪಡೆಯಲಿದೆ, ನಿಮ್ಮ ವೈಯಕ್ತಿಕ ಗುರುತಿಗೆ ಬಲವಾದ ರಕ್ಷಣೆ ನೀಡಲು ಕಾರ್ಡ್ ಅನ್ನು ಹೈಟೆಕ್ ಆಗಿ ವಿನ್ಯಾಸಗೊಳಿಸಲಾಗಿದೆ.

ಇನ್ನು ಮುಂದೆ ಆಧಾರ್ ಕಾರ್ಡ್ ಯಾರಿಗೆ ನೀಡಿದರೂ ಅದು ಸುರಕ್ಷಿತವಾಗಿರುತ್ತದೆ. ಏಕೆಂದರೆ ಅದರಲ್ಲಿ ಯಾವುದೇ ವಿವರಗಳನ್ನು ಪ್ರಿಂಟ್ ಮಾಡುವುದಿಲ್ಲ. ಅದರಲ್ಲಿ ನಿಮ್ಮ ಹೆಸರು, ವಿಳಾಸ, ನಂಬರ್ ಯಾವುದೂ ಇರಲ್ಲ. ಆಧಾರ್ ಕಾರ್ಡ್‌ನ ಡಿಸೈನ್ ಅನ್ನೇ ಕಂಪ್ಲೀಟ್ ಆಗಿ ಬದಲಾಯಿಸಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಹೊಸ ಕಾರ್ಡ್, ಸೇವಾ ಪೂರೈಕೆದಾರರಿಂದ ದುರುಪಯೋಗದ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ವಂಚನೆಯ ವಿರುದ್ಧ ಸುರಕ್ಷತೆಗಳನ್ನು ಹೆಚ್ಚಿಸುತ್ತದೆ. ಯುಐಡಿಎಐ ಕಳೆದ ನವೆಂಬರ್‌ನಲ್ಲಿ ಆಧಾರ್ ಕಾರ್ಡ್‌ನ ಗಮನಾರ್ಹ ಮರುವಿನ್ಯಾಸವನ್ನು ಪ್ರಾರಂಭಿಸಿತು. ಹೆಚ್ಚುತ್ತಿರುವ ಡಿಜಿಟಲ್ ಪರಿಸರ ವ್ಯವಸ್ಥೆಯಲ್ಲಿ ಗುರುತನ್ನು ಹೇಗೆ ಪರಿಶೀಲಿಸಲಾಗುತ್ತದೆ ಮತ್ತು ರಕ್ಷಿಸಲಾಗುತ್ತದೆ ಎಂಬುದರಲ್ಲಿ ಈ ಪರಿಷ್ಕರಣೆಯು ವಿಶಾಲ ಬದಲಾವಣೆಯ ಭಾಗವಾಗಿದೆ. ಅಸ್ತಿತ್ವದಲ್ಲಿರುವ ಆಧಾರ್ ಕಾರ್ಡ್, ನಿಮ್ಮ ಫೋಟೋ, ಹೆಸರು, ವಿಳಾಸ ಮತ್ತು 12–ಅಂಕಿಯ ಗುರುತಿನ ಸಂಖ್ಯೆ ಸೇರಿದಂತೆ ಹಲವಾರು ವೈಯಕ್ತಿಕ ವಿವರಗಳನ್ನು ಹೊಂದಿದೆ. ಈ ಕಾರ್ಡ್ ಅನ್ನು ಎಲ್ಲಾ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸುವಂತೆ ಮಾಡಿದ್ದರೂ, ಇದು ಗೌಪ್ಯತೆ ಮತ್ತು ದುರುಪಯೋಗದ ಬಗ್ಗೆ ನಿರಂತರ ಕಳವಳಗಳನ್ನು ಸೃಷ್ಟಿಸಿದೆ. ಕಾಲಾನಂತರದಲ್ಲಿ, ಹೋಟೆಲ್‌ಗಳು, ಖಾಸಗಿ ಏಜೆನ್ಸಿಗಳು ಮತ್ತು ಸೇವಾ ಪೂರೈಕೆದಾರರು ಆಧಾರ್ ಫೋಟೋಕಾಪಿಗಳನ್ನು ನಿಯಮಿತವಾಗಿ ಸಂಗ್ರಹಿಸಿದ್ದಾರೆ. ಆಗಾಗ್ಗೆ ಸ್ಪಷ್ಟ ಸುರಕ್ಷತೆಗಳಿಲ್ಲದೆ, ಡೇಟಾ ಸೋರಿಕೆ, ಗುರುತಿನ ಕಳ್ಳತನ ಮತ್ತು ಅನಧಿಕೃತ ಪ್ರೊಫೈಲಿಂಗ್ ಅಪಾಯವನ್ನು ಹೆಚ್ಚಿಸುತ್ತಿದೆ. ಪ್ರಸ್ತಾವಿತ ಮರುವಿನ್ಯಾಸವು ವೈಯಕ್ತಿಕ ಡೇಟಾ ರಕ್ಷಿಸುವುದು ಪ್ರಮುಖ ಆದ್ಯತೆ ಯಾಗಿದೆ. ಹೀಗಾಗಿ ಕಾರ್ಡ್ ಅನ್ನು ಕನಿಷ್ಠ ವಿನ್ಯಾಸಕ್ಕೆ ಇಳಿಸುವ ಮೂಲಕ, ಪ್ರಾಥಮಿಕವಾಗಿ ಫೋಟೋ ಮತ್ತು ಸ್ಕ್ಯಾನ್ ಮಾಡಬಹುದಾದ ಕ್ಯೂಆರ್ ಕೋಡ್ ಅನ್ನು ಮುದ್ರಿಸಲಾಗುತ್ತಿದೆ. ಸೂಕ್ಷ್ಮ ಮಾಹಿತಿಯನ್ನು ಇನ್ನು ಮುಂದೆ ಬಹಿರಂಗವಾಗಿ ಪ್ರದರ್ಶಿಸ ಲಾಗುವುದಿಲ್ಲ ಅಥವಾ ಸುಲಭವಾಗಿ ಪುನರಾ ವರ್ತಿಸಲಾಗುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಪ್ರಾಧಿಕಾರವು ಪ್ರಯತ್ನಿಸುತ್ತಿದೆ. ಪೂರ್ಣ ಗುರುತಿನ ವಿವರಗಳನ್ನು ಬಹಿರಂಗಪಡಿಸುವ ದಾಖಲೆಯನ್ನು ಹಸ್ತಾಂತರಿಸುವ ಬದಲು, ವ್ಯಕ್ತಿಗಳು ಡಿಜಿಟಲ್ ಅಥವಾ ಕ್ಯೂಆರ್–ಆಧಾರಿತ ಪರಿಶೀಲನೆಯನ್ನು ಅವಲಂಬಿಸುತ್ತಾರೆ. ಅಲ್ಲಿ ಅಗತ್ಯವಿರುವ ಮಾಹಿತಿಯನ್ನು ಮಾತ್ರ ಪಡೆಯಬಹುದು ಮತ್ತು ಅದು ಕೂಡ ಒಪ್ಪಿಗೆಯೊಂದಿಗೆ ಇದು ಸಂಪೂರ್ಣ ಮಾಹಿತಿ ಬಹಿರಂಗಪಡಿಸುವಿಕೆಗೆ ಬ್ರೇಕ್ ಹಾಕುತ್ತದೆ.

ಹೇಗಿರುತ್ತದೆ ಹೊಸ ಡಿಸೈನ್: ಪ್ರಸ್ತುತ ಕಾರ್ಡ್‌ಗೆ ಸಂಪೂರ್ಣ ವ್ಯತಿರಿಕ್ತವಾಗಿ, ಮರುವಿನ್ಯಾಸಗೊಳಿಸಲಾದ ಕಾರ್ಡ್ ಕೇವಲ ಫೋಟೋ ಮತ್ತು ಕ್ಯೂಆರ್ ಕೋಡ್ ಅನ್ನು ಮಾತ್ರ ಹೊಂದಿರುತ್ತದೆ. ಹೆಸರು, ಆಧಾರ್ ಸಂಖ್ಯೆ, ವಿಳಾಸ, ಜನ್ಮ ದಿನಾಂಕ ಮತ್ತು ಲಿಂಗದಂತಹ ಎಲ್ಲಾ ವೈಯಕ್ತಿಕ ವಿವರಗಳನ್ನು ಅದರ ಮೇಲ್ಮೈಯಲ್ಲಿ ಇನ್ನು ಮುಂದೆ ಮುದ್ರಿಸಲಾಗುವುದಿಲ್ಲ. ಇದು ಗಮನಾರ್ಹ ಬದಲಾವಣೆ ಸೂಚಿಸುತ್ತದೆ.

ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿಯಲ್ಲ

ಮಾಜಿ ಸಚಿವೆ ರಾಣಿ ಸತೀಶ್ ಸ್ಪಷ್ಟನೆ



ಮಾಜಿ ಸಚಿವೆ ರಾಣಿ ಸತೀಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

"ಬಿಜೆಪಿ ನಾಯಕರು ಮನುವಾದಿಗಳಾಗಿದ್ದು, ಎಂದೂ ಅವರು ಮಹಿಳೆಯರ ಪರ ವಾಗಿಲ್ಲ. ಪಂಚರಾಜ್ಯಗಳ ಚುನಾವಣೆಯ ರಾಜಕೀಯ ಲಾಭಕ್ಕಾಗಿ ಈ ವಿಧೇಯಕ ಮಂಡಿಸಿದ್ದಾರೆ. ಇದನ್ನು ದೇಶದ ಜನರು ಅರ್ಥ ಮಾಡಿಕೊಳ್ಳಬೇಕು.
–ರಾಣಿ ಸತೀಶ್, ಮಾಜಿ ಸಚಿವೆ

ಮೈಸೂರು, ಏ.28(ಬಿಎಲ್‌ಯು)– ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದ ಕಾಂಗ್ರೆಸ್ ಪಕ್ಷ ಮಹಿಳಾ ಮೀಸಲಾತಿ ವಿರೋಧಿ ಎಂದು ಬಿಜೆಪಿ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವೆ ರಾಣಿ ಸತೀಶ್ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತ ನಾಡಿದ ಅವರು, ಕಾಂಗ್ರೆಸ್ ಎಂದೂ ಮಹಿಳಾ ಮೀಸಲಾತಿಗೆ ವಿರುದ್ಧವಾಗಿಲ್ಲ. ಆದರೆ ಅವೈಜ್ಞಾನಿಕವಾಗಿ ಕ್ಷೇತ್ರ ಮರು ವಿಂಗಡಣೆ ಮಾಡಿ, ಇದರ ಆಧಾರದ ಮೇಲೆ ಮಹಿಳಾ ಮೀಸಲಾತಿ ಕಲ್ಪಿಸುತ್ತಿರುವ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ವಿರುದ್ಧ ವಿದೆ ಎಂದು ಸ್ಪಷ್ಟಪಡಿಸಿದರು.

ಮಹಿಳಾ ಮೀಸಲಾತಿಗೆ ಸೋಲಾಗು ತ್ತದೆ ಎಂಬ ಕಟು ಸತ್ಯ ತಿಳಿದಿದ್ದರೂ ಬಿಜೆಪಿ ಸರ್ಕಾರ ವಿಶೇಷ ಅಧಿವೇಶನ ಕರೆದು ವಿಧೇಯಕ ಮಂಡಿಸಿತು. ಒಳ ಮೀಸಲಾತಿ ಕಲ್ಪಿಸದಿರುವುದು ಸೇರಿದಂತೆ ಹಲವು ಲೋಪಗಳಿರುವ ಕಾರಣ ಕಾಂಗ್ರೆಸ್ ಇದನ್ನು ವಿರೋಧಿಸಿ ಮತ ಹಾಕಿತು. ಇದನ್ನೆ ಮಹಿಳಾ ಮೀಸಲಾತಿ ವಿರೋಧಿ ಎಂದು ಕಾಂಗ್ರೆಸ್ ವಿರುದ್ಧ ಬಿಜೆಪಿ ನಾಯಕರು ಅಪ್ರಪಚಾರ ಮಾಡುತ್ತಿದ್ದಾರೆ ಎಂದು ರಾಣಿ ಸತೀಶ್ ಆಪಾದಿಸಿದರು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಎಂದು ಅಪಪ್ರಚಾರ ಮಾಡುತ್ತಿರುವ ಕಾರಣ ನಮ್ಮ ಪಕ್ಷಕ್ಕೆ ಸಹಜವಾಗಿಯೇ ಸ್ವಲ್ಪ ಮಟ್ಟಿಗೆ ಪರಿಣಾಮ ಬೀರುತ್ತದೆ. ಆದರೆ ಬಿಜೆಪಿಯ ಇಂತಹ ರಾಜಕೀಯ ತಂತ್ರಗಾರಿಕೆ ಇನ್ನು ಮುಂದೆ ನಡೆಯು ವುದಿಲ್ಲ ಎಂದು ಎಚ್ಚರಿಸಿದರು.

ಇದೇ ವೇಳೆ ಮಾತನಾಡಿದ ಕರ್ನಾ ಟಕ ರಾಜ್ಯ ಗ್ಯಾರಂಟಿ ಯೋಜನೆ ಅನು ಷ್ಠಾನ ಸಮಿತಿ ಉಪಾಧ್ಯಕ್ಷ ಪುಷ್ಪ ಅಮರ ನಾಥ್, ಇದೂವರೆಗೂ ಬಿಜೆಪಿ ಪಕ್ಷದ ಮಹಿಳಾ ಕಾರ್ಯಕರ್ತರು ಮನೆಯಲ್ಲಿ ಕುಳಿತಿದ್ದರು. ಆದರೆ ಈಗ ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಎಂದು ಅಪಪ್ರಚಾರ ಮಾಡಲು ಬೀದಿಗಿಳಿದಿದ್ದಾರೆಂದು ಟೀಕಿಸಿದರು.

ಬಿಜೆಪಿ ಮಹಿಳಾ ಮೀಸಲಾತಿ ವಿರೋಧಿ ಎಂದು ಸಾಬೀತು ಮಾಡಲು ನಾವು ಬಹಿರಂಗ ಚರ್ಚೆಗೆ ಸಿದ್ದರಿದ್ದೇವೆ. ಬಿಜೆಪಿ ನಾಯಕರು ಸಿದ್ದರಿದ್ದಾರೆಯೇ ಎಂದು ಪುಷ್ಪ ಅಮರನಾಥ್ ಸವಾಲು ಹಾಕಿದರು.

ಮಾಜಿ ಮೇಯರ್‌ಗಳಾದ ಮೋದಾ ಮಣಿ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮುಖಂಡರಾದ ವೀಣಾ, ಲತಾ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಹಿಂದೂ ನೌಕರರ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ವಿಶ್ವ ಹಿಂದೂ ಪರಿಷದ್ ಪ್ರತಿಭಟನೆ

ಮೈಸೂರು, ಏ.28(ಜಿಎ)–ಹಿಂದೂ ನೌಕರರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ವಿಶ್ವ ಹಿಂದೂ ಪರಿಷದ್ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮುಂಬಯಿನಲ್ಲಿರುವ ಲೆನ್ಸ್‌ಕಾರ್ಟ್ ಮಳಿಗೆಯಲ್ಲಿ ಹಿಂದೂ ಮಹಿಳೆಯರಿಗೆ ಬಲವಂತವಾಗಿ ಹಣೆ ಬೊಟ್ಟು, ತಿಲಕವನ್ನು ಹಾಕಬಾರದೆಂದು ಆದೇಶಿಸಿ ದ್ದಾರೆ. ಆದರೆ, ಇವರಿಗೆ ಹಿಂದೂಗಳ ವ್ಯಾಪರ ಬೇಕು. ಹಿಂದೂಗಳು ಕೆಲಸಕ್ಕೆ ಬೇಕು. ಅವರವರ ಧರ್ಮದಂತೆ ಇರಬಾರದೆನ್ನುವುದು ಪ್ರಜಾಪ್ರಭುತ್ವದಲ್ಲಿ ಸರಿ ಅಲ್ಲ. ಇದೇ ರೀತಿ ಹಿಂದೂ ಮಳಿಗೆಯಲ್ಲಿ ಮುಸ್ಲಿಂ ಮಹಿಳೆ ಯರು ಬುರ್ಖಾ ಹಾಕಿಬರಬಾರದೆಂದರೆ ಹೇಗಾಗ ಬಾರದು ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಬೆಂಗಳೂರಿನ ಕೋರಮಂಗಲದ ಶಿಕ್ಷಣ ಸಂಸ್ಥೆಯಲ್ಲಿ ಸಿಇಟಿ ಪರೀಕ್ಷೆಗೆ ಆಗಮಿಸಿದ ವಿದ್ಯಾರ್ಥಿಗಳ ಜನಿವಾರ ಕತ್ತರಿಸುತ್ತೇವೆ ಎಂದಿದ್ದಾರೆ. ಜನಿವಾರ ಕೇವಲ ದಾರವಲ್ಲ ಅದು ಹಿಂದೂ ಸಂಪ್ರದಾಯದ ಪವಿತ್ರ ಧಾರಣೆ, ಧಾರ್ಮಿಕ ಪರಂಪರೆ, ಸಂಸ್ಕೃತಿ ಹಾಗೂ ಗೌರವದ ಪ್ರತೀಕವಾಗಿದ್ದು ವರ್ಷ ಪೂರ್ತಿ ಅಧ್ಯಯನ ಮಾಡಿ ಪರೀಕ್ಷೆ ಬರೆಯಲು ಬಂದಾಗ ಏಕಾಏಕಿ ಜನಿವಾರ ಕತ್ತರಿಸುತ್ತೇವೆ ಎಂದಾಗ ಖಂಡಿತ ಅವರ ಮಾನಸಿಕತೆ ಕುಗ್ಗಿ ಪರೀಕ್ಷೆ ಬರೆಯಲು ಕಷ್ಟವಾಗುವುದನ್ನು ವಿದ್ಯೆ ಕಲಿಸಿಕೊಡುವ ಶಾಲೆಗಳೇ ಹೀಗೆ ಮಾಡುವುದು ಸರಿಯೇ? ಎಂದು ಪ್ರಶ್ನಿಸಿದರು.

ಮತ್ತೊಂದೆಡೆ ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಘಟಕದಲ್ಲಿ ನಡೆದಿದೆ ಎನ್ನಲಾದ ಮತಾಂತರ ಜಾಲದ 'ಕಾರ್ಪೋರೇಟ್ ಜಿಹಾದ್' ಹಾಗೂ ರಾಜ್ಯದಲ್ಲಿ ವರದಿಯಾಗುತ್ತಿರುವ ಲವ್ ಜಿಹಾದ್ ಸಂಬಂಧಿಸಿದಂತೆ ಇಂತಹ ಜಾಲವನ್ನು ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಕಠಿಣ ಕಾನೂನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲಾಧ್ಯಕ್ಷ ಕೆ.ಮಹೇಶ ಕಾಮತ್, ಕಾರ್ಯದರ್ಶಿ ಮಧು ಶಂಕರ್, ಸಹ ಕಾರ್ಯ ದರ್ಶಿ ಜಯಶ್ರೀ ಮತ್ತಿತರರು ಪಾಲ್ಗೊಂಡಿದ್ದರು.



ಹಿಂದೂ ನೌಕರರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ವಿಶ್ವ ಹಿಂದೂ ಪರಿಷದ್ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ವಿಜಯ ವಿಠ್ಠಲದ ವಿಪ್ರ ವಿದ್ಯಾರ್ಥಿನಿ ಮನಸ್ವಿನಿಗೆ ಅಭಿನಂದನೆ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ವಿಜಯ ವಿಠಲ ವಿದ್ಯಾಸಂಸ್ಥೆಯ ವಿಪ್ರ ವಿದ್ಯಾರ್ಥಿನಿ ಮನಸ್ವಿನಿ 624/625 ಅಂಕ ಪಡೆದು ರಾಜ್ಯಕ್ಕೆ ಎರಡನೇ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ಮೈಸೂರು ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ ಅಭಿನಂದಿಸಿದರು. ರಾಜ್ಯ ಸಮಿತಿ ಸದಸ್ಯರಾದ ಎಂ.ಆರ್. ಬಾಲಕೃಷ್ಣ, ಕಲ್ಕೆರೆ ನಾಗರಾಜು, ಎಂ.ಶ್ರೀನಿವಾಸಪ್ರಸಾದ್, ರಾಜ್‌ಕುಮಾರ್, ಚಂಚಲಾಕ್ಷಿ, ಮೇಟಗಳ್ಳಿ ಗಾಯತ್ರಿ ವಿಪ್ರ ವೃಂದದ ಕಾರ್ಯದರ್ಶಿ ಆರ್.ವಿ.ಕುಮಾರ್ ಹಾಗೂ ಪೋಷಕರಾದ ಪ್ರದೀಪ್ ನಾಗರಾಜ್, ಸಿ.ಆರ್.ರಾಧ ಉಪಸ್ಥಿತರಿದ್ದರು.

ಆರ್ಟ್ ಇಂಟ್ರೋ ಬೇಸಿಗೆ ಶಿಬಿರದಲ್ಲಿ ನಾಟಕ; ಗೊಂಬೆ ಆಟದ ಪ್ರದರ್ಶನ

ಮೈಸೂರು, ಏ.28–ಆರ್ಟ್ ಇಂಟ್ರೋ ಬೇಸಿಗೆ ಶಿಬಿರದಲ್ಲಿ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಮೇ 1ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್‌ವಿಕ್ ಶಾಲೆ ಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಥಿಯೇಟರ್ (IIET) ನಲ್ಲಿ ನಡೆಯಲಿದೆ.

ಎಲ್ಲಾ ವಯಸ್ಸಿನ ಪ್ರೇಕ್ಷಕರನ್ನು ಇಷ್ಟ ವಾಗುವ ಮನರಂಜನಾತ್ಮಕ ಕಾರ್ಯ ಕ್ರಮಗಳ ಸರಣಿಯನ್ನು ಹಮ್ಮಿಕೊಂಡಿ ದ್ದಾರೆ. Rabi Learned Roaring ಮತ್ತು Monku and Rabi ಹಾಗೂ ಹಿರಿಯ ರಂಗನಿರ್ದೇಶಕರಾದ ಪ್ರಸನ್ನ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಕನ್ನಡ ಮಕ್ಕಳ ನಾಟಕ Pippigondu Pappi ನಾಟಕಗಳ ಪ್ರದರ್ಶನಗಳಿರು ತ್ತದೆ. ಹೆಚ್ಚಿನ ಮಾಹಿತಿಗೆ ಮೊ. 96868 92255 ಸಂಪರ್ಕಿಸಬಹುದು.

ಬಿಇಓ ಸಿ.ಎನ್.ರಾಜುಗೆ ಸನ್ಮಾನ...



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಮೊದಲನೇ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಅವರನ್ನು ವಾಲ್ಮೀಕಿ ನೌಕರರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶಿಕ್ಷಕರಾದ ಶಿವಶಂಕರ್, ಮಂಜುನಾಥ, ನಾಗಲಿಂಗಪ್ಪ, ಮಲ್ಲಣ್ಣ, ಜವರನಾಯಕ, ಗುರುದತ್ತ, ಚಿಕ್ಕಣ್ಣ ಪೊಲೀಸ್, ಜಗದೀಶ್‌ಮೂರ್ತಿ, ಮಂಜುನಾಯಕ್, ಹರೀಶ್ ಇನ್ನಿತರರಿದ್ದರು.

ಸಕ್ಕರೆ ನಿಯಂತ್ರಣ ಕಾಯ್ದೆ ತಿದ್ದುಪಡಿಗೆ ಮುನ್ನ ರೈತರ, ವಿಷಯ ಪರಿಣಿತರ ಸಮಿತಿ ರಚಿಸಿ

ಕೇಂದ್ರ ಸರ್ಕಾರಕ್ಕೆ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ



ಮೈಸೂರು ಜಲದರ್ಶಿನಿ ಅತಿಥಿಗೃಹದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಏ.28(ಬಿಎಲ್‌ಯು)– ಕೇಂದ್ರ ಸರ್ಕಾರ ಸಕ್ಕರೆ ನಿಯಂತ್ರಣ ಕಾಯ್ದೆ 1966ಕ್ಕೆ ತಿದ್ದುಪಡಿ ತರುವ ಮುನ್ನ ಕಬ್ಬು ಬೆಳೆಗಾರರು, ವಿಷಯ ಪರಿಣಿತರು, ಕಾನೂನು ಸಲಹೆಗಾರರ ಸಮಿತಿ ರಚಿಸಬೇಕೆಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಿತಿ ನೀಡುವ ವರದಿ ಆಧಾರದ ಮೇಲೆ ಕೇಂದ್ರ ಸರ್ಕಾರ ತಿದ್ದುಪಡಿ ತರಬೇಕೇ ಹೊರತು ಏಕಪಕ್ಷೀಯ ನಿರ್ಧಾರ ಕೈಗೊಳ್ಳಬಾರದು ಎಂದು ಒತ್ತಾಯಿಸಿದರು.

ಕಬ್ಬು ಅರೆಯುವಾಗ ಉತ್ಪತ್ತಿಯಾಗುವ ಸಿಪ್ಪೆ, ಮೊಲಸಿಸ್, ವಿದ್ಯುತ್, ಮದ್ಯಸಾರ, ಯಥನಾಲ್ ಹಾಗೂ ಬಯೋ ಕಾಂಪೋಸ್ಟ್ ಗೊಬ್ಬರದ ಲಾಭವನ್ನು ಲೆಕ್ಕ ಹಾಕಿ ಕಬ್ಬಿನ ಖರೀದಿಗೆ ಎಫ್‌ಆರ್‌ಪಿ ದರ ನಿಗದಿ ಮಾಡಬೇಕು. ಇದನ್ನು ರೈತರ ಹೊಲ ದಲ್ಲಿನ ದರವೆಂದು ನಗದಿ ಮಾಡಬೇಕು. ಯಾವುದೇ ಕಾರಣಕ್ಕೂ ಇದರಲ್ಲಿ ಸಾಗಾಣಿಕೆ ಮತ್ತು ಉಸ್ತುವಾರಿಯನ್ನು ಸೇರಿಸಬಾರದು ಎಂದು ಕುರುಬೂರು ಶಾಂತಕುಮಾರ್ ಮನವಿ ಮಾಡಿದರು.

ಕಬ್ಬನ್ನು 12 ತಿಂಗಳ ವಾಯಿದೆ ಒಳಗೆ ಕಟಾವು ಮಾಡಬೇಕು. ಒಂದು ವೇಳೆ 14 ತಿಂಗಳು ಮೇಲ್ಪಟ್ಟು ಕಟಾವು ಮಾಡಿ ದರೆ ರೈತರ ಬ್ಯಾಂಕಿನ ಹೆಚ್ಚುವರಿ ಬಡ್ಡಿ ಯನ್ನು ಸಕ್ಕರೆ ಕಾರ್ಖಾನೆಗಳು ಪಾವತಿ ಮಾಡಬೇಕು. ನೂತನ ಕಾರ್ಖಾನೆ ಆರಂಭಕ್ಕೆ 25 ಕಿಲೋ ಮೀಟರ್ ವ್ಯಾಪ್ತಿ ಮಿತಿಯ ನಿರ್ಬಂಧ ತೆರವು ಮಾಡಬೇಕು. ರೈತರಿಗೆ ಅನುಕೂಲವಾಗುವ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ನಿಮಯ ಜಾರಿ ಗೊಳಿಸಬೇಕು ಎಂದು ಹೇಳಿದರು.

ಕಬ್ಬಿನ ಹಣವನ್ನು ಖಾಸಗಿ ಬ್ಯಾಂಕ್ ಹೊರತುಪಡಿಸಿ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಾವತಿ ಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕಬ್ಬಿಗೆ ದರ ನಿಗದಿ ಮಾಡಿದಂತೆ ಹಣ ಪಾವತಿಸದ ಕಾರ್ಖಾನೆ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಕಾನೂನು ಜಾರಿಗೊಳಿಸಬೇಕು ಎಂದು ಶಾಂತಕುಮಾರ್ ಒತ್ತಾಯ ಮಾಡಿದರು.

ಕಬ್ಬು ಬೆಳೆಗಾರರ ಸಂಘದ ಪದಾಧಿ ಕಾರಿ ಗಳಾದ ಪಿ.ಸೋಮಶೇಖರ್, ನೀಲಕಂಠಪ್ಪ, ವೆಂಕಟೇಶ್ ಹಾಗೂ ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೇ 4, ಮೈಸೂರು–ಅರಸೀಕೆರೆ ಪ್ಯಾಸೆಂಜರ್ ರೈಲು ಸಂಚಾರ ರದ್ದು

ಮೈಸೂರು,ಏ.28(ಬಿಎಲ್‌ಯು)– ರೈಲ್ವೆ ನಿಲ್ದಾಣಗಳ ನಡುವಿನ ಸೇತುವೆ ಕಾಮಗಾರಿ ಹಿನ್ನೆಲೆಯಲ್ಲಿ ಮೇ 4 ರಂದು ಮೈಸೂರು–ಅರಸೀಕೆರೆ ಪ್ಯಾಸೆಂಜರ್ ರೈಲು, ಅರಸೀಕೆರೆ–ಮೈಸೂರು ಪ್ಯಾಸಂ ಜರ್ ಹಾಗೂ ಮೈಸೂರು–ಎಸ್‌ಎಂ ವಿಟಿ ಬೆಂಗಳೂರು ಪ್ಯಾಸೆಂಜರ್ ರೈಲು ಗಳ ಸಂಚಾರ ರದ್ದುಗೊಳಿಸಲಾಗಿದೆ.

ಮಂದಗೆರೆ ಮತ್ತು ಹೊಳೆನರಸೀ ಪುರ ರೈಲ್ವೆ ನಿಲ್ದಾಣಗಳ ನಡುವಿನ ಸೇತುವೆ ಕಾಮಗಾರಿ ಹಿನ್ನೆಲೆಯಲ್ಲಿ ಲೈನ್ ಬ್ಲಾಕ್ ಹಾಗೂ ಪವರ್ ಬ್ಲಾಕ್ ಇರುವುದರಿಂದ ಈ ರೈಲುಗಳ ಸೇವೆ ರದ್ದುಗೊಳಿಸಲಾಗಿದೆ. ಅಲ್ಲದೆ ಮೇ 4ರಂದು ಮೈಸೂರಿನಿಂದ ಹೊರಡುವ ಮೈಸೂರು–ಯಶವಂತಪುರ ಎಕ್ಸ್ ಪ್ರೆಸ್ ರೈಲನ್ನು ಮಾರ್ಗ ಮಧ್ಯೆ ಸುಮಾರು 150 ನಿಮಿಷಗಳ ಕಾಲ ನಿಯಂತ್ರಿಸಲಾಗುತ್ತದೆ. ಜೊತೆಗೆ ಏ.29 ಮತ್ತು ಮೇ 6ರಂದು ಅರಸೀ ಕೆರೆ–ಮೈಸೂರು ಎಕ್ಸ್‌ಪ್ರೆಸ್ ರೈಲು ಅರಸೀಕೆರೆಯಿಂದ ಹಾಗೂ ಮೈಸೂರು ಎಸ್‌ಎಂವಿಟಿ ಬೆಂಗಳೂರು ಪ್ಯಾಸಂ ಜರ್ ರೈಲು ಮೈಸೂರಿನಿಂದ ನಿಗದಿತ ಸಮಯಕ್ಕಿಂತ 150 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ವಿಭಾಗೀಯ ಹಣಕಾಸು ವ್ಯವಸ್ಥಾಪಕ ಪೃಥ್ವಿ ಎಸ್.ಹುಲ್ಲತ್ತಿ ತಿಳಿಸಿದ್ದಾರೆ.

ಆಟೋದಲ್ಲಿ ಗಾಂಜಾ ಸೊಪ್ಪು ಸಾಗಿಸುತ್ತಿದ್ದವನ ಬಂಧನ



ಮೈಸೂರು, ಏ.28(ಜಿಎ)–ಆಟೋ ರಿಕ್ಷಾದಲ್ಲಿ ಗಾಂಜಾ ಸೊಪ್ಪು ಸಾಗಿಸು ತ್ತಿದ್ದ ವ್ಯಕ್ತಿಯನ್ನು ಬಂಧಿಸಿ, 1 ಕೆಜಿ 585 ಗ್ರಾಂ ಗಾಂಜಾ ಸೊಪ್ಪನ್ನು ಇಲವಾಲ ಪೊಲೀಸರು ವಶಪಡಿಸಿಕೊಂಡಿ ದ್ದಾರೆ. ಮೈಸೂರಿನ ಶಾಂತಿನಗರದ ನಿವಾಸಿ ಸಮಿವುಲ್ಲಾ ಬಂಧಿತ ಆರೋಪಿ. ಏ.27ರಂದು ರಾತ್ರಿ 12.15ರ ಸುಮಾ ರಿಗೆ ಇಲವಾಲ ಪೊಲೀಸರು ರಾತ್ರಿ ವಿಶೇಷ ರೌಂಡ್ಸ್ ನಡೆಸುತ್ತಿದ್ದಾಗ, ಮೈಸೂರಿಂದ ಪಿರಿಯಾಪಟ್ಟಣಕ್ಕೆ ಗಾಂಜಾ ಸೊಪ್ಪು ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಮೈಸೂ ರಿಂದ ಬರುತ್ತಿದ್ದ ಸಮಿವುಲ್ಲಾ (ಕೆ–55 ಎ–0829) ಆಟೋರಿಕ್ಷಾ ಪರಿ ಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಕೃಷ್ಣ ಬೋಧನಾ ಕೇಂದ್ರದ ಮಕ್ಕಳ ಸಾಧನೆ



ಗೌತಮಿ ಮಹಮ್ಮದ್ ಪೂಜಾ ಕೌಶಿಕ್ ರೋಹಿಣಿ ವಿಕಾಸ್

ಮೈಸೂರು, ಏ. 28– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹಿತೈಷಿ ಚಾರಿಟಬಲ್ ಟ್ರಸ್ಟ್‌ನ ಶ್ರೀಕೃಷ್ಣ ಬೋಧನಾ ಕೇಂದ್ರದ ವಿದ್ಯಾರ್ಥಿಗಳು 100/100 ರಷ್ಟು ಫಲಿತಾಂಶ ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಗೌತಮಿ 605 (ಶೇ.91), ವಿಜ್ಞಾನ 99, ಹಿಂದಿ 98, ಸಮಾಜ ಶಾಸ್ತ್ರ 98, ಗಣಿತ 97 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಹಾಗೆಯೇ ಮಹಮ್ಮದ್ 563 (ಶೇ. 90), ಪೂಜಾ 553 (ಶೇ. 88.5), ಕೌಶಿಕ್ 84%, ರೋಹಿಣಿ 82%, ವಿಕಾಸ್ 80% ಅಂಕ ಪಡೆದುಕೊಂಡಿದ್ದಾರೆ.

ಮೋನಿಶ್‌ಗೌಡಗೆ ಉನ್ನತ ಶ್ರೇಣಿ



ಮೈಸೂರು,ಏ.28(ಜಿಎ)–ಮೈಸೂರಿನ ಜಾಕಿ ಕ್ವಾಟ್ರಸ್ ಬಳಿಯಿರುವ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಎಸ್.ಮೋನಿಶ್‌ಗೌಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 598 ಅಂಕ ಗಳಿಸಿ ವಿದ್ಯಾ ಲಯಕ್ಕೆ ಕೀರ್ತಿ ತಂದಿದ್ದಾರೆ. ಇಂಗ್ಲಿಷ್‌ನಲ್ಲಿ 121, ಕನ್ನಡ 99, ಹಿಂದಿ 100, ಗಣಿತ 89, ವಿಜ್ಞಾನ 90 ಹಾಗೂ ಸಮಾಜ ವಿಜ್ಞಾನದಲ್ಲಿ 99 ಅಂಕ ಗಳಿಸಿದ್ದಾನೆ. ಈತ ಪಿ.ಸಿದ್ದೇಗೌಡ ಮತ್ತು ಎಂ.ಸವಿತಾ ದಂಪತಿ ಪುತ್ರ.

ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರಪಾಲಿಕೆ ಆಡಳಿತಾಧಿಕಾರಿಗಳಿಗೆ ಪೌರಕಾರ್ಮಿಕರಿಂದ ಮನವಿ ಸಲ್ಲಿಕೆ

ಮೈಸೂರು, ಏ.28(ಎಸ್‌ಪಿಎನ್)–ತಮ್ಮ ಬೇಡಿಕೆ ಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿ ಕರ ಮಹಾಸಂಘದ ಪದಾಧಿಕಾರಿಗಳು ಮೈಸೂರು ನಗರಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದರು.

ರಾಜ್ಯಾಧ್ಯಕ್ಷ ನಾರಾಯಣ ಅವರ ನೇತೃತ್ವದಲ್ಲಿ ಭೇಟಿ ಮಾಡಿದ ಪದಾಧಿಕಾರಿಗಳು, ರಾಷ್ಟ್ರೀಯ ಹಬ್ಬಗಳು, ಇತರೆ ಸರ್ಕಾರಿ ರಜಾ ದಿನಗಳಲ್ಲಿ ಪೌರಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಈ ದಿನಗಳಲ್ಲಿ ಕೆಲಸ ಮಾಡುವ ಪೌರಕಾರ್ಮಿಕರಿಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡು ತ್ತಿಲ್ಲ ಹಾಗೂ ಬದಲಿ ರಜೆಯನ್ನು ನೀಡದೇ ಸಂಬಂಧ ಪಟ್ಟ ಅಧಿಕಾರಿಗಳು ಕಾರ್ಮಿಕ ಕಾಯ್ದೆಯನ್ನು ಸ್ಪಷ್ಟ ಉಲ್ಲಂಘನೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪೌರಕಾರ್ಮಿಕರಿಂದ ಇಎಸ್‌ಐ, ಪಿಎಫ್ ವಂತಿಕೆ ಹಣ ಪಡೆಯುತ್ತಿದ್ದು, ಇದಕ್ಕೆ ಸಮಾನವಾಗಿ ಆಡಳಿತ ವರ್ಗ ಮ್ಯಾಚಿಂಗ್ ಗ್ರಾಂಡ್ ಹೊಂದಿಸಿ ಇಎಸ್‌ಐ, ಪಿಎಫ್ ಹಣವನ್ನು ಪ್ರತಿ ಮಾಹೆ ತುಂಬಬೇಕೆಂದು ಕಾಯ್ದೆಯಲ್ಲಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಮೌನವಹಿಸಿದ್ದಾರೆ ಎಂದು ದೂರಿದರು.

ರಾಜ್ಯ ಸರ್ಕಾರದ ಆದೇಶ ಪ್ರಕಾರ ಪ್ರತಿ ಆರು ತಿಂಗಳಿ ಗೊಮ್ಮೆ ಪೌರಕಾರ್ಮಿಕ ಆರೋಗ್ಯ ತಪಾಸಣೆ ಮಾಡಿಸ ಬೇಕು. ಆದರೆ, ಅಧಿಕಾರಿಗಳು ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಪೌರಕಾರ್ಮಿಕರಿಗೆ ನೀಡುವ ಬೆಳಗಿನ ಉಪಹಾರ ಯೋಗ್ಯವಾಗಿರುವುದಿಲ್ಲ. ಇದರ ಬಗ್ಗೆ ಪಾಲಿಕೆ ಆಯುಕ್ತರು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗು ತ್ತಿಲ್ಲ. ಅಂತೆಯೇ ಹಲವು ಬಾರಿ ಬೆಳಗಿನ ಉಪಹಾರ ಸೇವನೆಯಿಂದ ಪೌರಕಾರ್ಮಿಕರ ಆರೋಗ್ಯದಲ್ಲಿ ಏರು ಪೇರಾಗುತ್ತಿದ್ದು, ಇದರ ಬಗ್ಗೆ ಗಮನಹರಿಸುವಂತೆ ಒತ್ತಾಯಿಸಿದ್ದಾರೆ. ಪಾಲಿಕೆಯ ಎಸ್‌ಸಿಪಿ ಮತ್ತು ಟಿಎಸ್‌ಪಿ ಹಣದಲ್ಲಿ ಪೌರಕಾರ್ಮಿಕರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಶೇ.24.10 ಮೀಸಲಿಟ್ಟಿರುವ ಹಣವನ್ನು ಪೌರಕಾರ್ಮಿ ಕರ ಶ್ರೇಯೋಭಿವೃದ್ಧಿಗಾಗಿ ವ್ಯಯ ಮಾಡುತ್ತಿಲ್ಲ. ಇದರ ಬಗ್ಗೆ ಗಮನಹರಿಸುವಂತೆ ಮನವಿ ಮಾಡಿದ್ದಾರೆ. ಪೌರ ಕಾರ್ಮಿಕರ ಈ ಸಮಸ್ಯೆಗಳನ್ನು ಪರಿಹರಿಸಲು ತಮ್ಮ ಅಧ್ಯಕ್ಷತೆಯಲ್ಲಿ ಕಾರ್ಮಿಕ ಇಲಾಖೆ, ಮೈಸೂರು ಮಹಾ ನಗರಪಾಲಿಕೆ ಹಾಗೂ ಪೌರಕಾರ್ಮಿಕರ ಮುಖಂಡ ರೊಂದಿಗೆ ಸಭೆ ನಡೆಸುವಂತೆ ಮಹಾಸಂಘದ ಅಧ್ಯಕ್ಷ ನಾರಾಯಣ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.



ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದ ಪದಾಧಿಕಾರಿಗಳು ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್‌ರನ್ನು ಭೇಟಿ ಮಾಡಿ, ತಮ್ಮ ಸಮಸ್ಯೆಗಳ ಕುರಿತು ಮನವಿ ಸಲ್ಲಿಸಿದರು.

ದೇಶ - ವಿದೇಶ

ಮೊದಲ ಬಾರಿ ಹಳಿ ತಪ್ಪಿದ ವಂದೇ ಭಾರತ್ ರೈಲು; ತಪ್ಪಿದ ಅನಾಹುತ

ಪುಣೆ: ಮುಂಬೈ–ಸೋಲಾಪುರ ವಂದೇ ಭಾರತ್ ರೈಲು ಮೊದಲ ಬಾರಿ ಸೋಮವಾರ ರಾತ್ರಿ ಪುಣೆ ರೈಲು ನಿಲ್ದಾಣಕ್ಕೆ ಪ್ರವೇ ಶಿಸುವ ಮುನ್ನ ಹಳಿತಪ್ಪಿದ್ದು, ಅದೃಷ್ಟವಶಾತ್ ದೊಡ್ಡ ಅನಾಹುತ ತಪ್ಪಿದೆ. ಮುಂಬೈ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್(ಸಿಎಸ್‌ಎಂಟಿ)ನಿಂದ ನೈರುತ್ಯ ಮಹಾರಾಷ್ಟ್ರದ ಸೋಲಾಪುರಕ್ಕೆ ತೆರಳುತ್ತಿದ್ದ ಪ್ರೀಮಿಯಂ ಎಸಿ ರೈಲು(ಸಂಖ್ಯೆ 22225) ರಾತ್ರಿ 7.30ರ ಸುಮಾರಿನಲ್ಲಿ ಪ್ಲಾಟ್‌ಫಾರ್ಮ್ ಬಳಿ ಕ್ರಾಸಿಂಗ್ ಮೇಲೆ ಹಾದು ಹೋಗುತ್ತಿ ದ್ದಾಗ ಹಳಿ ತಪ್ಪಿದೆ. ಈ ಘಟನೆಯಲ್ಲಿ ಯಾವುದೇ ಪ್ರಯಾಣಿಕ ರಿಗೆ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪುಣೆ ನಿಲ್ದಾಣದಲ್ಲಿ ನಡೆಯುತ್ತಿರುವ ಯಾರ್ಡ್ ನವೀಕರಣ ಕಾರ್ಯದ ಭಾಗವಾಗಿ ಕ್ರಾಸಿಂಗ್ ಅನ್ನು ನವೀಕರಣಕ್ಕೆ ನಿಗದಿ ಪಡಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ. ಹಳಿ ತಪ್ಪಿದ ಕೋಚ್‌ನ ಪ್ರಯಾಣಿಕರು ತಮ್ಮ ಸಾಮಾನು ಗಳನ್ನು ಹೊತ್ತುಕೊಂಡು ರೈಲಿನಿಂದ ಇಳಿದು ಹತ್ತಿರದ ಪ್ಲಾಟ್‌ಫಾರ್ಮ್‌ಗೆ ನಡೆದುಕೊಂಡು ಹೋಗುತ್ತಿರುವ ದೃಶ್ಯ ವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಲಾಗಿದೆ.

ರೈಲುಗಳು ಡಿಕ್ಕಿ: ಏಳು ಮಂದಿ ಸಾವು 81 ಪ್ರಯಾಣಿಕರಿಗೆ ಗಾಯ



ಜಕಾರ್ತಾ: ಇಂಡೋನೇಷ್ಯಾದ ಜಕಾರ್ತಾ ಹೊರ ವಲಯದಲ್ಲಿ ಎರಡು ರೈಲುಗಳ ನಡುವೆ ಭೀಕರ ಅಪ ಘಾತ ಸಂಭವಿಸಿದ ಪರಿಣಾಮ ಏಳು ಮಂದಿ ಭೀಕರ ವಾಗಿ ಸಾವನ್ನಪ್ಪಿ, 81 ಮಂದಿ ಗಾಯಗೊಂಡಿರುವ ಘಟನೆ ಸೋಮವಾರ ತಡರಾತ್ರಿ ಸಂಭವಿಸಿದೆ.

ಜಕಾರ್ತಾ ಹೊರವಲಯದ ಬೆಕಾಸಿಯಲ್ಲಿ ಲೆವೆಲ್ ಕ್ರಾಸಿಂಗ್‌ನಲ್ಲಿ ಟ್ಯಾಕ್ಸಿಯೊಂದು ಪ್ರಯಾಣಿಕರ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮ ರೈಲು ಹಳಿಯಲ್ಲಿ ನಿಂತಿತ್ತು. ಇದೇ ವೇಳೆಗೆ ಮತ್ತೊಂದು ರೈಲು ಬಂದು ಪ್ರಯಾಣಿಕ ರೈಲಿನ ಮಹಿಳೆಯರ ಬೋಗಿಗೆ ಡಿಕ್ಕಿ ಹೊಡೆದಿದೆ. ಅಪ ಘಾತದ ಪರಿಣಾಮ ರೈಲಿನ ಬೋಗಿಗಳು ಜಖಂಗೊಂಡು 7 ಮಂದಿ ಮೃತಪಟ್ಟಿದ್ದಾರೆ. ಇನ್ನೂ ಹಲವರು ಬೋಗಿ ಯಲ್ಲೇ ಸಿಲುಕಿದ್ದಾರೆ. ಇಂಡೋನೇಷ್ಯಾದ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಸಮಿತಿ ಅಪಘಾತದ ತನಿಖೆ ನಡೆಸುತ್ತಿದೆ.

ಪಹಲ್ಗಾಮ್ ದಾಳಿ ಮಾದರಿ ಧರ್ಮ ಕೇಳಿ ಇರಿದ ದುಷ್ಕರ್ಮಿ

ಮುಂಬೈ: ಕಟ್ಟಡವೊಂದರಲ್ಲಿ ಕಾವಲಿದ್ದ ಇಬ್ಬರು ಭದ್ರತಾ ಸಿಬ್ಬಂದಿ ಕಲ್ಮಾ ಪಠಿಸದ ಕಾರಣಕ್ಕೆ ದುಷ್ಕರ್ಮಿ ಯೊಬ್ಬ ಚಾಕುವಿನಿಂದ ಇರಿದಿರುವ ಘಟನೆ ಮುಂಬೈನ ಮೀರಾ ರಸ್ತೆಯಲ್ಲಿ ನಡೆದಿದೆ.



ಪಹಲ್ಗಾಮ್ ದಾಳಿ ಮಾದರಿ ಯಂತೆ ಚಾಕು ಇರಿಯುವ ಮುನ್ನ ಧರ್ಮ ಕೇಳಿ, ಕಲ್ಮಾ ಪಠಿಸಲು ಸೂಚಿಸಿದ್ದ ಎಂದು ವರದಿಯಾಗಿದೆ. ರಾಜ್‌ಕುಮಾರ್ ಮಿಶ್ರಾ ಮತ್ತು ಸುಬ್ರೋತೋ ರಮೇಶ್ ಸೇನ್ ಚಾಕು ಇರಿತಕ್ಕೊಳಗಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಸಿಸಿಟಿವಿ ದೃಶ್ಯಗಳ ಆಧಾರದ ಮೇಲೆ ಆರೋಪಿ ಜೈಬ್ ಜುಬೈರ್ ಅನ್ಸಾರಿ(31)ಯನ್ನು ಘಟನೆ ನಡೆದ ಕೇವಲ ಒಂದೂವರೆ ಗಂಟೆಯೊಳಗೆ ಪೊಲೀ ಸರು ಬಂಧಿಸಿದ್ದಾರೆ. ಬೆಳಗಿನ ಜಾವ 4 ಗಂಟೆ ಸುಮಾ ರಿಗೆ ಮುಂಬೈನ ನಯಾ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ವೋಕ್‌ಹಾರ್ಡ್ ಆಸ್ಪತ್ರೆಯ ಹಿಂಭಾಗದಲ್ಲಿ ರುವ ಅಸ್ಮಿತಾ ಗ್ರ್ಯಾಂಡ್ ಮ್ಯಾನ್ಷನ್ ಬಳಿ ರಾಜ್‌ಕುಮಾರ್ ಮಿಶ್ರಾ ಮತ್ತು ಸುಬ್ರೋತೋ ಸೇನ್ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು. ಈ ವೇಳೆ ದುಷ್ಕರ್ಮಿ ಜೈಬ್ ಜುಬೈರ್ ಅನ್ಸಾರಿ ಸ್ಥಳಕ್ಕೆ ಬಂದು ಇಬ್ಬರ ಜೊತೆ ಮಾತನಾಡು ತ್ತಿದ್ದ. ಈ ವೇಳೆ ಇದ್ದಕ್ಕಿದ್ದಂತೆ ಧರ್ಮ ಕೇಳಿ ಕಲ್ಮಾ ಪಠಿಸಲು ಹೇಳಿದ್ದಾನೆ. ಆಗ ಗೊತ್ತಿಲ್ಲ ಎಂದಿದ್ದಕ್ಕೆ ಚಾಕು ವಿನಿಂದ ಚುಚ್ಚಿದ್ದಾನೆ. ರಾಜ್‌ಕುಮಾರ್ ಗಂಭೀರವಾಗಿ ಗಾಯಗೊಂಡಿದ್ದು, ಸುಬ್ರೋತೋಗೆ ಸಣ್ಣ ಗಾಯಗಳಾಗಿವೆ.

ನಲ್ಲಿ ನೀರಿಗಾಗಿ 2 ಕುಟುಂಬಗಳ ನಡುವೆ ಸಂಘರ್ಷ: 42 ಮಂದಿ ಸಾವು

ಪೂರ್ವ ಚಾಡ್: ಕೊಳಾಯಿ(ನಲ್ಲಿ) ನೀರಿಗಾಗಿ ಎರಡು ಕುಟುಂಬಗಳ ನಡುವಿನ ಜಗಳ, ಹಿಂಸಾತ್ಮಕ ಸ್ವರೂಪ ಪಡೆದು ಸುಮಾರು 42 ಮಂದಿ ಸಾವನ್ನಪ್ಪಿರುವ ಘಟನೆ ಸುಡಾನ್‌ನೊಂದಿಗೆ ಗಡಿ ಹಂಚಿಕೊಂಡಿರುವ ಪೂರ್ವ ಚಾಡ್‌ನಲ್ಲಿ ನಡೆದಿದೆ. ಸುಡಾನ್ ಗಡಿ ಬಳಿಯ ವಾಡಿ ಫಿರಾ ಪ್ರಾಂತ್ಯದ ಇಗೋಟ್ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಚಾಡ್‌ನ ಉಪ ಪ್ರಧಾನ ಮಂತ್ರಿ ಲಿಮಾನೆ ಮಹಾಮತ್ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ. ಘರ್ಷಣೆಯಲ್ಲಿ 42 ಜನ ಸಾವನ್ನಪ್ಪಿ, 10 ಮಂದಿ ಗಾಯಗೊಂಡಿದ್ದಾರೆ. ಇವರನ್ನು ಪ್ರಾಂತೀಯ ಆರೋಗ್ಯ ಕೇಂದ್ರಕ್ಕೆ ಸೇರಿಸಲಾ ಗಿದೆ. ಪ್ರತೀಕಾರವು ದೊಡ್ಡ ಪ್ರದೇಶದಲ್ಲಿ ಹರಡಿತ್ತು. ಸೈನ್ಯವು ತ್ವರಿತ ಕ್ರಮ ವಹಿಸಿ ಘರ್ಷಣೆಯನ್ನು ತಡೆದಿದ್ದು, ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ ಎಂದು ಅವರು ತಿಳಿಸಿದ್ದಾರೆ.



ಹಲವಾರು ತಿಂಗಳುಗಳಿಂದ ಸುಡಾನ್‌ನಲ್ಲಿ ನಡೆಯು ತ್ತಿರುವ ಯುದ್ಧದಿಂದ ಪಲಾಯನ ಮಾಡುವ ನಿರಾಶ್ರಿತ ರಿಗೆ ಚಾಡ್‌ನ ಪೂರ್ವ ಪ್ರಾಂತ್ಯಗಳು ಆಶ್ರಯ ನೀಡುತ್ತಿವೆ. ಪರಿಣಾಮ ಸಂಪನ್ಮೂಲಗಳು ಮತ್ತು ಭದ್ರತೆಯ ಮೇಲೆ ಒತ್ತಡ ಹೆಚ್ಚುತ್ತಿದೆ. ಸುಡಾನ್ ಬಣಗಳ ಹೋರಾಟಗಾರರು ಪದೇ ಪದೆ ಗಡಿ ದಾಟಿದ್ದರಿಂದ ಫೆಬ್ರವರಿಯಲ್ಲಿ ಚಾಡ್ ತನ್ನ ಗಡಿಯನ್ನು ತಾತ್ಕಾಲಿಕವಾಗಿ ಮುಚ್ಚಿದೆ.

ಪಂಜಾಬ್‌ನಲ್ಲಿ ರೈಲ್ವೆ ಹಳಿ ಬಳಿ ಸ್ಫೋಟ; ಸ್ಥಳದಲ್ಲಿ ಛಿದ್ರವಾದ ಮೃತದೇಹ ಪತ್ತೆ

ಪಟಿಯಾಲ: ಪಂಜಾಬ್‌ನ ಪಟಿಯಾಲದಲ್ಲಿ ರೈಲ್ವೆ ಹಳಿ ಬಳಿ ಸೋಮವಾರ ರಾತ್ರಿ ಸ್ಫೋಟ ಸಂಭವಿಸಿದ್ದು, ಸ್ಥಳ ದಲ್ಲಿ ಅಪರಿಚಿತನ ಮೃತ ದೇಹ ಪತ್ತೆಯಾಗಿದೆ.



ಶಂಭು–ಅಂಬಾಲ ರೈಲು ಹಳಿಯಲ್ಲಿ ಸ್ಫೋಟ ಸಂಭ ವಿಸಿದ ಪರಿಣಾಮ ಹಳಿಗೆ ಹಾನಿಯಾಗಿದೆ. ಅದೇ ಸ್ಥಳದಲ್ಲಿ ವ್ಯಕ್ತಿಯ ಮೃತದೇಹ ಪತ್ತೆಯಾಗಿರುವುದು ಅನುಮಾನ ಗಳನ್ನು ಸೃಷ್ಟಿಸಿದೆ. ವಿಷಯ ತಿಳಿದ ಕೂಡಲೇ ಪೊಲೀಸ್ ಉಪ ಮಹಾನಿರ್ದೇಶಕ ಮತ್ತು ಪಟಿಯಾಲ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದ್ದಾರೆ. ರೈಲ್ವೆ ಪೊಲೀಸರು ಮತ್ತು ರೈಲ್ವೆ ರಕ್ಷಣಾ ಪಡೆಯಿಂದಲೂ ತನಿಖೆ ಆರಂಭವಾಗಿದೆ. ವಿಧಿವಿಜ್ಞಾನ ತಜ್ಞರ ತಂಡ ಸ್ಫೋಟದ ಸ್ಥಳದಲ್ಲಿ ವಿವಿಧ ವಸ್ತುಗಳ ಮಾದರಿ ಸಂಗ್ರಹಿ ಸಿದೆ. ಕಡಿಮೆ ತೀವ್ರತೆಯ ಸ್ಫೋಟ ಸಂಭವಿಸಿದೆ. ಹಳಿಗಳ ಬಳಿ ಪತ್ತೆಯಾದ ಶವವು ಛಿದ್ರಗೊಂಡಿದ್ದು, ಘಟನೆ ಬಗ್ಗೆ ಪಟಿಯಾಲ ಎಸ್‌ಎಸ್‌ಪಿ ವರುಣ್ ಶರ್ಮಾ ಹೇಳಿದ್ದಾರೆ.

ಜನವರಿ 24ರಂದು ಪಂಜಾಬ್‌ನ ಫತೇಘರ್ ಸಾಹಿಬ್ ಜಿಲ್ಲೆಯ ಸಿರ್ಹಿಂದ್‌ನಲ್ಲಿರುವ ಸರಕು ಸಾಗಣೆ ಕಾರಿಡಾರ್ ಕೂಡ ಆಗಿರುವ ರೈಲ್ವೆ ಹಳಿಯಲ್ಲಿ ಸ್ಫೋಟ ಸಂಭವಿಸಿ, ಲೋಕೋ ಪೈಲಟ್ ಅನಿಲ್ ಶರ್ಮಾ ಸಣ್ಣಪುಟ್ಟ ಗಾಯ ಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದರು.

ಮೈಸೂರು ಮಿತ್ರ ಬುಧವಾರ 29 ಏಪ್ರಿಲ್ 2026

ಬ್ಯಾರಿ ಭಾಷಿಕ ಜನಾಂಗದಿಂದ ಕನ್ನಡಕ್ಕೆ ಅಮೂಲ್ಯ ಕೊಡುಗೆ

ಜಿಲ್ಲಾ ಮೊದಲ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರ ಪ್ರತಿಪಾದನೆ

ಮಡಿಕೇರಿ, ಏ.28–ಬ್ಯಾರಿ ಭಾಷಿಕ ಜನಾಂಗ ಕನ್ನಡದ ಕಟ್ಟಾಭಿಮಾನಿಯಾಗಿದ್ದು, ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದೆ ಎಂದು ಜಿಲ್ಲಾ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸಾಹಿತಿ ಬಿ.ಎ.ಷಂಶುದ್ದೀನ್ ಪ್ರತಿಪಾದಿಸಿದ್ದಾರೆ.



ಷಂಶುದ್ದೀನ್

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಮತ್ತು ಕೊಡಗು ಬ್ಯಾರೀಸ್ ವೆಲ್‌ಫೇರ್ ಟ್ರಸ್ ಸಹಯೋಗದಲ್ಲಿ ನಗರದ ಕಾವೇರಿ ಹಾಲ್‌ನಲ್ಲಿ ನಡೆದ ಜಿಲ್ಲಾ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಅವರು, ರಾಜ್ಯದಲ್ಲಿ ಬ್ಯಾರಿ ಅಕಾಡೆಮಿ ಸ್ಥಾಪನೆಯಾದ ಬಳಿಕ ಬ್ಯಾರಿ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯಾಗಿದೆ. ಸಮುದಾಯದ ಹೆಣ್ಣು ಮಕ್ಕಳು ಉನ್ನತ ವಿದ್ಯಾಭ್ಯಾಸದ ಕಡೆ ಮುಖ ಮಾಡುವ ಮೂಲಕ ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಗಳಿಸಲು ಸಾಧ್ಯವಾಗಿದೆ. ಇದು ಬ್ಯಾರಿ ಭಾಷಿಕ ಸಮುದಾಯಕ್ಕೆ ಹೆಮ್ಮೆಯ ವಿಚಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಬ್ಯಾರಿ ಭಾಷೆಯಲ್ಲಿ ಜಾನಪದ ಸಾಹಿತ್ಯ ವಿಫುಲವಾಗಿತ್ತು ಆದರೆ ಅಕ್ಷರ ಜ್ಞಾನ ಇಲ್ಲದ ಹಿಂದಿನ ಕಾಲದ ಬ್ಯಾರಿಗಳಿಂದ ಲಿಖಿತರೂಪದಲ್ಲಿ ದಾಖಲಾಗಲಿಲ್ಲ ಎಂದು ವಿಷಾದಿಸಿದರು. ಬಾಯಿಂದ ಬಾಯಿಗೆ ಹರಿದು ಬಂದ ಹಾಡುಗಳು, ಕಥೆಗಳು, ಜೋಗುಳ ಗೀತೆಗಳು, ಮದುವೆ ಮುಂತಾದ ಸಂದರ್ಭಗಳಲ್ಲಿ ಹಾಡುತ್ತಿದ್ದ ಹಾಡುಗಳು ಸೇರಿದಂತೆ ನೂರಾರು ಸಂಖ್ಯೆಯ ಒಗಟುಗಳು ಕೂಡ ಪ್ರಚಲಿತದಲ್ಲಿದ್ದವು. ಇವುಗಳನ್ನು ಸಂಗ್ರಹಿಸಿಡುವ ಕೆಲಸ ನಡೆಯುತ್ತಿದ್ದರೂ ಕೂಡ ಅದರ ವೇಗವನ್ನು ಮತ್ತಷ್ಟು ಹೆಚ್ಚಿಸುವ ಅಗತ್ಯವಿದೆ ಎಂದು ಸಮ್ಮೇಳನಾಧ್ಯಕ್ಷರು ತಿಳಿಸಿದರು.

ಭವಿಷ್ಯ ರೂಪಿಸಲಾರರು: ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡಿದ್ದ ಹಿರಿಯ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ಚಾರಿತ್ರಿಕ' ಅರಿವನ್ನು ಯಾವ ಜನಾಂಗ ಮರೆಯುತ್ತದೆಯೋ ಅಂತಹ ಜನಾಂಗಕ್ಕೆ ವರ್ತಮಾನದ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಲಾರದು. ಇವರಿಂದ ಭವಿಷ್ಯವನ್ನು ಕೂಡ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಬ್ಯಾರಿ ಸಮುದಾಯ ತನ್ನ ಭಾಷಾ ಸಂಸ್ಕೃತಿಯ ಮೂಲ ನೆಲೆಗಳನ್ನು ಕಂಡುಕೊಳ್ಳುವುದರೊಂದಿಗೆ ರಾಷ್ಟ್ರದ ಒಕ್ಕೂಟ ವ್ಯವಸ್ಥೆಯ ಒಳಗೆ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಂಡು ಹೋಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಮ್ಮೇಳನದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಚರ್ಚಾಗೋಷ್ಠಿ, ಬ್ಯಾರಿ ಭಾಷಿಕ ಕವಿಗಳಿಂದ ಕವಿಗೋಷ್ಠಿ, ಬ್ಯಾರಿ ಸಾಹಿತ್ಯ ಕ್ಷೇತ್ರದ ಸಾಧಕರಿಗೆ ಸನ್ಮಾನ, ಬ್ಯಾರಿ ಭಾಷೆಯ ಹಾಡುಗಾರಿಕೆ ಕಾರ್ಯಕ್ರಮಗಳು ನಡೆದವು. ಕೊಡಗು, ಹಾಸನ, ಮೈಸೂರು, ಸುಳ್ಯ, ಪುತ್ತೂರು, ಮಂಗಳೂರು, ಉಲ್ಲಾಳ ಮತ್ತಿತ್ತರ ಕಡೆಗಳ ಸಾಹಿತ್ಯಾಭಿಮಾನಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.


ಉತ್ತಮ ಸಮಾಜವನ್ನು ಕಟ್ಟಿ, ಒಡೆಯಬೇಡಿ

ಸಾಹಿತ್ಯ ಸಮ್ಮೇಳನ ಸಮಾರೋಪದಲ್ಲಿ ವಿಧಾನಸಭಾಧ್ಯಕ್ಷ ಖಾದರ್ ಸಲಹೆ

ಮಡಿಕೇರಿ, ಏ.28–ಉತ್ತಮ ಸಮಾಜವನ್ನು ಕಟ್ಟುವವರಾಗಿ, ಒಡೆಯುವವರಾಗದಿರಿ. ಸಾಮರಸ್ಯದ ಬದುಕನ್ನು ಕಂಡುಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗುವಂತೆ ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಕೊಡಗು ಬ್ಯಾರೀಸ್ ವೆಲ್‌ಫೇರ್ ಟ್ರಸ್ಟ್‌ನ ಸಹಯೋಗದಲ್ಲಿ ನಗರದ ಕಾವೇರಿ ಹಾಲ್‌ನಲ್ಲಿ ನಡೆದ ಜಿಲ್ಲಾ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಖಾಲಿ ಬಾಟಲಿ, ಎಸೆದ ಕಬ್ಬಿಣದ ಚೂರುಗಳನ್ನು ಆಯ್ದು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಬ್ಯಾರಿ ಸಮುದಾಯದ ಹಲವು ಮಂದಿ ನೀಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಣದೊಂದಿಗೆ ಮುನ್ನಡೆಯಿರಿ: ಹುಟ್ಟುತ್ತ ಬಡವನಾಗಿರುವಾತ, ಸಾಯುವಾಗಲು ಬಡವನಾಗಿರಬೇಕೆಂದಿಲ್ಲ. ಶಿಕ್ಷಣದ ಶಕ್ತಿಯನ್ನು ಬಳಸಿಕೊಳ್ಳುವ ಮೂಲಕ ಬದುಕನ್ನು ಹಸನಾಗಿಸಿಕೊಂಡು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯಿರಿ ಎಂದರು.



ಬ್ಯಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸಾಹಿತಿ ಬಿ.ಎ. ಷಂಶುದ್ದೀನ್‌ರನ್ನು ಸ್ವಾಗತ ಸಮಿತಿ ಅಭಿನಂದಿಸಿತು.

ಕೋಟಿ ರೂ. ನೆರವು : ಕೊಡಗಿನಲ್ಲಿ ಬ್ಯಾರಿ ಸಮುದಾಯ ಭವನಕ್ಕೆ ಜಾಗವನ್ನು ಗುರುತಿಸುವ ಕೆಲಸವಾಗಲಿ. ಭವನ ನಿರ್ಮಾಣಕ್ಕೆ ತನ್ನನ್ನು ಒಳಗೊಂಡಂತೆ ಜಿಲ್ಲೆಯ ಶಾಸಕದ್ವಯರ ನೆರವಿನೊಂದಿಗೆ ಕೋಟಿ ನೆರವನ್ನು ಒದಗಿಸುವ ಭರವಸೆ ನೀಡಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಭವನ ನಿರ್ಮಾಣಕ್ಕೆ ತಮ್ಮ ಅನುದಾನದಿಂದ 10ಲಕ್ಷ ರೂ. ನೆರವನ್ನು ಒದಗಿಸುವುದಾಗಿ ತಿಳಿಸಿದರು.

ಅಕಾಡೆಮಿ ಅಧ್ಯಕ್ಷ ಯು.ಹೆಚ್.ಉಮ್ಮರ್, ಹಿರಿಯ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ, ಟಿ.ಎಂ. ಶಾಹಿದ್ ತೆಕ್ಕಿಲ್, ಅಜ್ಜಿನಿಕಂಡ ಮಹೇಶ್ ನಾಚಯ್ಯ, ಕೇಶವ ಕಾಮತ್, ಅನಂತಶಯನ ಇದ್ದರು.

ತಮಿಳುನಾಡು ಆರ್ಮಿ ಕ್ರಿಕೆಟ್ ಕ್ಲಬ್ ಅಕಾಡೆಮಿ ಚಾಂಪಿಯನ್



ವಿರಾಜಪೇಟೆ, ಏ.28– ಪ್ರಗತಿ ಶೀಲ್ಡ್ ಅಂಡರ್–15 ವರ್ಷ ಒಳಗಿನ ವಿದ್ಯಾರ್ಥಿಗಳ ಸೀಸನ್ ಲೆದರ್‌ಬಾಲ್ ಕ್ರಿಕೆಟ್ ಫೈನಲ್ ಪಂದ್ಯಾಟದಲ್ಲಿ ಚಾಂಪಿಯನ್ ಪಟ್ಟವನ್ನು ತಮಿಳುನಾಡು ಆರ್ಮಿ ಕ್ರಿಕೇಟ್ ಕ್ಲಬ್ ಅಕಾಡೆಮಿ ಪಡೆದು ಕೊಂಡಿದೆ. ಮೈಸೂರು ಹೆರಿಟೇಜ್ ಕ್ರಿಕೇಟ್ ಅಕಾಡೆಮಿ ತಂಡ ದ್ವಿತೀಯ ಸ್ಥಾನ ಪಡೆದು ಕೊಂಡಿತು, ಕರ್ನಾಟಕ ಹಾಗೂ ತಮಿಳು ನಾಡು ಮತ್ತಿತರ ಪ್ರದೇಶಗಳಿಂದಲೂ ಭಾಗವಹಿಸಿದ್ದ ಕ್ರೀಡಾ ಪಟುಗಳು ಅಭಿಮಾನಿಗಳ ಗಮನ ಸೆಳೆದರು.

ಪಂದ್ಯಾಟದಲ್ಲಿ ವೈಯಕ್ತಿಕ ಪ್ರಶಸ್ತಿಗಳು ಮ್ಯಾನ್ ಆಫ್ ದ ಸೀರಿಸ್ ಗುರು ಪ್ರಥಲಾತನ್–ಆರ್ಮಿ ಕ್ರಿಕೆಟ್ ಅಕಾಡೆಮಿ ತಮಿಳುನಾಡು, ಬೆಸ್ಟ್ ಬ್ಯಾಟ್ಸ್‌ಮನ್ ಆಕಾಶ್–ಹೆರಿ ಟೇಜ್ ಕ್ರಿಕೆಟ್ ಅಕಾಡೆಮಿ ಮೈಸೂರು, ಬೆಸ್ಟ್ ಬೌಲರ್ ಕುವಂ ಆರ್. ಕೀರ್ತಿ–ಹೆರಿಟೇಜ್ ಕ್ರಿಕೆಟ್ ಅಕಾಡೆಮಿ ಮೈಸೂರು, ಬೆಸ್ಟ್ ಫೀಲ್ಡರ್ ಅಕಾಶ್–ಹೆರಿಟೇಜ್ ಕ್ರಿಕೆಟ್ ಅಕಾ ಡೆಮಿ ಮೈಸೂರು, ಫೈನಲ್ ಮ್ಯಾನ್ ಆಫ್ ದ ಮ್ಯಾಚ್ ಸುಜಿತ್ ಆರ್ಮಿ–ಕ್ರಿಕೆಟ್ ಅಕಾಡೆಮಿ ತಮಿಳುನಾಡು, ಲೆದರ್ ಬಾಲ್ ಕ್ರಿಕೆಟ್ ಪಂದ್ಯಾಟದಲ್ಲಿ ಮೈಸೂರು, ಉಡುಪಿ, ತಮಿಳುನಾಡು, ಮಧುರೈ, ತೆನ್ನಿ, ಕೊಡಗು ವಿದ್ಯಾಲಯ, ವಿರಾಜಪೇಟೆ ಪ್ರಗತಿ ವಿದ್ಯಾಸಂಸ್ಥೆಯ ಕ್ರಿಡಾ ಪಟುಗಳು ಭಾಗವಹಿಸಿದ್ದರು.

ಲೆದರ್ ಕ್ರಿಕೇಟ್ ಸಮಾರೋಪ ಸಮಾರಂಭದಲ್ಲಿ ಅಂತಾರಾಷ್ಟ್ರೀಯ ರಗ್ಬಿ ಮಾಜಿ ಆಟಗಾರ ಪ್ರಗತಿ ವಿದ್ಯಾಸಂಸ್ಥೆ ವ್ಯವಸ್ಥಾಪಕ ಮಾದಂಡ ತಿಮ್ಮಯ್ಯ ಮಾತನಾಡಿದರು

ಪ್ರಗತಿ ವಿದ್ಯಾಸಂಸ್ಥೆಯ ಸ್ಥಾಪಕ ಅಧ್ಯಕ್ಷ ಮಾದಂಡ ಎಸ್.ಪೂವಯ್ಯ ಮಾತನಾಡಿ, ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸುವುದರಿಂದ ತಮ್ಮ ಅರೋಗ್ಯ ಉತ್ತಮವಾಗಿರಲು ಸಾಧ್ಯವಾಗುತ್ತದೆ ಎಂದರು.

ಕ್ರಿಕೆಟ್ ತರಬೇತುದಾರರಾದ ಶಿವಶಕ್ತಿ, ಹಿರಿಯ ಕ್ರಿಕೆಟ್ ಆಟಗಾರ ಕಿರಣ್, ಟೆಕ್ನಿಕಲ್ ತಾಂತ್ರಿಕ ಮಿತುನ್ ಮತ್ತಿತರರು ಭಾಗವಹಿಸಿದ್ದರು.

ದಕ್ಷಿಣ ಭಾರತದ ಬಗ್ಗೆ ಕೇಂದ್ರದ ತಾರತಮ್ಯ ಧೋರಣೆ

ಮಡಿಕೇರಿ, ಏ.28–ಉತ್ತರ ಭಾರತದಲ್ಲಿ ತಾನು ಆವರಿಸಿಕೊಂಡಿರುವ ಸ್ಥಾನಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುವುದಕ್ಕಾಗಿ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇ.50 ರಷ್ಟು ಏರಿಕೆ ಮಾಡಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮುಂದಾಗಿದ್ದು, ದಕ್ಷಿಣ ಭಾರತದ ಬಗ್ಗೆ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಜನಸಂಖ್ಯಾ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಗೆ ಕೇಂದ್ರ ಮುಂದಾಗಿದೆ. ಉತ್ತರ ಭಾರತದಲ್ಲಿ ಶೇ.195ರಷ್ಟು ಜನಸಂಖ್ಯೆ ಏರಿಕೆಯಾಗಿದ್ದರೆ, ದಕ್ಷಿಣ ಭಾರತದಲ್ಲಿ ಶೇ.135ರಷ್ಟು ಮಾತ್ರ ಅಧಿಕವಾಗಿದೆ. ಜನಸಂಖ್ಯಾ ಆಧಾರದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಯಾದರೆ ಉತ್ತರ ಭಾರತದ ರಾಜ್ಯಗಳಲ್ಲಿ ಲೋಕಸಭಾ ಸ್ಥಾನಗಳು ಹೆಚ್ಚಾಗಿ ಬಿಜೆಪಿಗೆ ಲಾಭವಾಗಲಿದೆ ಎನ್ನುವ ದುರುದ್ದೇಶ ಕೇಂದ್ರದ ಮುಂದಿದೆ. ದಕ್ಷಿಣ ಭಾರತವನ್ನು ನಿರ್ಲಕ್ಷಿಸುವ ಮತ್ತು ತಾರತಮ್ಯ ಧೋರಣೆ ಹೊಂದಿರುವ ಮಸೂದೆಗಳನ್ನು ಕಾಂಗ್ರೆಸ್ ವಿರೋಧಿಸಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಯೋಜನೆ ತರಲಿ: ಸಂಸದರು ಎರಡೂ ಜಿಲ್ಲೆಗೆ ಕೇಂದ್ರ ಸರಕಾರದಿಂದ ಯಾವುದೇ ಯೋಜನೆಗಳನ್ನು ತರುತ್ತಿಲ್ಲ. ಅವರು ಎಲ್ಲಿದ್ದಾರೆ ಎಂದು ಜನ ಹುಡುಕಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನಾದರೂ ಸಂಸದರು ಎಚ್ಚೆತ್ತುಕೊಂಡು ಯೋಜನೆಗಳನ್ನು ತರಲಿ ಮತ್ತು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲಿ ಎಂದು ಒತ್ತಾಯಿಸಿದರು. ಜಿಲ್ಲೆಯ ಎರಡೂ ಕ್ಷೇತ್ರಗಳ ಕಾಂಗ್ರೆಸ್ ಶಾಸಕರು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದು, ದಾಖಲೆ ಮೊತ್ತದ ಅನುದಾನ ತಂದಿದ್ದಾರೆ ಎಂದು ಎಂ.ಲಕ್ಷ್ಮಣ್ ಮೆಚ್ಚುಗೆ ವ್ಯಕ್ತಪಡಿಸಿದರು.

ಹೆಚ್.ಎಂ.ನಂದ ಕುಮಾರ್, ಹೆಚ್.ಎ.ಹಂಸ, ಡಿಸಿಸಿ ಸದಸ್ಯ ಸಲೀಂ ಹ್ಯಾರಿಸ್, ಜಯೇಂದ್ರ ಉಪಸ್ಥಿತರಿದ್ದರು.

ಕಾಡಾನೆ ದಾಳಿ: ಗಬ್ಬದ ಹಸು ಸಾವು

ಸಿದ್ದಾಪುರ, ಏ.28–ನೆಲ್ಯಹುದಿಕೇರಿ ಗ್ರಾಮದ 4ನೇ ವಿಭಾಗದ ಶೇಖರ್ ಅವರ ಮನೆಯ ಸಮೀಪದ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಗಬ್ಬದ ಹಸುವನ್ನು ಕಾಡಾನೆ ತುಳಿದು ಕೊಂದ ಘಟನೆ ಸೋಮವಾರ ಮಧ್ಯರಾತ್ರಿ ನಡೆದಿದೆ.

ಇದರಿಂದ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮದ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ವಿಶೇಷವಾಗಿ ಕಾಫಿ ತೋಟಗಳಲ್ಲಿ ಅವುಗಳ ಸಂಚಾರ ಹೆಚ್ಚಾಗಿದೆ. ಇದರಿಂದ ತೋಟದ ಕಾರ್ಮಿಕರಲ್ಲಿ ಸುರಕ್ಷತೆ ಪ್ರಶ್ನಾರ್ಥಕವಾಗಿದ್ದು, ಕೆಲಸಕ್ಕೆ ಹೋಗಲು ಕಾರ್ಮಿಕರು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಘಟನೆಯ ಮಾಹಿತಿ ತಿಳಿದ ತಕ್ಷಣ



ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾಡಾನೆಗಳನ್ನು ತಕ್ಷಣ ಅರಣ್ಯ ಪ್ರದೇಶಕ್ಕೆ ಅಟ್ಟುವಂತೆ ಅರಣ್ಯ ಇಲಾಖೆಯು ಕ್ರಮ ಕೈಗೊಳ್ಳಬೇಕು. ಜೊತೆಗೆ, ನಷ್ಟಕ್ಕೊಳಗಾದ ರೈತ ಕುಟುಂಬಕ್ಕೆ ಪರಿಹಾರ ಒದಗಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮಂಡೇಪಂಡ ಬೋಸ್ ಮೊಣ್ಣಪ್ಪ 'ಕಾಯಕಯೋಗಿ' ಪ್ರಶಸ್ತಿಗೆ ಭಾಜನ

ಕುಶಾಲನಗರ, ಏ.28– ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ವತಿಯಿಂದ ಕೊಡಮಾಡುವ 'ಕಾಯಕಯೋಗಿ' ರಾಜ್ಯ ಮಟ್ಟದ ಪ್ರಶಸ್ತಿಗೆ ಕುಶಾಲನಗರದ ನಿವೃತ್ತ ಅರಣ್ಯ ಅಧಿಕಾರಿ ಹಾಗೂ ಸಮಾಜ ಸೇವಕ ಮಂಡೇ ಪಂಡ ಬೋಸ್ ಮೊಣ್ಣಪ್ಪ ಭಾಜನರಾಗಿದ್ದಾರೆ.



ಬೋಸ್ ಮೊಣ್ಣಪ್ಪ

ರಾಜ್ಯದ ಪ್ರತಿ ಜಿಲ್ಲೆಯಿಂದ ತಲಾ ಓರ್ವ ಸಾಧಕರನ್ನು 2026ನೇ ಸಾಲಿನ ಕಾಯಕಯೋಗಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಕೊಡಗಿನಿಂದ ಬೋಸ್ ಮೊಣ್ಣಪ್ಪ ಅವರನ್ನು ಗೌರವಿಸಲಾಗುತ್ತಿದೆ ಎಂದು ಪರಿಷತ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ಹುಲಿಕಲ್ ನಟರಾಜ್ ಮಾಹಿತಿ ನೀಡಿದ್ದಾರೆ.

ಮೇ 1ರಂದು ಬೆಂಗಳೂರಿನ ಹೊಸಕೋಟೆಯಲ್ಲಿ ನಡೆಯುವ ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪರಿಷತ್‌ನ ಕೊಡಗು ಜಿಲ್ಲಾ ಅಧ್ಯಕ್ಷರಾದ ವನಿತಾ ಚಂದ್ರಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆಯರು ಸ್ವಾವಲಂಬಿಗಳಾಗಲು ಸಂತೆಮೇಳ ಸಹಕಾರಿ

ನಾಪೋಕ್ಲು, ಏ.28– ಮಹಿಳೆಯರು ಸ್ವಾವಲಂಬಿಗಳಾಗಲು ಸಂತೆಮೇಳದಂತಹ ಕಾರ್ಯಕ್ರಮಗಳು ಪ್ರಯೋಜನಕಾರಿಯಾಗಿದೆ ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್ ಹೇಳಿದರು.

ಸ್ಥಳೀಯ ಮಹಿಳಾ ಸಮಾಜದಲ್ಲಿ ಸಂಜೀವಿನಿ ಒಕ್ಕೂಟ ಮತ್ತು ಗ್ರಾ. ಪಂ. ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಸಂತೆ ಮೇಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಹಿಳೆಯರು ಸಂಘ ಸಂಸ್ಥೆಗಳೊಂದಿಗೆ ತೊಡಗಿಸಿಕೊಂಡು ಸದೃಢರಾಗಬೇಕೆಂದು ಹೇಳಿದರು.

ಸಂಜೀವಿನಿ ಒಕ್ಕೂಟದ ಮುಖ್ಯ ಲೆಕ್ಕಪತ್ರ ನಿರ್ವಾಹಕಿ ಯಮುನ ವಾರ್ಷಿಕ ವರದಿ ಮಂಡಿಸಿದರು. ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಸುಲೋಚನಾ, ಪಂಚಾಯಿತಿ ಮಾಜಿ ಸದಸ್ಯ ಕಟ್ಟಿ, ಮೇಲ್ವಿಚಾರಕ ಕೃತಿಕಾರ ಹಾಲಿ ಒಕ್ಕೂಟದ ಅಧ್ಯಕ್ಷೆ ಶರೀಫ ಹಾಗೂ ಕಾರ್ಯದರ್ಶಿ ಮಂಜುಳಾ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ರೋಜಾ, ಕೃಷಿ ಸಖಿ ಗುಣ ಶ್ರೀ, ಪಶುಸಖಿ ಟಿ.ಪಿ. ನಿಶಾ, ರಾಜೇಶ್ವರಿ, ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಚಾ.ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ

ಬತ್ತಿದ ಬೋರ್‌ವೆಲ್, 12 ದಿನದಿಂದ ಬಾರದ ನೀರು, ಸ್ಪಂಧಿಸದ ನಗರಸಭೆ ಅಧಿಕಾರಿಗಳು

ಜಿಲ್ಲಾಧಿಕಾರಿಗಳಿಗೆ 26ನೇ ವಾರ್ಡಿನ ನಿವಾಸಿಗಳ ದೂರು

ಚಾಮರಾಜನಗರ: ನಗರಸಭೆಯ 26ನೇ ವಾರ್ಡ್‌ನಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಸಮರ್ಪಕ ನೀರು ಪೂರೈಕೆಗೆ ಆಗ್ರಹಿಸಿ ವಾರ್ಡ್ ನಿವಾಸಿಗಳು ಜಿಲ್ಲಾಧಿಕಾರಿ ಶ್ರೀರೂಪಾ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಕೇಂದ್ರದಲ್ಲಿ ಕುಡಿಯುವ ನೀರಿಗೆ ಹಾಹಾಕಾರವಿದೆ. ತಿ. ನರಸೀಪುರದಿಂದ ನಗರಕ್ಕೆ ಕಾವೇರಿ ನೀರು ಪೂರೈಸಲಾಗುತ್ತಿದ್ದು, ಐದು ದೊಡ್ಡ ಟ್ಯಾಂಕ್‌ಗಳಿಗೆ ಸಾಕಾಗುವಷ್ಟು ನೀರು ದೊರಕುತ್ತಿಲ್ಲ. ಇದರಿಂದಾಗಿ ಒಂದೊಂದು ಪ್ರದೇಶಕ್ಕೂ 10–12 ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಬೋರ್‌ವೆಲ್‌ಗಳಲ್ಲೂ ನೀರು ಬತ್ತಿದೆ. ಹೀಗಾಗಿ ಸಾರ್ವಜನಿಕರು ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಜಿಲ್ಲಾಧಿಕಾರಿಗಾಗಿ ಕಾದು ಕುಳಿತಿರುವ ನಿವಾಸಿಗಳು.

26ನೇ ವಾರ್ಡ್ ನಿವಾಸಿಗಳು, ನಗರಸಭೆ ಮಾಜಿ ಸದಸ್ಯೆ ಕುಮುದಾ ಕೇಶವ ಮೂರ್ತಿ ಅವರ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾಧಿಕಾರಿಯವರನ್ನು ಭೇಟಿಯಾದರು. ಜಿಲ್ಲಾಧಿಕಾರಿಯವರು ನಗರಸಭೆ ಆಯುಕ್ತರು ಮತ್ತಿತರ ಅಧಿಕಾರಿಗಳನ್ನು ಕರೆಸಿದ್ದರು.

ನಿವಾಸಿಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ನಮ್ಮ ಏರಿಯಾಕ್ಕೆ ನೀರು ಪೂರೈಕೆಯಾಗಿ 12 ದಿನಗಳಾಗಿವೆ. ಅನೇಕರ ಮನೆಗಳಲ್ಲಿ ಬೋರ್‌ವೆಲ್ ಇದ್ದು, ಅವುಗಳಲ್ಲೂ ಈಗ ನೀರು ಬರುತ್ತಿಲ್ಲ. ಹೀಗಾಗಿ ನಮ್ಮ ವಾರ್ಡ್‌ನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ ಎಂದು ನಗರಸಭೆ ಮಾಜಿ ಸದಸ್ಯೆ ಕುಮುದಾ ದೂರಿದರು.

ಪ್ರತಿನಿತ್ಯ ಜನರು ಕುಡಿಯುವ ನೀರಿಗಾಗಿ ನನಗೆ ಕರೆ ಮಾಡುತ್ತಿರುತ್ತಾರೆ. ನಾನು ನೀರು ಬಿಡುವ ಬಗ್ಗೆ ನಗರಸಭೆ ಆಯುಕ್ತರಿಗೆ ಅಧಿಕಾರಿಗಳಿಗೆ ಕರೆ ಮಾಡಿದರೆ ಕರೆ ಸ್ವೀಕರಿಸುವುದಿಲ್ಲ ಎಂದು ದೂರಿದರು.

ಮುಖಂಡ ಹಾಗೂ 26ನೇ ವಾರ್ಡ್ ನಿವಾಸಿ ಬಿ.ಕೆ.ರವಿಕುಮಾರ್ ಮಾತನಾಡಿ, ಹಿಂದೆ ಇದ್ದ ಕೊಳವೆ ಮಾರ್ಗದಲ್ಲಿ ಹೇಗೋ ಕುಡಿಯುವ ನೀರು ಸರಬರಾಜು ಆಗುತ್ತಿತ್ತು. ಅಮೃತ್ ಯೋಜನೆಗೆ ಸೇರಿಸಿ ಹೊಸ ಪೈಪ್‌ಲೈನ್ ಹಾಕಿ ನೀರು ಸರಬರಾಜು ಮಾಡುತ್ತಿರುವುದರಿಂದ ನೀರಿಗೆ ಸಮಸ್ಯೆ ಆಗುತ್ತಿದೆ ಎಂದರು.

15 ದಿನಕ್ಕೊಮ್ಮೆ ನೀರು ಬಿಡುತ್ತಾರೆ. ಆ ನೀರು 10 ನಿಮಿಷ ಕೂಡ ಬರಲ್ಲ. ಮೂರು ಬಿಂದಿಗೆನೂ ಬರಲ್ಲ. ಇಲ್ಲಿರುವ ಅನೇಕ ಮಹಿಳೆಯರು ನೀರಿಗಾಗಿ ಎಂದೂ ಡಿಸಿ ಕಚೇರಿ ಮೆಟ್ಟಿಲು ಹತ್ತಿದವರಲ್ಲ. ಅವರೆಲ್ಲ ಈಗ ಇಲ್ಲಿಗೆ ಬಂದಿದ್ದಾರೆ ಎಂದರೆ ಸಮಸ್ಯೆ ಎಷ್ಟು ತೀವ್ರವಾಗಿದೆ ಎಂಬುದು ಅರ್ಥ ಮಾಡಿಕೊಳ್ಳಿ ಎಂದರು.

ಮುಖಂಡ ಮೂಡ್ಲುಪುರ ನಂದೀಶ್ ಮಾತನಾಡಿ, ನಗರದ ಜನತೆಗೆ ಕುಡಿಯುವ ನೀರು ಸಹ ಕೊಡಲಾಗದ ನಗರಸಭೆಯಿಂದ ಏನು ಪ್ರಯೋಜನ ನಗರಸಭೆ ಸತ್ತು ಹೋಗಿದೆ ಎಂದು ಕಿಡಿಕಾರಿದರು.

ಇದಕ್ಕೆ ಸಾರ್ವಜನಿಕರೂ ದನಿಗೂಡಿಸಿ ತೀವ್ರ ನೀರಿನ ಸಮಸ್ಯೆಯಿದೆ. ನಗರಸಭೆಯನ್ನು ಕೇಳಿದರೆ, ನೀರು ಸರಬರಾಜು ಮಂಡಳಿಯವರನ್ನು ಕೇಳಿ ಎನ್ನುತ್ತಾರೆ. ನೀರು ಸರಬರಾಜು ಮಂಡಳಿಯವರನ್ನು ಕೇಳಿದರೆ ನಗರಸಭೆಯವರನ್ನು ಕೇಳಿ ಎನ್ನುತ್ತಾರೆ. ನಾವು ಎಲ್ಲಿ ಹೋಗುವುದು ಎಂದು ಜಿಲ್ಲಾಧಿಕಾರಿಯವರನ್ನು ಪ್ರಶ್ನಿಸಿದರು.

ಜಿಲ್ಲಾಧಿಕಾರಿಯವರು ಈ ಬಗ್ಗೆ ನಗರಸಭೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ಎಇಇ ಅವರು, ಎರಡು ಮೂರು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ ಮೇಡಂ ಎಂದು ಉತ್ತರಿಸಿದರು. ತಮ್ಮ ಎದುರೇ ಆಯುಕ್ತರು ತಪ್ಪು ಮಾಹಿತಿ ನೀಡಿದ್ದನ್ನು ಕಂಡ ಸಾರ್ವಜನಿಕರು ಕೆಂಡಾಮಂಡಲವಾದರು.

ಎಲ್ಲಿ ಎರಡು ಮೂರು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದೆ. ಸುಳ್ಳು ಹೇಳುತ್ತಿದ್ದೀರಿ. ನಮ್ಮ ಮನೆಗೆ ನೀರು ಬಂದು 12 ದಿನವಾಯ್ತು. ಪ್ರತಿ 10–15 ದಿನಕ್ಕೊಮ್ಮೆ ನೀರು ಬರುತ್ತದೆ. ಅದು ಸಹ ಸಾಕಾಗುವುದಿಲ್ಲ. ಜಿಲ್ಲಾಧಿಕಾರಿಯವರಿಗೆ ಈ ರೀತಿ ತಪ್ಪು ಮಾಹಿತಿ ಕೊಡಬೇಡಿ ಎಂದು ನಿವಾಸಿಗಳು ತರಾಟೆಗೆ ತೆಗೆದುಕೊಂಡರು.

ಜಿಲ್ಲಾಧಿಕಾರಿ ಶ್ರೀರೂಪಾ ಮಾತನಾಡಿ, ಕುಡಿಯುವ ನೀರು ಸರಬರಾಜು ಮಾರ್ಗಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಅಮೃತ್ ಅಧಿಕಾರಿಗಳನ್ನು ಕರೆಸಿ ಸಭೆ ನಡೆಸಲಾಗುವುದು. ನೀರಿನ ಸಮಸ್ಯೆ ಇರುವ ಮನೆಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುವುದು. ಮಾಲಂಗಿಯಿಂದ ಕಾವೇರಿ ನೀರು ಪೂರೈಸುವ ಕಾಮಗಾರಿ ಟೆಂಡರ್ ಆಗಿದೆ. ಆ ಯೋಜನೆ ಪೂರ್ಣಗೊಂಡರೆ ನಗರದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಲಿದೆ ಎಂದು ಹೇಳಿದರು.

ಹೆಬ್ಬಸೂರಿನಲ್ಲಿ ಶಾರದಾ ದೇವಿಯ ರಥೋತ್ಸವ



ಚಾಮರಾಜನಗರ: ತಾಲೂಕಿನ ಚಂದಕವಾಡಿ ಸಮೀಪದ ಹೆಬ್ಬಸೂರು ಗ್ರಾಮದ ಶೃಂಗೇರಿ ಶಾರದಾ ಪೀಠದಲ್ಲಿ ಶಾರದಾ ದೇವಿಯ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ಕಳೆದ ಎರಡ್ಮೂರು ದಿನಗಳಿಂದ ಶಾರದಾ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಉತ್ಸವದ ಪ್ರಯುಕ್ತ ಶಾರದಾ ದೇವಿಗೆ ವಿಶೇಷ ಪೂಜೆ, ಮುಂಜಾನೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತಾಭಿಷೇಕ ಮತ್ತು ಸಹಸ್ರನಾಮ ಅರ್ಚನೆಗಳು ನೆರವೇರಿಸಲಾಯಿತು.

ಮಠದ ಆವರಣದಲ್ಲಿ ಗಣಪತಿ ಹೋಮ, ನವಗ್ರಹ ಹೋಮ ಹಾಗೂ ಚಂಡಿಕಾ ಯಾಗ, ಶಾರದಾ ಹೋಮಗಳನ್ನು ಲೋಕ ಕಲ್ಯಾಣಾರ್ಥವಾಗಿ ನೆರವೇರಿಸಲಾಯಿತು. ರಥೋತ್ಸವದಂದು ಹೂವುಗಳು ಮತ್ತು ತೋರಣಗಳಿಂದ ಅಲಂಕರಿಸಿದ ರಥವನ್ನು ಗ್ರಾಮಸ್ಥರು ಹಾಗೂ ವಿಪ್ರ ಬಾಂಧವರು ಸೇರಿ ಭಕ್ತಿ ಭಾವದಿಂದ ಎಳೆದರು.

ಈ ವೇಳೆ ವಿಪ್ರ ಮಹಿಳೆಯರು ಮತ್ತು ಭಕ್ತರು ಭಕ್ತಿಗೀತೆಗಳು ಹಾಗೂ ಅಷ್ಟೋತ್ತರ ಭಜನೆಗಳನ್ನು ಹಾಡಿ ಭಕ್ತಿರಸ ತುಂಬಿದರು. ಶಾರದಾ ದೇವಿಯ ರಥೋತ್ಸವವು ಹೆಬ್ಬಸೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಅಕ್ಕಪಕ್ಕದ ಗ್ರಾಮಗಳಿಂದ ಬಂದ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಳಿಕ ದೇವಿಗೆ ಮಹಾ ಮಂಗಳಾರತಿ ನೆರವೇರಿಸಿ, ಭಕ್ತರಿಗೆ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಯಿತು.

ಬಿಜೆಪಿ ಕಾರ್ಯಕರ್ತರ ಮೇಲೆ ಸುಖಾಸುಮ್ಮನೆ ಪ್ರಕರಣ ದಾಖಲು

ಚಾ.ನಗರದಲ್ಲಿ ಗುಂಡ್ಲುಪೇಟೆ ಶಾಸಕರ ವಿರುದ್ಧ ಬಿಜೆಪಿ ಪ್ರತಿಭಟನೆ

ಚಾಮರಾಜನಗರ: ಗುಂಡ್ಲುಪೇಟೆಯಲ್ಲಿ ಶಾಸಕ ಎಚ್.ಎಂ.ಗಣೇಶಪ್ರಸಾದ್ ಅಣತಿಯಂತೆ ಪೊಲೀಸರು ಕೆಲಸ ಮಾಡುತ್ತಿದ್ದು, ಬಿಜೆಪಿ ಯುವ ಮೋರ್ಚಾದ ಕಾರ್ಯಕರ್ತರ ಮೇಲೆ ಸುಖಾಸುಮ್ಮನೆ ಪ್ರಕರಣ ದಾಖಲು ಮಾಡುತ್ತಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾದಿಂದ ಪ್ರತಿಭಟನೆ ನಡೆಸಲಾಯಿತು.



ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ, ಶಾಸಕ ಎಚ್.ಎಂ. ಗಣೇಶ ಪ್ರಸಾದ್ ಹಾಗೂ ಗುಂಡ್ಲುಪೇಟೆ ಪೊಲೀ ಸರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ ಮಾತನಾಡಿ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಟಿಪ್ಪರ್ ಹಾವಳಿ ಹೆಚ್ಚಾಗಿದ್ದು, ಅದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಅನೇಕ ಅಪಘಾತಗಳು ಸಂಭವಿಸಿ ಅನೇಕರು ಜೀವ ಕಳೆದುಕೊಂಡಿದ್ದಾರೆ. ಅಪಘಾತಕ್ಕೆ ಸಂಬಂಧಿಸಿದಂತೆ ಹೋರಾಟ ಮಾಡಿದ ಬಿಜೆಪಿ ಯುವ ಮೋರ್ಚಾದ ಕಾರ್ಯಕರ್ತರನ್ನು ಅನಾವಶ್ಯಕವಾಗಿ ಶಾಸಕರ ಅಣತಿಯಂತೆ ಪೊಲೀಸ್ ಇಲಾಖೆ ದೂರು ದಾಖಲು ಮಾಡುವ ಮುಖಾಂತರ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ ಎಂದು ದೂರಿದರು.

ನಂತರ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಸೂರ್ಯ ಕುಮಾರ್ ಮಾತನಾಡಿ, ಶಾಸಕ ಗಣೇಶಪ್ರಸಾದ್ ಅವರ ಅಣತಿಯಂತೆ ಗುಂಡ್ಲುಪೇಟೆ ಪೊಲೀಸರು ಬಿಜೆಪಿ ಯುವ ಮೋರ್ಚಾದ ಕಾರ್ಯಕರ್ತರನ್ನು ಗುರಿಯಾಗಿಸುತ್ತಿರುವುದು ಅತ್ಯಂತ ಖಂಡನೀಯ ವಾದದ್ದು ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ ಭಗೀರಥ, ಶಿವರಾಜ್, ನಟರಾಜು, ಕೂಸಣ್ಣ, ಹೊಂಗನೂರು ಮಹದೇವಸ್ವಾಮಿ, ಮೂಡಹಳ್ಳಿ ಮೂರ್ತಿ, ಮನೋಜ್ ಪಟೇಲ್, ಮರಿಯಾಲ ಮಹೇಶ್, ಕಿಲಗೆರೆಶಶಿ, ಪ್ರವೀಣ್ ನಾಯಕ, ಕುಮಾರ್, ಮಧು, ಸೋಮುವಾರಪೇಟೆ ಗುರುಪ್ರಸಾದ್, ವೀರೇಂದ್ರ, ವೇಣುಗೋಪಾಲ, ಕಾಡಹಳ್ಳಿ ಕುಮಾರ್, ಭೋಗಾಪುರ ಕುಮಾರ್, ಮಣಿನಾಯಕ, ಅಶ್ವಿನ್, ಮಂಜು, ಇತರರು ಭಾಗವಹಿಸಿದ್ದರು.

ಬಿಜೆಪಿ, ಮೋದಿ ನಿಜವಾದ ಮಹಿಳಾ ಮೀಸಲಾತಿ ವಿರೋಧಿ

ಚಾಮರಾಜನಗರ, ಏ.28–ಬಿಜೆಪಿ ನಿಜವಾದ ಮಹಿಳಾ ಮೀಸಲಾತಿ ವಿರೋಧಿ ಎಂದು ಗ್ಯಾರಂಟಿ ಯೋಜನೆಗಳ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ದೇಶಕ್ಕಾಗಿ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್, ಸ್ವಾತಂತ್ರ್ಯ ಪೂರ್ವದಿಂದಲ್ಲೂ ಮಹಿಳೆಯರ ಪರವಾಗಿದ್ದು ಮಹಿಳಾ ಮೀಸಲಾತಿ ಪರವಾಗಿದೆ ಹೊರತು ವಿರೋಧ ಮಾಡುತ್ತಿಲ್ಲ. ಕೂಡಲೇ ಮಹಿಳಾ ಮೀಸಲಾತಿ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿಯಲ್ಲ. ಆದರೆ, ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿ ಎಂದು ಬಿಜೆಪಿ ಬಿಂಬಿಸುತ್ತಿದೆ. 2023ರಲ್ಲೇ ನಾರಿ ವಂದನ್ ಮಹಿಳಾ ಮೀಸಲಾತಿ ಜಾರಿಯಾ ಗಿರುವ ಕುರಿತು ಪ್ರಧಾನಿ ಮೋದಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 2026ರಲ್ಲಿ ಮತ್ತೊಮ್ಮೆ ಈ ಕಾಯ್ದೆಯನ್ನು ಜಾರಿಗೊಳಿಸಲು ಹೊರಟಿರುವ ಉದ್ದೇಶವೇನು ಎಂದು ಪ್ರಶ್ನಿಸಿದರು.

ಗುಂಡ್ಲುಪೇಟೆ ಕೃಷಿ ಪತ್ತಿನ ಸಹಕಾರ ಸಂಘ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ರಮೇಶ್, ಉಪಾಧ್ಯಕ್ಷರಾಗಿ ಹೊನ್ನಪ್ಪ ಅವಿರೋಧ ಆಯ್ಕೆ

ಗುಂಡ್ಲುಪೇಟೆ, ಏ.28– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ರಮೇಶ್ ಮತ್ತು ಉಪಾಧ್ಯಕ್ಷರಾಗಿ ಹೊನ್ನಪ್ಪ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬೊಬ್ಬರೇ ನಾಮ ಪತ್ರ ಸಲ್ಲಿಸಿದ ಹಿನ್ನೆಲೆ ಚುನಾ ವಣಾಧಿಕಾರಿಯಾದ ನಾಗೇಶ್ ಅಧ್ಯಕ್ಷರಾಗಿ ರಮೇಶ್ ಮತ್ತು ಉಪಾಧ್ಯಕ್ಷರಾಗಿ ಹೊನ್ನಪ್ಪ ಇಬ್ಬರ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು. ವಾರದ ಹಿಂದೆ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾ ವಣೆಯಲ್ಲಿ 12ಕ್ಕೆ 12ಮಂದಿಯೂ ಕೂಡ ಕಾಂಗ್ರೆಸ್ ಬೆಂಬಲಿತರು ಚುನಾಯಿತರಾಗಿದ್ದರು.

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಘೋಷಣೆಯಾಗುತ್ತಿದ್ದಂತೆ ಕಾಂಗ್ರೆಸ್ ಬೆಂಬಲಿತರು, ಮುಖಂಡರು ಬೃಹತ್ ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಈ ವೇಳೆ ನೂತನ ಅಧ್ಯಕ್ಷ ರಮೇಶ್ ಮಾತನಾಡಿ, ಶಾಸಕ ಎಚ್.ಎಂ.ಗಣೇಶ ಪ್ರಸಾದ್ ಮಾರ್ಗದರ್ಶನ ನಿರ್ದೇಶಕರ ಮತ್ತು ಷೇರುದಾರರ ಸಲಹೆಯಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುವುದು. ಬೆರಳೆಣಿಕೆಯಷ್ಟು ಷೇರುದಾರರಿಂದ ಆರಂಭವಾದ ಸಂಘ ಇಂದು ಸುಮಾರು 50–60 ಕೋಟಿ ವಹಿವಾಟು ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ವಹಿವಾಟು ನಡೆಸುವಲ್ಲಿ ಎಲ್ಲರ ಸಹಕಾರದೊಂದಿಗೆ ದುಡಿಯುತ್ತೇನೆ. ಇದಕ್ಕೆ ಸಂಘದ ನಿರ್ದೇಶಕರು, ಷೇರುದಾರರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಮೇಶ್ ಮತ್ತು ಉಪಾಧ್ಯಕ್ಷ ಹೊನ್ನಪ್ಪ ಅವರನ್ನು ಶಾಸಕ ಎಚ್.ಎಂ.ಗಣೇಶಪ್ರಸಾದ್ ಅಭಿನಂದಿಸಿದರು.

ಶಾಸಕರಿಂದ ನೂತನ ಅಧ್ಯಕ್ಷ–ಉಪಾಧ್ಯಕ್ಷರಿಗೆ ಸನ್ಮಾನ: ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ರಮೇಶ್, ಉಪಾಧ್ಯಕ್ಷ ಹೊನ್ನಪ್ಪ ಹಾಗೂ ಎಲ್ಲಾ ನಿರ್ದೇಶಕರನ್ನು ಶಾಸಕ ಎಚ್.ಎಂ.ಗಣೇಶಪ್ರಸಾದ್ ಹೂವಿನ ಹಾರ ಹಾಕಿ ಸನ್ಮಾನಿಸಿದರು.

ಈ ವೇಳೆ ಟೌನ್ ಪಿಎಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೊನ್ನಪ್ಪ, ನಿರ್ದೇಶಕರಾದ ಶಿವಣ್ಣ, ಭಾಗ್ಯಮ್ಮ, ಶಿವನಾಗಪ್ಪ, ರಾಧಮಣಿ, ವೆಂಕಟೇಶ್, ಚಿಕ್ಕಣ್ಣ, ಮಧು, ಮಂಜುನಾಥ್, ಚಂದ್ರಶೇಖರ್, ಪುರಸಭಾ ಮಾಜಿ ಅಧ್ಯಕ್ಷ ಮಧುಸೂದನ್, ಶಶಿಧರ್ ದೀಪು, ಅಣ್ಣಯ್ಯಸ್ವಾಮಿ, ಜಿ.ಕೆ.ಎನ್.ವಿಶ್ವ ಇದ್ದರು.

ಲಲಿತಾದ್ರಿಪುರದಲ್ಲಿ 'ನಾಡಪ್ರಭು ಕೆಂಪೇಗೌಡರ ಪ್ರತಿಮೆ' ಅನಾವರಣ

ಕೆಂಪೇಗೌಡರ ಆದರ್ಶದಡಿ ನಾವು ಸಾಗಬೇಕಿದೆ: ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅಭಿಮತ

ಮೈಸೂರು, ಏ.28(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಲಲಿತಾದ್ರಿಪುರ ಗ್ರಾಮದಲ್ಲಿ ಶ್ರೀ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ನಾಡಪ್ರಭು ಕೆಂಪೇಗೌಡರ ಪ್ರತಿಮೆ'ಯನ್ನು ಮಂಗಳವಾರ ಅನಾವರಣಗೊಳಿಸಲಾಯಿತು.

ಗ್ರಾಮದ ಒಕ್ಕಲಿಗರ ಬೀದಿಯಲ್ಲಿ ನಿರ್ಮಾಣ ಹಂತದಲ್ಲಿರುವ ಒಕ್ಕಲಿಗರ ಸಮುದಾಯ ಭವನದ ಆವರಣದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಆದಿಚುಂಚನಗಿರಿ ಮಹಾಕ್ಷೇತ್ರದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯದೊಂದಿಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಫಲವಾಗಿ ಬೆಂಗಳೂರು ನಗರ ನಿರ್ಮಾಣವಾಗಿದ್ದು, ಅಂದಿನ ಕಾಲಘಟ್ಟದಲ್ಲಿ ಕೆರೆ–ಕಟ್ಟೆಗಳನ್ನು ಕಟ್ಟುವ ಮೂಲಕ ನೀರಿನ ಸಂರಕ್ಷಣೆಗೆ ಮುನ್ನುಡಿ ಬರೆದರು. ಕೆಂಪೇಗೌಡರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯಡಿ ನಾವೆಲ್ಲರೂ ಸಾಗಬೇಕಿದೆ ಎಂದರು.

ಸೇವಾ ಮನೋಭಾವನೆ ಇರಬೇಕು: ಅಧಿಕಾರ ಯಾರಿಗೂ ಶಾಶ್ವತವಲ್ಲ. ಆಯಾ ಕಾಲ ಘಟ್ಟಕ್ಕೆ ತಕ್ಕಂತೆ ಅಧಿಕಾರ ಬದಲಾಗುತ್ತದೆ. ಕೇವಲ ಅಧಿಕಾರಕ್ಕೋಸ್ಕರ ರಾಜಕಾರಣಕ್ಕೆ ಬರಬಾರದು. ಸೇವಾ ಮನೋಭಾವನೆ ಇರಬೇಕು. ಈ ನಿಟ್ಟಿನಲ್ಲಿ ಜನರು ನನ್ನ ಮೇಲೆ ತೋರಿಸುತ್ತಿರುವ ಪ್ರೀತಿಗೆ ನಾನು ಚಿರಋಣಿಯಾಗಿರುತ್ತೇನೆ. ಲಲಿತಾದ್ರಿಪುರದಲ್ಲಿ ನೆನೆಗುದಿಗೆ ಬಿದ್ದಿರುವ ಒಕ್ಕಲಿಗರ ಸಮುದಾಯ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಕಾರ ನೀಡುವುದಾಗಿಯೂ ಭರವಸೆ ನೀಡಿದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಕೆಂಪೇಗೌಡರು ಇಡೀ ರಾಜ್ಯಕ್ಕೆ ಮಾದರಿ. ಬೆಂಗಳೂರಿನಂತಹ ಬೃಹತ್ ನಗರವನ್ನು ಕಟ್ಟಿದ್ದಾರೆ. ಕೆಂಪೇಗೌಡರ ನಂತರ ಹೆಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ಹಾಗೂ ಹೆಚ್.ಡಿ.ಕುಮಾರಸ್ವಾಮಿಯವರು ತಮ್ಮದೆ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರಲ್ಲದೆ ಲಲಿತಾದ್ರಿಪುರ ಗ್ರಾಮಸ್ಥರೆಲ್ಲರೂ ಸೇರಿಕೊಂಡು ಯಾರ ಬಳಿಯೂ ಹಣ ಕೇಳದೇ ತಾವೇ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಸ್ಥಾಪಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಲಲಿತಾದ್ರಿಪುರ ಗ್ರಾಮವಿದೆ. ಮುಂದಿನ ದಿನಗಳಲ್ಲಿ ಕೆಂಪೇಗೌಡರ ಶಕ್ತಿ ಕುಮಾರಣ್ಣನಿಗೆ, ನಿಖಿಲ್ ಅವರಿಗೆ ಧಕ್ಕಲಿ. ಈ ನಾಡಿನ ಅಧಿಕಾರ ಹಿಡಿಯಲು ತಾಯಿ ಚಾಮುಂಡೇಶ್ವರಿ ಆಶೀರ್ವಾದ ಮಾಡಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಹಾಗೆಯೇ ಮುಂದಿನ ದಿನಗಳಲ್ಲಿ ಲಲಿತಾದ್ರಿಪುರದಲ್ಲಿ ಸಮುದಾಯ ಭವನ ನಿರ್ಮಾಣ ಮಾಡುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಅಶ್ವಿನ್‌ಕುಮಾರ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಕೆ.ವಿ.ಶ್ರೀಧರ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಮದನ್ ಮಹದೇಶ್, ಲಲಿತಾದ್ರಿಪುರ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ನಾಗೇಂದ್ರ, ಅಧ್ಯಕ್ಷ ಮಹದೇವ್, ಉಪಾಧ್ಯಕ್ಷ ಕುಮಾರ್, ಕಾರ್ಯದರ್ಶಿ ಅನಿಲ್, ಸಂಘಟನಾ ಕಾರ್ಯದರ್ಶಿ ಚೇತನ್ ಮತ್ತಿತರರು ಉಪಸ್ಥಿತರಿದ್ದರು.





ಮೈಸೂರಿನ ಲಲಿತಾದ್ರಿಪುರ ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ 'ನಾಡಪ್ರಭು ಕೆಂಪೇಗೌಡರ ಪ್ರತಿಮೆ'ಯನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅನಾವರಣಗೊಳಿಸಿದರು. ಈ ವೇಳೆ ಆದಿಚುಂಚನಗಿರಿ ಮಹಾಕ್ಷೇತ್ರದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಡಿ.ಹರೀಶ್‌ಗೌಡ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಅಶ್ವಿನ್‌ಕುಮಾರ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಮತ್ತಿತರರಿದ್ದರು.

ಹೆಚ್.ಡಿ.ದೇವೇಗೌಡರು ನನಗೆ ಮಾದರಿ...!

"ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ರಾಜ್ಯದ ಪ್ರತಿ ಗ್ರಾಮದಲ್ಲೂ ಸ್ಥಾಪನೆ ಮಾಡಬೇಕು ಎಂಬುದು ನನ್ನ ಆಸೆಯಾಗಿದೆ. ಒಕ್ಕಲಿಗ ಸಮುದಾಯದ ನಾಡಪ್ರಭು ಕೆಂಪೇಗೌಡರು, ರಾಷ್ಟ್ರಕವಿ ಕುವೆಂಪು ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಹತ್ವದ ಕೊಡುಗೆ ನೀಡಿದ್ದು, ಅವರನ್ನು ನಾನು ಸದಾ ಮಾದರಿಯಾಗಿ ಇಟ್ಟುಕೊಂಡಿದ್ದೇನೆ.

–ಕೆ.ಹರೀಶ್ ಗೌಡ, ಶಾಸಕರು, ಚಾಮರಾಜ ಕ್ಷೇತ್ರ

ಮನುಕುಲದ ಉದ್ಧಾರಕ ನಾಡಪ್ರಭು ಕೆಂಪೇಗೌಡರು...

"ನಾಡಪ್ರಭು ಕೆಂಪೇಗೌಡರು ಒಕ್ಕಲಿಗ ಸಮುದಾಯದಲ್ಲಿ ಹುಟ್ಟಿದ್ದರೂ ಅವರು, ಆಡಳಿತ ನಡೆಸುವಾಗ ಎಲ್ಲಾ ಜನಾಂಗದವರನ್ನು ಒಟ್ಟಿಗೆ ಸೇರಿಸಿಕೊಂಡು ಬೆಂಗಳೂರು ನಗರ ಕಟ್ಟಿದ್ದಾರೆ. ಪುಸ್ತಕದ ಜ್ಞಾನದ ಜೊತೆಗೆ ಕೌಶಲ್ಯ ಮುಖ್ಯ ಎಂಬ ಪರಿಕಲ್ಪನೆಯೊಂದಿಗೆ ಬೆಂಗಳೂರಿನಾದ್ಯಂತ 64 ಪೇಟೆಗಳನ್ನು ನಿರ್ಮಿಸಿದ್ದಾರೆ. ಅವರ ಆಳ್ವಿಕೆಯ ಕಾಲದಲ್ಲಿ ದೇಶದ ಜಿಡಿಪಿ ಜಗತ್ತಿನ 190 ದೇಶಗಳ ಪೈಕಿ ಶೇ.25ರಷ್ಟು ಭಾರತದ ಕೊಡುಗೆಯಾಗಿತ್ತು. ಮುತ್ತು–ರತ್ನಗಳನ್ನು ರಸ್ತೆ ಬದಿ ಮಾರಾಟ ಮಾಡಲಾಗುತ್ತಿತ್ತು. ಹಾಗಾಗಿ ಕೆಂಪೇಗೌಡರು ಒಕ್ಕಲಿಗ ಸಮುದಾಯಕ್ಕೆ ಸೀಮಿತವಾಗದೆ ಇಡೀ ಮನುಕುಲದ ಉದ್ಧಾರಕರಾಗಿದ್ದಾರೆ. **–ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಆದಿಚುಂಚನಗಿರಿ ಮಹಾಕ್ಷೇತ್ರ**

ಅಭಿನಂದನೆ...



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡರ ನಿವಾಸಕ್ಕೆ ಭೇಟಿ ನೀಡಿದ ನಿಖಿಲ್ ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಸೂರು ಜೆಡಿಎಸ್‌ನ ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಯುವ ಜೆಡಿಎಸ್ ನಗರ ಅಧ್ಯಕ್ಷ ಮದನ್ ಮಾದೇಶ್, ಪ್ರಸನ್ನಕುಮಾರ್, ಗೆಜ್ಜಗಳ್ಳಿ ಲೋಕೇಶ್, ಕಾರ್ಪೊರೇಟರ್ ಸುರೇಶ್, ಬೋಗಾದಿ ಚಂದ್ರಶೇಖರ್, ಬಾಬು ಕುಪ್ಪೇಗಾಲ, ಶ್ರೀರಾಂಪುರ ಮರಿಗೌಡ, ಅಜಯ್, ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಸದಸ್ಯರು ಉಪಸ್ಥಿತರಿದ್ದರು.

ದೇವರ ಉತ್ಸವ ಮೂರ್ತಿಗಳ ಮೆರವಣಿಗೆ....



ಮೈಸೂರು ತಾಲೂಕು ಜಯಪುರ ಹೋಬಳಿಯ ಮಾವಿನಹಳ್ಳಿಯಲ್ಲಿ ಸೋಮವಾರ ರಾತ್ರಿ ಕಾಲಾವಧಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಗ್ರಾಮದ ಸಮೀಪವಿರುವ ಗಂಗಾಸ್ಥಾನ ಕೆರೆಯಿಂದ ಹಾಲರವಿ ಉತ್ಸವ ಗ್ರಾಮಕ್ಕೆ ಆಗಮಿಸಿತು. ಮಹದೇಶ್ವರ ಸ್ವಾಮಿ ಹುಲಿವಾಹನ, ಸರ್ಪದ ವಾಹನ, ಬಸಪ್ಪ ಸ್ವಾಮಿ, ಸಿದ್ದಪ್ಪಾಜಿ ಕಂಡಾಯ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ದೇವರ ಉತ್ಸವ ಮೂರ್ತಿಗಳಿಗೆ ಬೃಹತ್ ಗಾತ್ರದ ಹೂವಿನಹಾರಗಳನ್ನು ಭಕ್ತರು ದೇವರಿಗೆ ಸಮರ್ಪಿಸಿ, ಪೂಜೆ ಸಲ್ಲಿಸಿದರು. ಛತ್ರಿ ಚಾಮರಗಳು ಮತ್ತು ದೇವರ ಬಿರುದು ಬಾವಲಿಗಳು ಮೆರವಣಿಗೆಯಲ್ಲಿ ಸಾಗಿದವು. ಪ್ರಮುಖ ಬೀದಿಗಳು ಮತ್ತು ದೇವಾಲಯಗಳಿಗೆ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ತಮಟೆ ಸದ್ದಿಗೆ ಯುವಕರು ಉತ್ಸವ ಮೂರ್ತಿಗಳನ್ನು ಹೊತ್ತು ಕುಣಿದರು.

ಪಿಎಚ್.ಡಿ ಪದವಿ



ಮೈಸೂರು,ಏ.28–ಡಾ. ಸಿ.ಎನ್. ಮನು ಅವರ ಮಾರ್ಗದರ್ಶನದಲ್ಲಿ ಆಯಿಷಾ ಜಮಾಲ್ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ನಿಧನ

ನಿಂಗಮ್ಮ



ಮೈಸೂರು,ಏ.28–ಮೈಸೂರು ತಾಲೂಕು ವರುಣಾ ಹೋಬಳಿ ಲಲಿತಾದ್ರಿಪುರ ನಿವಾಸಿ ರಂಗೇಗೌಡರ ಪತ್ನಿ ನಿಂಗಮ್ಮ (73) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಮೂವರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸಂಜೆ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಬ್ರಾಹಿಂ ಖಾನ್



ಮೈಸೂರಿನ ಹಲೀಂನಗರ ನಿವಾಸಿ ಹಾಗೂ ಸ್ಕ್ರಾಪ್ ಮರ್ಚೆಂಟ್ ಇಬ್ರಾಹಿಂ ಖಾನ್ (80) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ನಮಾಜ್ ಇ ಜನಾಜ ಹಲೀಂನಗರದ ಮಸೀದಿಯಲ್ಲಿ ಅಕಬರಿ ನಡೆದ ನಂತರ ಟಿಪ್ಪು ಸರ್ಕಲ್‌ನ ಮುಸ್ಲಿಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ಧನಲಕ್ಷ್ಮಿ



ಮೈಸೂರಿನ ಕುವೆಂಪುನಗರ ನಿವಾಸಿ ದಿವಂಗತ ಪಿ. ಶಿವಲಿಂಗಪ್ಪ ಅವರ ಪತ್ನಿ ಪಿ.ಧನಲಕ್ಷ್ಮಿ (80) ಸೋಮವಾರ ನಿಧನರಾದರು. ಮೃತರು ಪುತ್ರರಾದ ಡಾ.ಎಂ.ಎಸ್.ರಾಮಕೃಷ್ಣ, ಡಾ.ಎಸ್. ವೆಂಕಟೇಶ್ ಮತ್ತು ಎಸ್.ಶಿವಕುಮಾರ್, ಪುತ್ರಿ ಡಾ.ಎಸ್. ಮಹೇಶ್ವರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಘದ ಸದಸ್ಯರಾಗಿ ಪಿಂಚಣಿ ಸೌಲಭ್ಯ ಪಡೆಯಿರಿ

ಜೆ.ಕೆ.ಟೈರ್ಸ್ ನಿವೃತ್ತ ನೌಕರರ ಮನವಿ

ಮೈಸೂರು, ಏ.28(ಜಿಎ)–ಮೈಸೂರಿನ ಜೆ.ಕೆ. ಟೈರ್ಸ್‌ನ ಹಾಲಿ ಮತ್ತು ನಿವೃತ್ತ ನೌಕರರ ಸಂಘದ ಸದಸ್ಯರಿಗೆ ಮೂಲ ವೇತನಕ್ಕೆ ತಕ್ಕಂತೆ ಹೆಚ್ಚಿನ ಪಿಂಚಣಿ ನೀಡಬೇಕೆಂದು ಹೈಕೋರ್ಟ್ ಆದೇಶಿಸಿದ್ದು, ಅಂತಹವರು ಸಂಘದ ಸದಸ್ಯರಾಗುವ ಮೂಲಕ ಪ್ರಯೋಜನ ಪಡೆದುಕೊಳ್ಳಲು ಮುಂದಾಗಬೇಕೆಂದು ವಿಕ್ರಾಂತ್ ಟೈರ್ಸ್ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಪಿ.ನಿಂಗೇಗೌಡ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಲ ವೇತನಕ್ಕೆ ತಕ್ಕಂತೆ ಹೆಚ್ಚಿನ ಪಿಂಚಣಿ ನೀಡಬೇಕೆಂದು ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ನಂತರ ಇದಕ್ಕೆ ಪೂರಕವಾಗಿ 2022ರ ನವೆಂಬರ್‌ನಲ್ಲಿ ಆದೇಶ ಹೊರಡಿಸಿ ದೇಶದ ಎಲ್ಲಾ ಪಿಎಫ್ ಕಚೇರಿಯಿಂದ ಉದ್ಯೋಗಿಗಳು ಮತ್ತು ಉದ್ಯೋಗದಾತರಿಂದ ಜಂಟಿ ಅರ್ಜಿ ಆಹ್ವಾನಿಸಲಾಗಿತ್ತು. ಆದರೆ ಹೆಚ್ಚಿನ ಪಿಂಚಣಿಗೆ ಅರ್ಹರಲ್ಲ ಎಂದು 2025ರ ಮಾ.17ರಂದು ಅರ್ಜಿ ತಿರಸ್ಕರಿಸಲಾಗಿತ್ತು. ಬಳಿಕ ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋದ ಬಳಿಕ ತಮ್ಮಂತೆ ಆದೇಶ ಬಂದಿದೆ. ವಿಕ್ರಾಂತ್ ಟೈರ್ಸ್ ಕಾರ್ಖಾನೆಯ ನಿವೃತ್ತ ನೌಕರರು ಮೈಸೂರು, ಹಾಸನ, ಮಂಡ್ಯ ಮೊದಲಾದ ಜಿಲ್ಲೆಗಳಲ್ಲಿ ಹಂಚಿ ಹೋಗಿದ್ದು, ಅವರು ಹೈಕೋರ್ಟ್ ಆದೇಶ ವೀಕ್ಷಿಸಬಯಸಿದಲ್ಲಿ ರಿಟ್ ಅರ್ಜಿ ಸಂಖ್ಯೆ 36597–2025 (ಎಲ್–ಪಿಎಫ್) ನೋಡಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ರಾಜಣ್ಣ, ಮಹಾದೇವಪ್ಪ, ಕಿರಣ್, ಎ.ಟಿ.ಗೋವಿಂದರಾಜು ಉಪಸ್ಥಿತರಿದ್ದರು.

ಗುಡುಮಾದನಹಳ್ಳಿಯಲ್ಲಿ ಉದ್ದೇಶಿತ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಒತ್ತಾಯ

ಮೈಸೂರು, ಏ.28(ಜಿಎ)– ಗುಡುಮಾದನಹಳ್ಳಿ ಬಳಿ 100 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಆಸ್ಪತ್ರೆಯು ಉದ್ದೇಶಿತ ಭೂಮಿಯಲ್ಲಿಯೇ ತ್ವರಿತವಾಗಿ ಪೂರ್ಣಗೊಂಡು, ಸಾರ್ವಜನಿಕರಿಗೆ ಸೇವೆ ಒದಗಿಸಬೇಕು ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ್ ಬಣದ ರಾಜ್ಯ ಸಮಿತಿ ಸದಸ್ಯ ಗೋವಿಂದರಾಜು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 20 ಎಕರೆ ಸರ್ಕಾರಿ ಭೂಮಿಯನ್ನು ಯೋಜನೆಗೆ ಬಳಸಲಾಗಿದೆ. ವಿಮಾನ ನಿಲ್ದಾಣ, ಹೊರವರ್ತುಲ ರಸ್ತೆಗೆ ಸಮೀಪದ ಈ ಜಾಗವು ಸ್ಥಳೀಯರಿಗೆ ಮಾತ್ರವಲ್ಲದೆ ತಮಿಳುನಾಡು, ಕೇರಳ ಭಾಗದ ರೋಗಿಗಳಿಗೂ ಅನುಕೂಲವಾಗಲಿದೆ. ಇಂಥ ಯೋಜನೆಯನ್ನು ಭೂವ್ಯಾಜ್ಯದೊಂದಿಗೆ ತಳುಕು ಹಾಕಲು ಕೆಲವರು ಪ್ರಯತ್ನಿಸುತ್ತಿರುವುದು ಖಂಡನೀಯ. ಸ್ಪಷ್ಟವಾಗಿ ಸರ್ಕಾರಿ ಭೂಮಿಯಾಗಿದ್ದರೂ, ಕೆಲವರು ಯಾವುದೇ ದಾಖಲೆಗಳಿಲ್ಲದೇ ಈ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದು, ರೈತ ಮುಖಂಡರಿಗೂ ತಪ್ಪು ಮಾಹಿತಿ ನೀಡಿ ಹೋರಾಟ ಆಯೋಜಿಸುತ್ತಿದ್ದಾರೆ. ಯೋಜನೆಗೆ ಹಿನ್ನಡೆ ಮಾಡಲು ಮುಂದಾಗಿದ್ದಾರೆ. ನಿಜಕ್ಕೂ ನಷ್ಟ ಹೊಂದುವವರಿದ್ದರೆ ಸೂಕ್ತ ವೇದಿಕೆಯಲ್ಲಿ ಪರಿಹಾರ ಪಡೆಯಬೇಕು. ರೈತ ಮುಖಂಡರಿಗೂ ಸಂಘಟನೆಯಿಂದ ಮನವರಿಕೆ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕರಾದ ರಾಜಣ್ಣ ಇಟ್ನ, ಕೃಷ್ಣ ಕೊಳಘಟ್ಟ, ಸುರೇಶ್ ಯರಗನಹಳ್ಳಿ, ಜಿಲ್ಲಾ ಖಜಾಂಚಿ ಪುಟ್ಟಸ್ವಾಮಿ ದೇವರಸನಹಳ್ಳಿ, ಮುಖಂಡರಾದ ನಾಗರಾಜ ಬೆಲವತ್ತ, ಸೋಮು ಅಶೋಕಪುರಂ ಉಪಸ್ಥಿತರಿದ್ದರು.

ಮೇ 1, ಭಗವಾನ್ ಬುದ್ಧರ ಜಯಂತಿ

ಮೈಸೂರು,ಏ.28(ಜಿಎ)–ವಿಶ್ವಮೈತ್ರಿ ಬುದ್ಧ ವಿಹಾರದಿಂದ ಮೇ 1ರಂದು ಸಂಜೆ 5.30ಕ್ಕೆ ನಗರದ ಅಶೋಕ ವೃತ್ತದ ಬುದ್ಧ ವಿಹಾರದಲ್ಲಿ ಭಗವಾನ್ ಬುದ್ಧರ 2570ನೇ ಜನ್ಮದಿನಾಚರಣೆ ಆಯೋಜಿಸಲಾಗಿದೆ ಎಂದು ವಿಹಾರದ ಮುಖ್ಯಸ್ಥ ಪುರುಷೋತ್ತಮ್ ತಿಳಿಸಿದರು.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಹಾರದ ಕಲ್ಯಾಣಸಿರಿ ಭಂತೇಜಿ ಹಾಗೂ ಮಹಾಬೋಧಿ ಮಂಡಲದ ನಿರ್ದೇಶಕ ಸೊಬಾನ ಭಂತೇಜಿ ಸಮ್ಮುಖದಲ್ಲಿ ಗೃಹಸಚಿವ ಜಿ.ಪರಮೇಶ್ವರ್ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಶ್ರೀಮತಿ ಭಾಗ್ಯಲಕ್ಷ್ಮಿ ವಿ.ಶ್ರೀನಿವಾಸಪ್ರಸಾದ್ ಪಾಲ್ಗೊಳ್ಳುವರು. ಮಹಾರಾಜ ಕಾಲೇಜು ಪ್ರಾಂಶುಪಾಲ ವಿ.ಷಣ್ಮುಗಂ ಮುಖ್ಯ ಭಾಷಣ ಮಾಡುವರು ಎಂದರು.

ಅಂದು ಬೆಳಿಗ್ಗೆ 8.30ಕ್ಕೆ ಪುರಭವನದಿಂದ ಕಲಾಮಂದಿರದವರೆಗೆ ಬುದ್ಧಮೂರ್ತಿ ಮೆರವಣಿಗೆ ನಡೆಯಲಿದೆ. ಅಮ್ಮರಾಮಚಂದ್ರ, ಮರಿಸ್ವಾಮಿ ತಂಡದಿಂದ ಬುದ್ಧಗಾಯನ ಹಮ್ಮಿಕೊಳ್ಳಲಾಗಿದೆ. ನಂತರ ಜಿಲ್ಲಾಡಳಿತದಿಂದ ಜಯಂತಿ ಕಾರ್ಯಕ್ರಮ ಕಲಾಮಂದಿರದಲ್ಲಿ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ ಮತ್ತು ಸೊಬಾನ ಭಂತೇಜಿ ದಿವ್ಯ ಸಾನ್ನಿಧ್ಯವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹೇಶ್, ನಾಗರಾಜು, ಸೋಮಯ್ಯ ಮಲೆಯೂರು, ಮಂಜುನಾಥ್, ಪುಟ್ಟರಾಜು, ರಮೇಶ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ಮತ್ತು ಸಂಜೆ 5.30–ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ –ಶಿಶು ಗೀತೆಗಳ ಕಾರ್ಯಕ್ರಮ 8.35 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಆರ್.ಮೋಹನ್–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ವಂದನಾ. ವಿ.„ 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ರಾಜ್ ಕುಮಾರ್ ಭಾರತಿ–ಹಾಡುಗಾರಿಕೆ, 4.00 ಮಹಿಳಾರಂಗ, ಮಹಿಳಾ ಸಾಹಿತ್ಯರಂಗ–ಮಹಿಳೆಯರ ಪತ್ರಗಳನಾಧರಿಸಿದ ಸಾಹಿತ್ಯ ಕಾರ್ಯಕ್ರಮ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ.ಮಾಧವಿ ಭಂಡಾರಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ತಾರಸಿ ಮೇಲೆ ಹಸಿರು ತೋಟ–ಬಳಸಬೇಕಾದ ವಿಧಾನಗಳೂ, ಮುನ್ನೆಚ್ಚರಿಕೆಗಳು ಮತ್ತು ಅದರ ಅನುಕೂಲಗಳು ಭಾಗವಹಿಸುತ್ತಾರೆ ತೋಟಗಾರಿಕಾ ತಜ್ಞರಾದ ನಟರಾಜ್ ಮತ್ತು ಪ್ರಮೂರ್ ಗ್ರೂಪ್ ನ ಪ್ರಧಾನ ವ್ಯವಸ್ಥಾಪಕ ನಿರ್ದೇಶಕರಾದ ಎಸ್. ಪ್ರಕಾಶ್, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ಕೃಷಿರಂಗ–ಕುರಿ, ಮೇಕೆ ಸಾಕಾಣಿಕೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಕೆ.ಆರ್.ನಗರ ತಾಲೂಕು, ಕಾಳೇನಹಳ್ಳಿ ಕೊಪ್ಪಲು ಗ್ರಾಮದ ಕೃಷಿಕ ದಂಪತಿ ಕೆ.ಪಿ.ಚಂದು ಹಾಗೂ ಎ.ಸಿ.ಸುಮಾ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ 10.30 ಸವಿನೆನಪು

ಇಂದಿನ ಪಂಚಾಂಗ

29.4.2026 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಮಂದ ದೃಷ್ಟಿ, ಕಣ್ಣಿನ ನೋವು ಹಾಗೂ ಕಣ್ಣಿನಲ್ಲಿ ನೀರು ಬರುವುದು, ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸೆ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶ್ರೀಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ–2026 ಪೂಜಾ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಅವಭೃತಸ್ನಾನ (ಚಕ್ರಸ್ನಾನ), ಅಮೃತ ಕಳಶಾಭಿಷೇಕ, ಸಂಜೆ 6ಕ್ಕೆ ವಿದುಷಿ ಅನುಘ್ಯ ಮತ್ತು ವೃಂದದವರಿಂದ ಸಂಗೀತ ಕಾರ್ಯಕ್ರಮ, ಸಂಜೆ 8ಕ್ಕೆ ವೈಭವ ಶಯನೋತ್ಸವ, ಸ್ಥಳ: ದೇವಾಲಯದ ಪ್ರಾಂಗಣ, ಗೋಕುಲಂ, 3ನೇ ಹಂತ ಸಂಜೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಸುಯೋಗ್ ಗ್ರೂಪ್ ಆಫ್ ಮೆಡಿಕಲ್ ಇನ್‌ಸ್ಟಿಟ್ಯೂಷನ್ಸ್** : ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ಡಾ.ವಿ.ಜಿ.ಜೋಸೆಫ್, ಜಿ.ಎಲ್.ತ್ರಿಪುರಾಂತಕ, ವಿಶ್ರಾಂತ ಉಪಕುಲಪತಿ ಡಾ. ಎನ್.ಎಸ್. ರಾಮೇಗೌಡ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ವಿಜ್ಞಾನ ಭವನ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**: ವಿಶ್ವಜ್ಞಾನಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ, ಸಾನ್ನಿಧ್ಯ: ಉರಿಲಿಂಗಿಪೆದ್ದಿ ಮಠದ ಶ್ರೀಜ್ಞಾನಪ್ರಕಾಶ್ ಮಹಾಸ್ವಾಮೀಜಿ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಸಚಿವ ಪ್ರಿಯಾಂಕ ಖರ್ಗೆ, ಶಾಸಕ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ವಿಶೇಷ ಆಹ್ವಾನಿತರು: ಮಾಜಿ ಮೇಯರ್ ಪುರುಷೋತ್ತಮ್, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ) ಸಾರಥ್ಯದಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಕುರಿತು ಗೀತಗಾಯನ ಮತ್ತು ನಾಟಕ ಪ್ರದರ್ಶನ, ಸ್ಥಳ: ಘಟಿಕೋತ್ಸವ ಭವನ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಹಾಬೋಧಿ ಸೊಸೈಟಿ** : 2570ನೇ ಬುದ್ಧ ಜಯಂತಿ ಅಂಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಕಲ್ಪಿಸಿದ ನಮ್ಮ ಬದುಕಿನಲ್ಲಿ ಬುದ್ಧರ ಪ್ರಸ್ತುತತೆ ಕುರಿತು ವಿಶೇಷ ಉಪನ್ಯಾಸ, ಉಪನ್ಯಾಸ ನೀಡುವವರು: ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಬಿಕ್ಕು ಆನಂದ ಥೇರ, ಉಪಸ್ಥಿತರು: ಅಂಬೇಡ್ಕರ್ ಕೇಂದ್ರದ ನಿರ್ದೇಶಕ ಪ್ರೊ. ಎಸ್. ನರೇಂದ್ರ ಕುಮಾರ್, ಅಧ್ಯಕ್ಷತೆ : ಹಿರಿಯ ಪ್ರಾಧ್ಯಾಪಕ ಡಾ. ಜೆ. ಸೋಮಶೇಖರ್, ಸ್ಥಳ: ಡಾ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು** : ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಸಮಾರೋಪ ಭಾಷಣ : ಡಿಸಿಪಿ ಡಾ. ಹರ್ಷ ಪ್ರಿಯಂವದ, ಚಲನಚಿತ್ರ ನಟಿ ಶ್ರೀಮತಿ ಸಿರಿ ಪ್ರಭಾಕರ್, ಅಧ್ಯಕ್ಷತೆ : ಅಂತಿಮ ವರ್ಷದ ವಿದ್ಯಾರ್ಥಿ ಸಿ.ಕೆ. ನಿಹಾರಿಕೆ ಹೆಗಡೆ, ಉಪಸ್ಥಿತರು : ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಎಂ. ನಾಗೇಶ್, ಡಾ. ಪಿ.ಜಿ. ಪುಷ್ಪರಾಣಿ, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ ಧನ್ವಂತರಿ ಹೋಮ, ಸಂಜೆ 6 ರಿಂದ ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ಯ ಅವರಿಂದ ನರಸಿಂಹ ಮಹಿಮೆ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ.

ವರಕೋಡು ಗಡಿ, ಗುರುಮಠ, ವರುಣಾ ಹೋಬಳಿ

■ **ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನ**: ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ 48ನೇ ದಿನದ ಮಂಡಲ ಪೂಜೆ, ಮಹಾದ್ವಾರ ಪ್ರತಿಷ್ಠಾಪನಾ ಮಹೋತ್ಸವ, ಸಾನ್ನಿಧ್ಯ: ಕಾಗಿನೆಲೆ ಮಹಾಸಂಸ್ಥಾನ ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಗುರುಸ್ವಾಮಿ, ಗುರುದೇವು, ಮಹಾದ್ವಾರ ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಬೆಳಗ್ಗೆ 10ಕ್ಕೆ

ಬಸವಣ್ಣನ ವಚನಗಳು ಸಮಾಜ ಪರಿವರ್ತನೆ ದೀಪಸ್ತಂಭಗಳು

ಜಾಗತಿಕ ಲಿಂಗಾಯತ ಮಹಾಸಭಾ ಗೌರವಾಧ್ಯಕ್ಷ ಶ್ರೀಗೌರಿಶಂಕರ ಸ್ವಾಮೀಜಿ ಬಣ್ಣನೆ


ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

“ಜಗಜ್ಯೋತಿ ಬಸವಣ್ಣನವರು ಕೇವಲ ಒಬ್ಬ ಮಹಾನ್ ಸಂತರಲ್ಲ, ಅವರು ಮಾನವತೆಯ ಮಹಾಗುರು. ಸಮಾನತೆಯ ಹರಿಕಾರ ಮತ್ತು ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಯುಗ ಪುರುಷ. ಅವರ ಜೀವನ ಮತ್ತು ಸಂದೇಶಗಳು ನಮ್ಮೆಲ್ಲರಿಗೂ ಶಾಶ್ವತ ದಾರಿದೀಪವಾಗಿವೆ. ಬಸವಣ್ಣನವರು ಸಮಾಜದಲ್ಲಿದ್ದ ಜಾತಿ, ಅಸಮಾನತೆ, ಅಂಧ ಶ್ರದ್ಧೆ ಮತ್ತು ಶೋಷಣೆ ವಿರುದ್ಧ ಧ್ವನಿ ಎತ್ತಿದರು. ಕಾಯಕವೇ ಕೈಲಾಸ ಎಂಬ ಮಹಾಮಂತ್ರದ ಮೂಲಕ ಶ್ರಮಕ್ಕೆ ಗೌರವ ತಂದುಕೊಟ್ಟರು. ಯಾವ ಕೆಲಸವೂ ಕೀಳಲ್ಲ. ಪ್ರಾಮಾಣಿಕ ದುಡಿಮೆಯೇ ಪರಮಪೂಜೆ ಎಂದು ಬೋಧಿಸಿದರು. ದಾಸೋಹ ಎಂಬ ತತ್ವದ ಮೂಲಕ ಸಂಪಾದಿಸಿದ್ದನ್ನು ಸಮಾಜದೊಂದಿಗೆ ಹಂಚಿಕೊಳ್ಳುವ ಗುಣವನ್ನು ಬೆಳೆಸಿದರು. ನಮ್ಮ ಜೀವನವು ಕೇವಲ ನಮಗಷ್ಟೇ ಸೀಮಿತವಾಗಿರದೆ, ಸಮಾಜದ ಹಿತಕ್ಕಾಗಿ ಸಮರ್ಪಿತವಾಗಿರಬೇಕು ಎಂಬ ಸಂದೇಶ ಸಾರಿದರು.

– ಎಂ.ರವಿ, ಜಾಗತಿಕ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ.

ತಿ.ನರಸೀಪುರ, ಏ.28– ಬಸವಣ್ಣನವರ ವಚನಗಳು ಕೇವಲ ಸಾಹಿತ್ಯವಲ್ಲ. ಅವು ಸಮಾಜ ಪರಿವರ್ತನೆಯ ದೀಪಸ್ತಂಭಗಳಾಗಿವೆ ಎಂದು ಮದ್ಗಾರ ಲಿಂಗಯ್ಯನಹುಂಡಿ ಅಲ್ಲಮಪ್ರಭು ಶೂನ್ಯ ಪೀಠದ ಪೀಠಾಧ್ಯಕ್ಷ ಹಾಗೂ ಜಾಗತಿಕ ಲಿಂಗಾಯತ ಮಹಾ ಸಭಾ ಗೌರವಾಧ್ಯಕ್ಷ ಶ್ರೀಗೌರಿಶಂಕರ ಸ್ವಾಮೀಜಿ ಬಣ್ಣಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ಹೆಳವರಹುಂಡಿ ಗ್ರಾಮದ ಬಸವ ಭವನದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದಿಂದ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಸರಳ ಕನ್ನಡದಲ್ಲಿ ರಚಿತವಾದ ಬಸವಣ್ಣನವರ ವಚನಗಳು ಸಾಮಾನ್ಯ ಜನರ ಬದುಕಿಗೆ ಬೆಳಕು ನೀಡಿವೆ. ಜಾತಿ, ಮತ, ಲಿಂಗ ಎಂಬ ಬೇಧಗಳನ್ನು ತೊಡೆದು ಹಾಕಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಬಸವಣ್ಣನವರು ವಚನಗಳ ಮೂಲಕ ಮಾರ್ಗದರ್ಶನ ನೀಡಿದ್ದಾರೆ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಸಂದೇಶ ದುಡಿಮೆಯ ಮಹತ್ವ ಸಾರುತ್ತದೆ. ಪ್ರತಿಯೊಬ್ಬರೂ ತಮ್ಮ ಶ್ರಮದಿಂದ ಬದುಕಬೇಕು. ಯಾವುದೇ ಕೆಲಸ ಹೀನವಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಹಾಗೆಯೇ ದಾಸೋಹ ತತ್ವದ ಮೂಲಕ ಸಂಪಾದಿಸಿದ ಸಂಪತ್ತನ್ನು ಸಮಾಜದ ಒಳಿತಿಗಾಗಿ ಹಂಚಿಕೊಳ್ಳಬೇಕು ಎಂಬ ಮೌಲ್ಯವನ್ನು ಬೋಧಿಸಿದ್ದಾರೆ. ವಚನಗಳು ಭಕ್ತಿ, ನೈತಿಕತೆ ಮತ್ತು ಮಾನವೀಯತೆಯ ಸಮನ್ವಯವಾಗಿವೆ. ಬಸವಣ್ಣನವರು ದೇವರನ್ನು ದೇವಸ್ಥಾನಗಳಲ್ಲಿ ಹುಡುಕದೆ, ಮನುಷ್ಯರ ಹೃದಯದಲ್ಲಿ ಕಾಣಬೇಕು ಎಂದು ಸಾರಿದರು. ಅಂತರಂಗದ ಶುದ್ಧತೆ, ಪ್ರಾಮಾಣಿಕತೆ ಮತ್ತು ಸೇವಾಭಾವವೇ ನಿಜವಾದ ಆರಾಧನೆ ಎಂದು ತಿಳಿಸಿದರು.

ಬಸವಣ್ಣನವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಯುವಜನತೆಗೆ ಉತ್ತಮ ಬದುಕಿನ ದಾರಿ ತೋರಿಸುತ್ತವೆ. ಸಮಾನತೆ, ಸಹಬಾಳ್ವೆ ಮತ್ತು ಸತ್ಯನಿಷ್ಠೆ ಎಂಬ ಮೌಲ್ಯಗಳನ್ನು ಬೆಳೆಸಲು ಬಸವಣ್ಣನವರ ವಚನಗಳು ಸದಾ ಪ್ರೇರಣೆಯಾಗಿವೆ. ಮೂಢ ನಂಬಿಕೆ, ಅಂಧ ಶ್ರದ್ಧೆ, ಅಸಮಾನತೆ ಮತ್ತು ಶೋಷಣೆಯ ವಿರುದ್ಧ ಬಸವಣ್ಣನವರು ಹೋರಾಡಿದರು. ಅನುಭವ ಮಂಟಪದ ಮೂಲಕ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸಿ, ಪ್ರತಿಯೊಬ್ಬರ ಧ್ವನಿಗೂ ಗೌರವ ನೀಡಿದರು ಎಂದ ಅವರು ಸಮಾನತೆ, ಶ್ರಮ, ಸೇವೆ ಮತ್ತು ಸತ್ಯ ನಿಷ್ಠೆ ಎಂಬ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಿಜವಾದ ಬಸವ ತತ್ವ ಪಾಲಿಸಿದಂತಾಗುತ್ತದೆ ಎಂದರು.

ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮಹದೇವಪ್ಪ ಮಾತನಾಡಿ, ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜಗತ್ತಿಗೆ ಪರಿಚಯಿಸಿದ ಬಸವಣ್ಣನವರು ಮಹಿಳೆಯರಿಗೂ ಸಮಾನ ಅವಕಾಶ ನೀಡಿ, ಅವರ ಚಿಂತನೆಗಳಿಗೆ ವೇದಿಕೆ ಒದಗಿಸಿದರು. ಇದು ಅವರ ದೂರದೃಷ್ಟಿ ಮತ್ತು ಮಾನವತೆಯ ಪ್ರತೀಕವಾಗಿದೆ ಇಂದು ಜಾಗತಿಕ ಲಿಂಗಾಯತ ಮಹಾಸಭಾ ಬಸವಣ್ಣನವರ ತತ್ವಾದರ್ಶಗಳನ್ನು ವಿಶ್ವದಾದ್ಯಂತ ಪಸರಿಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಯೋಜನೆ ಅಧ್ಯಕ್ಷ ಹಿರಿಯೂರು ನವೀನ್, ಕೆಡಿಪಿ ಸದಸ್ಯ ಟಿ.ಬಿ.ಚಂದ್ರಧರ ಹಾಗೂ ತೊಟ್ಟವಾಡಿ ಟಿ.ಪಿ. ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಮಹಾಸಭಾ ಗೌರವ ಪ್ರಧಾನ ಕಾರ್ಯದರ್ಶಿ ಟಿ.ಎನ್.ನಾಗರಾಜು, ಅಕ್ಕ ಮಹಾದೇವಿ ಸಹಕಾರ ಸಂಘದ ಅಧ್ಯಕ್ಷ ಕೆ.ಜಿ.ಶಿವಪ್ರಸಾದ್, ಉಪಾಧ್ಯಕ್ಷ ಮಹೇಶ್ ಕುಮಾರ್, ಗೌರವ ಸಂಚಾಲಕ ಡಿ.ಎಲ್.ಮಹದೇವಪ್ಪ, ಕಸಬಾ ಅಧ್ಯಕ್ಷ ಗುರುಸ್ವಾಮಿ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ ಕು.ಶಿ.ಬೃಂಗೀಶ್, ಪಿಎಸಿಎಸ್ ಅಧ್ಯಕ್ಷ ಹೆಳವರಹುಂಡಿ ನಟರಾಜು, ಕಟ್ಟೆಪುರ ಕೆ.ಎನ್. ಮಹದೇವಸ್ವಾಮಿ, ವಿರೂಪಾಕ್ಷ, ಗೌಡ್ರ ನಾಗಣ್ಣ, ಬಸಪ್ಪ, ಪ್ರಭುಸ್ವಾಮಿ, ಕುಮಾರ, ಹೆಳವರಹುಂಡಿ ಸತೀಶ್ ಸೇರಿದಂತೆ ಮತ್ತಿತರರಿದ್ದರು.

ಜಿಂಕೆ ಬೇಟೆ: ಇಬ್ಬರು ಬೇಟೆಗಾರರ ಬಂಧನ



ಹನಗೋಡು: ನಾಗರಹೊಳೆ ಉದ್ಯಾನವನದ ವೀರನಹೊಸಳ್ಳಿ ವನ್ಯ ಜೀವಿ ವಲಯದಲ್ಲಿ ಜಿಂಕೆ ಬೇಟೆಯಾಡಿದ್ದ ಇಬ್ಬರು ಬೇಟೆಗಾರರನ್ನು ಬಂಧಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.


ಹನಗೋಡು ಹೋಬಳಿ ಶಿಂಡೇನಹಳ್ಳಿ ನಿವಾಸಿ ರವಿಕುಮಾರ್ ಅಲಿಯಾಸ್ ಅಮಾಸೆ ರವಿ ಹಾಗೂ ಬಿ.ಆರ್.ಕಾವಲು ನಿವಾಸಿ ರಾಜು ಅಲಿಯಾಸ್ ಗುಂಡ ಬಂಧಿತ ಆರೋಪಿಗಳು. ಇವರಿಂದ ಜಿಂಕೆ ಕಳೇಬರ, ಬೇಟೆಗೆ ಬಳಸಿದ್ದ ಸಿಂಗಲ್ ಬ್ಯಾರಲ್ ಬಂದೂಕು, ದ್ವಿಚಕ್ರ ವಾಹನ, ಮಚ್ಚು, 5 ಜೀವಂತ ಕಾಡ ತೂಸುಗಳು, 1 ಬಳಕೆ ಮಾಡಿದ್ದ ಕಾಡತೂಸುಗಳನ್ನು ವಶ ಪಡಿಸಿಕೊಂಡಿದ್ದಾರೆ.

ವಿವರ: ನಾಗರಹೊಳೆ ಉದ್ಯಾನವನದ ವೀರನಹೊಸಳ್ಳಿ ವನ್ಯಜೀವಿ ವಲಯದಲ್ಲಿ ಜಿಂಕೆ ಬೇಟೆಯಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಆರ್‌ಎಫ್‌ಓ ವಿನೋದ್‌ಗೌಡರ ನೇತೃತ್ವದ ಸಿಬ್ಬಂದಿ ಗಸ್ತಿನಲ್ಲಿದ್ದಾಗ ಮಂಗಳವಾರ ಮುಂಜಾನೆ 4 ಗಂಟೆ ಸಮಯದಲ್ಲಿ ಚಾಮಳ್ಳಿ ಶಾಖೆಯ ಎರೆಕಟ್ಟೆ ಗಸ್ತಿನ ಹೊಸಕಟ್ಟೆ ಕೆರೆ–ಎರಕಟ್ಟೆ ರಸ್ತೆಯ ತಿರುವಿನ ಬಳಿ ಗುಂಡಿನ ಶಬ್ದ ಕೇಳಿ ಬಂದ ಕಡೆ ಅರಣ್ಯ ಇಲಾಖೆ ಸಿಬ್ಬಂದಿ ಸುತ್ತುವರಿದು ಆರೋಪಿಗಳಾದ ರವಿ ಹಾಗೂ ರಾಜು ಅವರನ್ನು ಬಂಧಿಸಿದ್ದಾರೆ. ಈ ವೇಳೆ ಶಿಂಡೇನಹಳ್ಳಿ ನಿವಾಸಿ ಸೀನೇಗೌಡರ ಪುತ್ರ ಸುನೀಲ್, ಮುದಗನೂರಿನ ಬಸವೇಗೌಡರ ಪುತ್ರ ಎಂ.ಬಿ.ಗಣೇಶ್ ಸ್ಥಳದಿಂದ ಪರಾರಿಯಾಗಿದ್ದಾರೆ. ಬಳಿಕ ಆರೋಪಿಗಳಿಂದ ಜಿಂಕೆ ಕಳೇಬರ ಹಾಗೂ ಕೃತ್ಯಕ್ಕೆ ಬಳಸಿದ್ದ ಪರಿಕರಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಡಿಸಿಎಫ್ ಪಿ.ಎ.ಸೀಮಾ ತಿಳಿಸಿದ್ದಾರೆ.

ಅರಣ್ಯದಂಚಿನ ಗ್ರಾಮಸ್ಥರು ಇಂತಹ ಅಪರಾಧ ಪ್ರಕರಣಗಳು ಕಂಡು ಬಂದಲ್ಲಿ ಮಾಹಿತಿ ನೀಡುವಂತೆ ಎಸಿಎಫ್ ಲಕ್ಷ್ಮಿಕಾಂತ್ ಮನವಿ ಮಾಡಿದ್ದಾರೆ.

ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓ ನವೀನ್‌ಕುಮಾರ್, ಸಹನಾ ವಿ.ಪಾಟೀಲ್, ಕೆ.ಶಿಲ್ಪ, ಗಸ್ತು ಅರಣ್ಯಪಾಲಕರಾದ ವೆಂಕಟೇಶ್, ಶಮಂತ, ನಾರಾಯಣ, ಅವಿನಾಶ್, ಅರಣ್ಯ ವೀಕ್ಷಕರಾದ ಶಾಂತ ಕುಮಾರ್, ಶಿವಕುಮಾರ್, ಗಾಯಿತ್ರಿ ಇದ್ದರು.

ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್‌ಕುಮಾರ್ ಹುಟ್ಟುಹಬ್ಬ ಆಚರಣೆ


ಭೇರ್ಯದಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಕೆ.ಆರ್.ನಗರ, ಏ.28– ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್‌ಕುಮಾರ್ ಅವರ 59ನೇ ಹುಟ್ಟುಹಬ್ಬವನ್ನು ಮಂಗಳವಾರ ವಿವಿಧ ಸೇವಾ ಕಾರ್ಯಗಳೊಂದಿಗೆ ಆಚರಿಸಲಾಯಿತು.

ಹುಟ್ಟುಹಬ್ಬದ ಅಂಗವಾಗಿ ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್‌ಕುಮಾರ್ ಅವರು ತಮ್ಮ ಮನೆ ದೇವರು ಸಾಲಿಗ್ರಾಮ ತಾಲೂಕಿನ ಬೀಚನಹಳ್ಳಿಯ ಮಲ್ಲೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಭೇರ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಸ್ಪಂದನಾ ಆಸ್ಪತ್ರೆ ಮತ್ತು ಜೀವಾಧಾರ ರಕ್ತನಿಧಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದರು. ಈ ವೇಳೆ ವೈದ್ಯರು ಸಾರ್ವಜನಿಕರ ಆರೋಗ್ಯ ತಪಾಸಣೆ ಮಾಡಿ ಔಷಧ ವಿತರಿಸಿದರು. ರಕ್ತದಾನ ಶಿಬಿರದಲ್ಲಿ ನೂರಾರು ಯುವಕರು ರಕ್ತದಾನ ಮಾಡಿದರು.

ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್ ಕುಮಾರ್ ಮಾತನಾಡಿ, ಉಳ್ಳವರು ಬಡವರು ಮತ್ತು ನಿರ್ಗತಿಕರಿಗೆ ತಮ್ಮ ಕೈಲಾದ ನೆರವು ನೀಡಬೇಕು. ಆಗ ಮಾತ್ರ ಜನ್ಮ ದಿನದ ಆಚರಣೆಗೆ ನಿಜವಾದ ಅರ್ಥ ಬರಲಿದೆ ಎಂದರು.

ಈ ವೇಳೆ ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್ ಕುಮಾರ್ ಪತ್ನಿ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷೆ ಪುಷ್ಪಲತಾ, ಪುತ್ರ ಸಿ.ಆರ್. ಮಂಜುನಾಥ್, ಮೈಸೂರಿನ ಸ್ಪಂದನಾ ಆಸ್ಪತ್ರೆ ಕೀಲು ಮತ್ತು ಮೂಳೆ ತಜ್ಞ ಡಾ.ಅವಿನಾಶ್, ನೇತ್ರ ತಜ್ಞ ಡಾ. ಅಗರ್‌ವಾಲ್, ಮುಖಂಡರಾದ ದಿಲೀಪ್, ಅನಿಲ್‌ಕುಮಾರ್, ಬಿ.ಟಿ. ಮೋಹನ್‌ಕುಮಾರ್, ಕುಮಾರಸ್ವಾಮಿ, ಯತಿರಾಜ್, ಬಿ.ಎಂ.ಪ್ರಕಾಶ್, ಸಿ.ಪಿ. ರಮೇಶ್ ಅಭಿಮಾನಿ ಬಳಗದ ಪದಾಧಿಕಾರಿಗಳು, ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು.

ರಾಜಕೀಯ ಒತ್ತಡಕ್ಕೆ ಮಣಿದು

ತಾಲೂಕು ಆಡಳಿತದಿಂದ ವಾಸಸ್ಥಳ ದೃಢೀಕರಣ ಪತ್ರ ರದ್ದು

ಸೀಗವಾಡಿ ಗ್ರಾಮದ ಹೆಚ್.ಪಿ.ರಾಧ ಆರೋಪ



ಸುದ್ದಿಗೋಷ್ಠಿಯಲ್ಲಿ ಸೀಗವಾಡಿ ಗ್ರಾಮದ ರಾಧ ಮಾತನಾಡಿದರು.

“ರಾಧ ಎಂಬಾಕೆ ವಾಸಸ್ಥಳ ದೃಢೀಕರಣ ಪತ್ರ ಸೇರಿದಂತೆ ಇತ್ಯಾದಿ ದಾಖಲೆಗಳನ್ನು ಪಡೆಯಲು ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿದರು. ಅರ್ಜಿ ಪುರಸ್ಕರಿಸಿ ದಾಖಲಾತಿಯನ್ನು ನೀಡಲಾಗಿತ್ತು. ಆದರೆ ಗ್ರಾಮಸ್ಥರು ರಾಧ ಎಂಬಾಕೆ ನಮ್ಮ ಗ್ರಾಮದವರಲ್ಲ ಎಂದು ತಕಾರರು ಮಾಡಿದ್ದರಿಂದ ಆಕೆಗೆ ನೀಡಲಾಗಿದ್ದ ದಾಖಲಾತಿಯನ್ನು ಗ್ರೇಡ್–2 ತಹಸೀಲ್ದಾರ್ ರದ್ದುಗೊಳಿಸಿದ್ದಾರೆ. ಯಾವುದೇ ರಾಜಕೀಯ ಒತ್ತಡಕ್ಕೆ ಮಣಿದು ಆಕೆಗೆ ನೀಡಿದ್ದ ದಾಖಲಾತಿ ರದ್ದುಗೊಳಿಸಿಲ್ಲ. ಎಲ್ಲವೂ ಕಾನೂನು ಪ್ರಕಾರವೇ ಮಾಡಲಾಗಿದೆ.

–ಮೋಹನ ಕುಮಾರಿ, ತಹಸೀಲ್ದಾರ್.

ಹೆಚ್.ಡಿ.ಕೋಟೆ, ಏ.28– ರಾಜಕೀಯ ಒತ್ತಡಕ್ಕೆ ಮಣಿದು ನನಗೆ ನೀಡಿದ್ದ ವಾಸಸ್ಥಳ ದೃಢೀಕರಣ ಪತ್ರವನ್ನು ಸರಗೂರು ತಾಲೂಕು ಆಡಳಿತ ರದ್ದುಗೊಳಿಸಿದೆ ಎಂದು ಸರಗೂರು ತಾಲೂಕಿನ ಸೀಗವಾಡಿ ಗ್ರಾಮದ ಹೆಚ್.ಪಿ.ರಾಧ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತರ ಹುದ್ದೆಗೆ ಅರ್ಜಿ ಸಲ್ಲಿಸಲು ಜಾತಿ ದೃಢೀಕರಣ ಪತ್ರ, ಆದಾಯ ಪ್ರಮಾಣ ಪತ್ರ ಹಾಗೂ ವಾಸಸ್ಥಳ ದೃಢೀಕರಣ ಪತ್ರಕ್ಕಾಗಿ ಸರಗೂರು ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿ 2025ರ ನ.25ರಂದು ವಾಸಸ್ಥಳ ದೃಢೀಕರಣ ಪತ್ರ, ಜ.13ರಂದು ಜಾತಿ ಮತ್ತು ಆದಾಯ ದೃಢೀಕರಣ ಪತ್ರ ಪಡೆದು ಹೆಚ್.ಡಿ.ಕೋಟೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದೆ. ಫೆ.10 ರಂದು ಸೀಗವಾಡಿ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಹುದ್ದೆಗೆ ನನ್ನನ್ನು ಆಯ್ಕೆ ಮಾಡಿ ತಾತ್ಕಾಲಿಕ ಆಯ್ಕೆ ಪಟ್ಟಿ ಕೂಡ ನೋಟೀಸ್ ಬೋರ್ಡ್‌ನಲ್ಲಿ ಹಾಕಿದ್ದರು. ಆದರೆ ಏ.18 ರಂದು ನನಗೆ ಯಾವುದೇ ಮಾಹಿತಿ ನೀಡದೆ ಸರಗೂರು ತಹಸೀಲ್ದಾರ್, ಉಪ ತಹಸೀಲ್ದಾರ್, ಕಂದಾಯಾಧಿಕಾರಿ ಹಾಗೂ ಗ್ರಾಮ ಲೆಕ್ಕಿಗರು ಉದ್ದೇಶಪೂರ್ವಕವಾಗಿ ನನಗೆ ನೀಡಿದ್ದ ವಾಸಸ್ಥಳ ದೃಢೀಕರಣ ಪತ್ರವನ್ನು ರದ್ದು ಮಾಡಿದ್ದಾರೆ ಎಂದು ದೂರಿದರು.

ಈ ವಿಚಾರವನ್ನು ಶಾಸಕರ ಗಮನಕ್ಕೆ ತಂದರೂ, ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲನೆ ಕೈಗೊಂಡು ನನಗೆ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೇ ಸರಗೂರು ತಾಲೂಕು ಕಚೇರಿ ಆವರಣದಲ್ಲಿ ಕುಟುಂಬ ಸಮೇತರಾಗಿ ಮಹಿಳಾ ಸಂಘಟನೆಗಳು ಹಾಗೂ ಇತರೆ ಎಲ್ಲಾ ಸಂಘಟನೆಗಳ ಸಮ್ಮುಖದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಮಹೇಶ್, ರಾಧ ಅವರ ಪತಿ ಪ್ರಭುಸ್ವಾಮಿ, ಪುಟ್ಟಣ್ಣ ಇದ್ದರು.

ಗೋ ಗೌರವ ದಿನವನ್ನು ರಾಷ್ಟ್ರೀಯ ದಿನವನ್ನಾಗಿ ಆಚರಿಸಲು ಮನವಿ ಸಲ್ಲಿಕೆ


ಗೋ ಗೌರವ ದಿನವನ್ನು ರಾಷ್ಟ್ರೀಯ ದಿನವನ್ನಾಗಿ ಆಚರಿಸಲು ಮನವಿ ಸಲ್ಲಿಸಲಾಯಿತು.

ಸರಗೂರು, ಏ.28– ಗೋ ಸಮ್ಮಾನ ಆಹ್ವಾನ ಅಭಿಯಾನ ಶೀರ್ಷಿಕೆಯಲ್ಲಿ ಏ.27 ರಂದು ‘ಗೋ ಗೌರವ ದಿನ’ ಅನ್ನು ರಾಷ್ಟ್ರೀಯ ದಿನವನ್ನಾಗಿ ಆಚರಿಸಬೇಕು ಎಂದು ತಾಲೂಕಿನ ಗೋ ಸಮ್ಮಾನ ಆಹ್ವಾನ ಅಭಿಯಾನ ಹಾಗೂ ಭಜರಂಗದಳ ಕಾರ್ಯಕರ್ತರು ಉಪ ತಹಸೀಲ್ದಾರ್ ಪರಶಿವಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲೂಕು ಕಚೇರಿಗೆ ಭೇಟಿ ನೀಡಿ ಮನವಿ ಸಲ್ಲಿಸಿ ಮಾತನಾಡಿದ ಸೇವಾ ಭಾರತಿ ಕಾರ್ಯಕರ್ತ ಶ್ರೀವತ್ಸ ಸಂವಿಧಾನದ 48ನೇ ವಿಧಿಯಂತೆ ಗೋಹತ್ಯೆಯನ್ನು ಜಾಮೀನು ರಹಿತ ಮಾಡಬೇಕು. ಗೋವನ್ನು ರಾಷ್ಟ್ರೀಯ ಆರಾಧ್ಯ ದೈವ ಅಥವಾ ರಾಷ್ಟ್ರೀಯ ಮಾತೆಯನ್ನಾಗಿ ಘೋಷಿಸಬೇಕು. ಗೋ ಸೇವಾ ಸಚಿವಾಲಯ ಸ್ಥಾಪಿಸಬೇಕು. ಪ್ರತಿ ಗ್ರಾಪಂನಲ್ಲಿ ನಂದಿ ಶಾಲೆ ಮತ್ತು ಜಿಲ್ಲೆಯಲ್ಲಿ ಗೋ ಅಭಯಾರಣ್ಯ ಹಾಗೂ ಗೋವಿನ ಸುರಕ್ಷತೆ ಗೋವಿನ ರಕ್ಷಣೆ ಸೇರಿದಂತೆ ಇನ್ನಿತರ ಬೇಡಿಕೆಯುಳ್ಳ ಮನವಿಗೆ ಸಾರ್ವಜನಿಕರು, ರೈತರು ಸೇರಿದಂತೆ 300 ಮಂದಿ ಸಹಿ ಮಾಡಿಸಿ ರಾಷ್ಟ್ರಪತಿ, ಪ್ರಧಾನ ಮಂತ್ರಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗೆ ಉಪತಹಶೀಲ್ದಾರ್ ಪರಶಿವಮೂರ್ತಿ ಅವರ ಮೂಲಕ ಮನವಿ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಮುಖಂಡರಾದ ರಾಮು, ರವಿಕುಮಾರ್, ಅಭಿಜಿತ್, ರಮೇಶ್, ನೂರಾಳಸ್ವಾಮಿ, ಮಧುಸೂದನ್, ಶಿವಕುಮಾರ್, ಹೋರಾಟ ಸಮಿತಿ ಸಂಚಾಲಕ ಕೃಷ್ಣ ಇತರರಿದ್ದರು.

ಒಣಗುತ್ತಿರುವ ಫಸಲಿಗೆ ನೀರು ಹರಿಸಲು ಒತ್ತಾಯ

ಇಲ್ಲದಿದ್ದರೇ ಆತ್ಮಹತ್ಯೆಗೆ ಶರಣಾಗುವ ಎಚ್ಚರಿಕೆ ನೀಡಿದ ರೈತರು


ನೀರಿಲ್ಲದೇ ಒಣಗಿರುವ ಭತ್ತದ ಪೈರುಗಳನ್ನು ರೈತರು ಪ್ರದರ್ಶಿಸಿದರು.

ತಿ.ನರಸೀಪುರ, ಏ.28– ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದಲ್ಲಿ ಬೆಳೆಗಳಿಗೆ ನೀರಿಲ್ಲದೇ ಫಸಲು ಒಣಗುತ್ತಿದ್ದು, ರೈತರು ಮುಖ್ಯಮಂತ್ರಿ ಹಾಗೂ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಬೆಳೆಗಳಿಗೆ ನೀರು ಬಿಡದಿದ್ದರೆ ಆತ್ಮಹತ್ಯೆಗೆ ಶರಣಾಗುವ ಎಚ್ಚರಿಕೆ ನೀಡಿದ್ದಾರೆ.

ವರುಣ ಕ್ಷೇತ್ರದ ತಾಯೂರು ಗ್ರಾಮದ ರೈತರು ನೀರಾವರಿ ಇಲಾಖೆ ಅಧಿಕಾರಿಗಳ ಅಸಡ್ಡೆ ಹಾಗೂ ಬೇಜವಾಬ್ದಾರಿತನಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕೂಡಲೇ ಹುಲ್ಲಹಳ್ಳಿ ನಾಲೆಗೆ ನೀರು ಬಿಟ್ಟು ಬೆಳೆಗಳ ರಕ್ಷಣೆಗೆ ಮುಂದಾಗದಿದ್ದರೆ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಗುಡುಗಿದ್ದಾರೆ.

ತಾಯೂರು ಗ್ರಾಮದ ಜಮೀನೊಂದರಲ್ಲಿ ಒಣಗಿ ನಿಂತ ಭತ್ತದ ಪೈರನ್ನು ಪ್ರದರ್ಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಂಎಲ್‌ಸಿ ಡಾ. ಯತೀಂದ್ರ ವಿರುದ್ಧ ಕಿಡಿಕಾರಿ ಮಾತನಾಡಿದ ರೈತ ಮುಖಂಡ ಸತ್ಯನಾರಾಯಣ, ಈ ಭಾಗದಲ್ಲಿ 2 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದಿರುವ ಭತ್ತದ ಪೈರು ಒಣಗುತ್ತಾ ಬಂದಿದ್ದು, ನಂಜನಗೂಡು ವಿಭಾಗದ ನೀರಾವರಿ ಇಲಾಖೆ ಅಧಿಕಾರಿಗಳು ಹುಲ್ಲಹಳ್ಳಿ ನಾಲೆಗೆ ನೀರು ಬಿಡದೇ ರೈತರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆರೋಪಿಸಿದರು.

ಭತ್ತದ ಬೆಳೆಗೆ ನೀರು ಹಾಯಿಸಿ 15 ದಿನ ಕಳೆಯುತ್ತಾ ಬಂದಿವೆ. ನಾಲೆಯಲ್ಲಿ ನೀರನ್ನು ನಿಲ್ಲಿಸಲಾಗಿದೆ. ಹುಲ್ಲಹಳ್ಳಿ ನಾಲೆಯಲ್ಲಿ ಬೈಂಡಿಂಗ್ ಮಾಡಿ ನೀರು ಕೊಡಿ ಎಂದರೆ ಅಧಿಕಾರಿಗಳು ರೈತರ ಮನವಿಗೆ ಸ್ಪಂದಿಸುತ್ತಿಲ್ಲ. ಡಣಾಯಕನಪುರದವರೆಗೂ ರಾಂಪುರ ನಾಲೆ ನೀರು ಹರಿಯುತ್ತಿದೆ. ಆದರೆ ಹುಲ್ಲಹಳ್ಳಿ ಚಾನೆಲ್‌ನಿಂದ ತಾಯೂರು ಗ್ರಾಮದ ಜಮೀನುಗಳಿಗೆ 15 ದಿನಗಳಿಂದ ನೀರು ಹರಿಯುತ್ತಿಲ್ಲ ಎಂದು ನೀರಾವರಿ ಇಲಾಖೆ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನೀರಾವರಿ ಇಲಾಖೆ ಅಧಿಕಾರಿಗಳು ರೈತರ ಮನವಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ರಾಜಕಾರಣಿಗಳು ನಮ್ಮ ಮನವಿ ಪರಿಗಣಿಸುತ್ತಿಲ್ಲ. ಹೀಗಾದರೇ ಬಡ ರೈತರ ಕಷ್ಟ ಕೇಳುವವರು ಯಾರು ಎಂದು ಪ್ರಶ್ನಿಸಿದ ಅವರು, ಈಗಾಗಲೇ ಭತ್ತದ ಪೈರುಗಳು ಒಣಗಿ ನಿಂತಿವೆ. ಇನ್ನು 3 ದಿನಗಳ ಒಳಗೆ ನಾಲೆಯಲ್ಲಿ ನೀರು ಹರಿಸದಿದ್ದರೆ ಸಂಪೂರ್ಣವಾಗಿ ಭತ್ತದ ಪೈರು ಒಣಗಿ ಹೋಗುತ್ತದೆ. ದನಗಳು ಕೂಡ ಪೈರನ್ನು ಮೇಯಲು ಆಗುವುದಿಲ್ಲ. ಹಾಗಾಗಿ ಕೂಡಲೇ ನಂಜನಗೂಡು ವಿಭಾಗದ ನೀರಾವರಿ ಇಲಾಖೆ ಅಧಿಕಾರಿಗಳಿಗೆ ತಾಯೂರು ಗ್ರಾಮದ ವ್ಯಾಪ್ತಿಯ ವ್ಯವಸಾಯಕ್ಕೆ ನೀರು ಬಿಡಲು ಜನಪ್ರತಿನಿಧಿಗಳು ನಿರ್ದೇಶನ ನೀಡಬೇಕು. ಇಲ್ಲದಿದ್ದರೆ ರೈತರು ಆತ್ಮಹತ್ಯೆಯ ದಾರಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತ ಮುಖಂಡ ಚಾಮುಂಡಿ ನಾಯಕ ಮಾತನಾಡಿದರು. ಈ ವೇಳೆ ರೈತ ಮುಖಂಡರಾದ ಪುಟ್ಟನಾಯಕ, ಕಾಂಗ್ರೆಸ್ ಮುಖಂಡ ರೇವಣ್ಣನಾಯಕ, ವೆಂಕಟರಮಣನಾಯಕ, ನಾಗನಾಯಕ, ಶಿವಣ್ಣ, ಪವನ್, ಅಭಿಷೇಕ್, ಬಸವಣ್ಣ, ನಿಂಗರಾಜು, ಶಿವಣ್ಣ, ಚಿಕ್ಕಮಾದು, ಮಹೇಶ್, ಲೋಕೇಶ್ ಇದ್ದರು.

ಕಣಗಾಲು: ಜೆಡಿಎಸ್ ಮುಖಂಡರು ‘ಕೈ’ ಸೇರ್ಪಡೆ


ಜೆಡಿಎಸ್ ಮುಖಂಡರನ್ನು ನಿತಿನ್ ವೆಂಕಟೇಶ್ ಕಾಂಗ್ರೆಸ್ ಪಕ್ಷಕ್ಕೆ ಬರಮಾಡಿಕೊಂಡರು.

ಬೆಟ್ಟದಪುರ, ಏ.28– ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದ ಹಲವು ಜೆಡಿಎಸ್ ಮುಖಂಡರು ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ನಿತಿನ್ ವೆಂಕಟೇಶ್ ಸಮ್ಮುಖದಲ್ಲಿ ಮಂಗಳವಾರ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಕಣಗಾಲು ಗ್ರಾಮದಲ್ಲಿ ಜೆಡಿಎಸ್ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ನಿತಿನ್ ವೆಂಕಟೇಶ್, ನಮ್ಮ ತಂದೆ ಹಾಗೂ ಸಚಿವ ಕೆ.ವೆಂಕಟೇಶ್ ಅವರ ಅಭಿವೃದ್ಧಿ ಕಾರ್ಯ ಮೆಚ್ಚಿ ಬೇರೆ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿರುವುದು ಸಂತಸದ ವಿಷಯ. ಮುಂದಿನ ದಿನಗಳಲ್ಲಿ ತಾಲೂಕಿನ ಅಭಿವೃದ್ಧಿಗೆ ಮತ್ತಷ್ಟು ಶ್ರಮಿಸಲಾಗುವುದು ಎಂದರು.

ಈ ವೇಳೆ ಗ್ರಾಮದ ಮುಖಂಡರಾದ ಪ್ರಭಾಕರ್, ಮಧು, ಸ್ವಾಮಿಗೌಡ, ಸಂತೋಷ್, ರೇವಣ್ಣ, ಪ್ರಕಾಶ್, ಮಹಾದೇವ್, ಸ್ವಾಮಿಗೌಡ, ತಮ್ಮೇಗೌಡ, ಪುಟ್ಟರಾಜು, ಸುಬ್ಬಯ್ಯ ಸೇರಿದಂತೆ ನೂರಾರು ಮಂದಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ವಿವಿಧೆಡೆ 6.02 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿಗೆ ಚಾಲನೆ


ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ನಂಜನಗೂಡು, ಏ.28– ತಾಲೂಕಿನ ನವಿಲೂರು, ಮುದ್ದಹಳ್ಳಿ, ಸೂರಹಳ್ಳಿ ಮೂಲಕ ಹಲ್ಲರೆಗೆ ಸೇರುವ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ 4.57 ಕೋಟಿ ರೂ. ವೆಚ್ಚದಲ್ಲಿ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ದೇವಿರಮ್ಮನಹಳ್ಳಿ, ದೇವರಸನಹಳ್ಳಿ, ಕೆಬ್ಬೆಪುರ, ನವಿಲೂರು, ಮಸಗೆ ಗ್ರಾಮಗಳಲ್ಲಿ 6.02 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ 30 ವರ್ಷಗಳಿಂದ ರಸ್ತೆ ಅಭಿವೃದ್ಧಿ ಕಾಣದೆ ಹಳ್ಳಗಳು ಉಂಟಾಗಿ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಗ್ರಾಮಸ್ಥರು ರಸ್ತೆ ಅಭಿವೃದ್ಧಿಪಡಿಸುವಂತೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರು. ಅವರ ಮನವಿ ಮೇರೆಗೆ 4.57 ಕೋಟಿ ರೂ. ವೆಚ್ಚದಲ್ಲಿ 2.15 ಕಿಮೀ ಉದ್ದದ ಮುಖ್ಯರಸ್ತೆ ಅಭಿವೃದ್ಧಿ ಪಡಿಸಲಾಗುವುದು. ಇದರಿಂದ ಮುದ್ದಹಳ್ಳಿ, ನವಿಲೂರು, ಹಲ್ಲರೆ ಸೇರಿದಂತೆ ಹಲವು ಗ್ರಾಮಗಳ ಜನರ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ ಎಂದರು.

ಗ್ರಾಮೀಣ ಜನರಿಗೆ ಮೂಲ ಸೌಕರ್ಯ ಒದಗಿಸುವ ಸಲುವಾಗಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ತಾಲೂಕಿನ ದೇವಿರಮ್ಮನಹಳ್ಳಿ ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ 65 ಲಕ್ಷ, ದೇವರಸನಹಳ್ಳಿ ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ 25 ಲಕ್ಷ, ಮಸಗೆ ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ಸಾಮಾನ್ಯ ವರ್ಗದ ಬೀದಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ನಡೆಸಲಾಗುವುದು ಎಂದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಜಮೀನಿಗೆ ಹೋಗುವ ರಸ್ತೆಗಳ ಅಭಿವೃದ್ಧಿಗೆ ಸಾಕಷ್ಟು ಬೇಡಿಕೆ ಇದೆ. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರು ರೈತಪಥ ಯೋಜನೆ ಅಡಿ ಕ್ಷೇತ್ರಕ್ಕೆ 25 ಕೋಟಿ ವಿಶೇಷ ಅನುದಾನ ನೀಡುವುದಾಗಿ ಹೇಳಿದ್ದಾರೆ. ಶೀಘ್ರ ಅನುದಾನ ತಂದು ಜಮೀನಿಗೆ ಹೋಗುವ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಜೊತೆಗೆ ನವಿಲೂರು ಗ್ರಾಮದ ಕೆರೆ ಅಭಿವೃದ್ಧಿ ಪಡಿಸಿ ನೀರು ತುಂಬಿಸುವ ಮೂಲಕ ಈ ಭಾಗಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ವಿಪಕ್ಷಗಳು ಕಾಂಗ್ರೆಸ್ ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕುಂಠಿತವಾಗಿವೆ. ಅಭಿವೃದ್ಧಿ ಕೆಲಸಗಳಿಗೆ ಸರ್ಕಾರದಲ್ಲಿ ಹಣವಿಲ್ಲ ಎಂದು ಟೀಕಿಸುತ್ತಾರೆ. ಆದರೆ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಷ್ಟೇ ಅಭಿವೃದ್ಧಿಗೂ ಆದ್ಯತೆ ನೀಡಿ ಅನುದಾನ ನೀಡುತ್ತಿದ್ದು, ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅನುದಾನದ ಕೊರತೆ ಇಲ್ಲ ಎಂಬುದಕ್ಕೆ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳೇ ಸಾಕ್ಷಿ. ಕಳೆದ 3 ವರ್ಷಗಳಲ್ಲಿ 400 ಕೋಟಿಗಿಂತಲೂ ಹೆಚ್ಚಿನ ಅನುದಾನ ತಂದು ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ನಾಗರಾಜ್, ಮುಖಂಡರಾದ ಅಶೋಕ್, ರಾಜೇಶ್, ಮುದ್ದುಮಾದಶೆಟ್ಟಿ, ತಗಡೂರುನಾಯಕ, ರಘು, ಮಂಜುನಾಥ್, ಚೆಲುವಪ್ಪ, ಬಸವಣ್ಣ, ಲೋಕೋಪಯೋಗಿ ಇಲಾಖೆ ಎಇಇ ರಮೇಶ್, ಎಇ ಬಸವರಾಜು, ಪಂಚಾಯತ್ ರಾಜ್ ಇಲಾಖೆ ಎಇಇ ರಾಜು, ಎಇ ಶಿವಮೂರ್ತಿ, ಈರಯ್ಯ ಸೇರಿದಂತೆ ಹಲವರಿದ್ದರು.

ವನ್ಯಜೀವಿ ಬೇಟೆ: ಪರಾರಿಯಾಗಿದ್ದ ಆರೋಪಿ ಬಂಧನ



ಆರೋಪಿಯೊಂದಿಗೆ ಅರಣ್ಯ ಇಲಾಖೆ ಅಧಿಕಾರಿಗಳು

ಹನಗೋಡು, ಏ.28– ನಾಗರಹೊಳೆ ಉದ್ಯಾನವನದಲ್ಲಿ ವನ್ಯಜೀವಿಯನ್ನು ಬೇಟೆಯಾಡಲು ಹೊಂಚು ಹಾಕುತ್ತಿದ್ದ ಬೇಟೆಗಾರರ ಮೇಲೆ ಅರಣ್ಯ ಸಿಬ್ಬಂದಿ ದಾಳಿ ನಡೆಸಿದ ವೇಳೆ ಪರಾರಿಯಾಗಿದ್ದ ಆರೋಪಿಯನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಹುಣಸೂರು ತಾಲೂಕಿನ ಶಿಂಡೇನಹಳ್ಳಿಯ ಮಂಜೇಗೌಡರ ಪುತ್ರ ಶ್ರೀನಿವಾಸ ಉರುಫ್ ದಾಸ ಬಂಧಿತ ಆರೋಪಿ. ಈತ ತನ್ನ ಸ್ನೇಹಿತರೊಡಗೂಡಿ ಏ.11ರಂದು ರಾತ್ರಿ ನಾಗರಹೊಳೆ ಉದ್ಯಾನವನದ ವೀರನಹೊಸಹಳ್ಳಿ ವಲಯದಲ್ಲಿ ವನ್ಯಪ್ರಾಣಿ ಬೇಟೆಯಾಡಲು ಹೊಂಚು ಹಾಕುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ ವೇಳೆ ರಾಮೇಗೌಡ ಅಲಿಯಾಸ್ ಪಿಟೀಲು ರಾಮ ಸಿಕ್ಕಿ ಬಿದ್ದಿದ್ದ. ಈ ವೇಳೆ ಇನ್ನಿತರರು ಪರಾರಿಯಾಗಿದ್ದರು. ಆದರೆ ಆರೋಪಿ ಶ್ರೀನಿವಾಸ್ ಹೊನ್ನೇನಹಳ್ಳಿಯಲ್ಲಿರುವ ಬಗ್ಗೆ ಸುಳಿವರಿತ ಅರಣ್ಯಾಧಿಕಾರಿಗಳು ನಾಗರಹೊಳೆ ಹುಲಿ ಯೋಜನೆ ನಿರ್ದೇಶಕಿ ಪಿ.ಎ.ಸೀಮಾ, ಎಸಿಎಫ್ ಲಕ್ಷ್ಮಿಕಾಂತ್ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿ ಆರೋಪಿ ಬಂಧಿಸಿ ಆತನ ಮನೆಯಲ್ಲಿ ಶೋಧ ನಡೆಸಿದಾಗ 5 ಜಿಂಕೆ ಕೊಂಬುಗಳು, 1 ಕಾಡು ಕುರಿ ಕೊಂಬು ಹಾಗೂ ಒಂದು ಕಾಡು ಹಂದಿ ದವಡೆ ಮೂಳೆ ಪತ್ತೆಯಾಗಿದ್ದು, ಶ್ರೀನಿವಾಸನನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

ಇನ್ನು ತಲೆಮರೆಸಿಕೊಂಡಿರುವ ಶಿಂಡೇನಹಳ್ಳಿಯ ಯಶ್ವಂತ್, ನೇಗತ್ತೂರಿನ ಸತೀಶ್ ಪತ್ತೆಗೆ ಕ್ರಮ ವಹಿಸಲಾಗಿದೆ ಎಂದು ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ವಿನೋದ್‌ಗೌಡ.ಎಸ್, ಉಪವಲಯ ಅರಣ್ಯಾಧಿಕಾರಿಗಳಾದ ನವೀನ್ ಕುಮಾರ್, ಸಹನ ಎಸ್. ಪಾಟೀಲ್, ಶಿಲ್ಪ, ನವೀನ್ ಕುಮಾರ್, ಗಸ್ತು ಅರಣ್ಯಪಾಲಕರಾದ ವೆಂಕಟೇಶ್, ನಾರಾಯಣ್ ರಾವ್, ಶಮಂತ, ಅವಿನಾಶ್, ಶಿಲ್ಪ, ಅರಣ್ಯ ವೀಕ್ಷಕರಾದ ಗಾಯತ್ರಿ, ಶಾಂತ ಕುಮಾರ್, ಶಿವಕುಮಾರ್ ಭಾಗವಹಿಸಿದ್ದರು.

ತಮ್ಮೇಗೌಡ ನಿಧನ



ಕಂಪಲಾಪುರ, ಏ.28– ಇಲ್ಲಿಗೆ ಸಮೀಪದ ತೆಲಗಿನ ಕುಪ್ಪೆ ಗ್ರಾಮದ ನಿವಾಸಿ ತಮ್ಮೇಗೌಡ(106) ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೀಟ್ ಸ್ಟ್ರೋಕ್‌ಗೆ ಜನ ಮಾತ್ರವಲ್ಲ ಜಾನುವಾರುಗಳು ತತ್ತರ

● ನೆರಳು, ತಂಪಾದ ವಾತಾವರಣದಲ್ಲಿ ಅವುಗಳ ಪಾಲನೆಗೆ ಪಶುಸಂಗೋಪನಾ ಇಲಾಖೆ ಸಲಹೆ
● ಸಾಕುನಾಯಿಗಳನ್ನು ಬಿಸಿಲಲ್ಲಿ ಬಿಡಬಾರದು; ಬೀದಿ ನಾಯಿಗಳಿಗೆ ಕುಡಿಯುವ ನೀರು ಪೂರೈಸಲು ಮನವಿ

ಮೈಸೂರು, ಏ.28(ಎಂಟಿವೈ)– ಬಿಸಿಲಿನ ಬೇಗೆಯಿಂದ ಜನ ಮಾತ್ರವಲ್ಲದೆ ಜಾನುವಾರುಗಳು ತತ್ತರಿಸಿ ಹೋಗಿವೆ. ಈಗಾಗಲೇ ಎರಡು ಸಾಕು ಶ್ವಾನಗಳು, ಎರಡು ಎತ್ತು ಮೃತಪಟ್ಟಿವೆ. ಹಾಗಾಗಿ ಸೂಕ್ತ ಪಾಲನೆ ಮಾಡುವಂತೆ ಪಶುಸಂಗೋಪನಾ ಇಲಾಖೆ ಸೂಚನೆ ನೀಡಿದೆ.

ಈ ವರ್ಷ ಹವಾಮಾನದಲ್ಲಾದ ವೈಪರಿತ್ಯದಿಂದಾಗಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ತೇವಾಂಶ ರಹಿತ ಗಾಳಿಯ ವಾತಾವರಣದಲ್ಲಿ ಜನ, ಜಾನುವಾರುಗಳು ತತ್ತರಿಸುವಂತಾಗಿದೆ. ಈಗಾಗಲೇ ಪಶು ಸಂಗೋಪನಾ ಇಲಾಖೆ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಪಶು ವೈದ್ಯಕೀಯ ಆಸ್ಪತ್ರೆಗಳಿಗೆ ಸೂಚನೆ ನೀಡಿದ್ದು, ಹೀಟ್ ಸ್ಟ್ರೋಕ್‌ಗೆ ತುತ್ತಾಗುವ ಜಾನುವಾರು ಹಾಗೂ ಸಾಕು ಪ್ರಾಣಿಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.

ಬೆಳಗ್ಗೆ 11ರಿಂದ ಸಂಜೆ 4 ಗಂಟೆವರೆಗೆ ನಿಗಾ: ಬಿಸಿಲು ಹೆಚ್ಚಾಗಿರುವುದರಿಂದ ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಆ ಕಾರಣದಿಂದ ಗ್ರಾಮೀಣ ಭಾಗದಲ್ಲಿ ಜಾನುವಾರುಗಳನ್ನು ಮೇಯಿಸಲು ಅಥವಾ ಕೃಷಿ ಚಟುವಟಿಕೆಗಳಲ್ಲಿ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆವರೆಗೆ ತೊಡಗಿಸದಂತೆ ರೈತರಿಗೆ ಪಶುಸಂಗೋಪನಾ ಇಲಾಖೆ ಸೂಚಿಸಿದೆ. ಉಳುಮೆ ಮಾಡಲು ಬೆಳಗ್ಗೆ 6 ಗಂಟೆಯಿಂದ 10 ಗಂಟೆವರೆಗೂ ಅಥವಾ ಸಂಜೆ 4 ಗಂಟೆ ನಂತರ ಜಾನುವಾರುಗಳನ್ನು ಬಳಸಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಜಾನುವಾರುಗಳನ್ನು ಮೇಯಿಸಲು ಹೋಗುವವರು ಬಿಸಿಲಿನಿಂದ ಜಾನುವಾರುಗಳನ್ನು ರಕ್ಷಿಸಿಕೊಳ್ಳಬೇಕು. ಮನೆಯ ಬಳಿ ಚಪ್ಪರ ಅಥವಾ ನೆರಳಿರುವ ಮರದ ಕೆಳಗೆ ಜಾನುವಾರುಗಳನ್ನು ಕಟ್ಟಿಹಾಕುವಂತೆ ಸೂಚಿಸಲಾಗಿದೆ.

ತಣ್ಣನೆ ಗಾಳಿ, ತಣ್ಣೀರು ಮುಖ್ಯ: ಹೀಟ್ ಸ್ಟ್ರೋಕ್‌ನಿಂದ ಜಾನುವಾರುಗಳನ್ನು ರಕ್ಷಿಸಲು ಅವುಗಳಿಗೆ ನೆರಳು, ನೀರು ಹಾಗೂ ಗಾಳಿ ಬಹುಮುಖ್ಯವಾಗಿದೆ. ಬಿಸಿಲಿರುವ ಸಮಯದಲ್ಲಿ ಜಾನುವಾರುಗಳಿಗಿರುವ ತೊಟ್ಟಿಯಲ್ಲಿ ತುಂಬಿರುವ ನೀರು ಬಿಸಿಲಿನಿಂದ ಬಿಸಿಯಾಗಿದ್ದರೆ, ಅದನ್ನು ಜಾನುವಾರು ಕುಡಿಯುವುದಿಲ್ಲ. ಹಾಗಾಗಿ ತಾಜಾ ತಣ್ಣೀರನ್ನೆ ಕುಡಿಯಲು ಇಡಬೇಕು. ಪದೇ ಪದೇ ನೀರು ಕುಡಿಸಬೇಕು. ಅಲ್ಲದೆ, ತಂಪಾದ ಗಾಳಿ ಬೀಸುವಂತಹ ಸ್ಥಿತಿಯಲ್ಲಿ ಜಾನುವಾರುಗಳನ್ನು ಕಟ್ಟಿಹಾಕಬೇಕು.

ಕುರಿ ಮಂದೆಗೂ ಭೀತಿ: ಕುರಿ ಮಂದೆ ವಿಷಯದಲ್ಲೂ ಎಚ್ಚರ ವಹಿಸಲು ಸೂಚಿಸಲಾಗಿದೆ. ಕುರಿ ಮೈಮೇಲೆ ಹೆಚ್ಚಿನ ಪ್ರಮಾಣದ ಉಣ್ಣೆ ಇದ್ದರೆ, ಅದು ಬಿಸಿಲಿನಿಂದಾಗಿ ಉಷ್ಣಾಂಶವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರಿಂದ ದೇಹದಲ್ಲಿ ನಿರ್ಜಲೀಕರಣವಾಗಿ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಉಣ್ಣೆಯನ್ನು ಕತ್ತರಿಸಬೇಕು. ಬಿಸಿಲಿನಲ್ಲಿ ಕುರಿ ಮಂದೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕರೆದೊಯ್ಯಬಾರದು ಎಂದು ಪಶುವೈದ್ಯರು ತಿಳಿಸಿದ್ದಾರೆ.



ಧನ್ವಂತ್ರಿ ರಸ್ತೆಯಲ್ಲಿರುವ ಸರ್ಕಾರಿ ಪಶು ವೈದ್ಯಕೀಯ ಆಸ್ಪತ್ರೆಯಲ್ಲಿ ಸಾಕು ನಾಯಿಗೆ ಚಿಕಿತ್ಸೆ

ಬೀದಿನಾಯಿಗಳಿಗೆ ನೀರಿನ ವ್ಯವಸ್ಥೆ

ಬೇಸಿಗೆಯಲ್ಲಿ ಪ್ರಮುಖವಾಗಿ ಬೀದಿನಾಯಿಗಳಿಗೆ ಪ್ರಾಣಿ ಪ್ರಿಯರು, ಸಾರ್ವಜನಿಕರು ಸಹಾಯಹಸ್ತ ಚಾಚಬೇಕಿದೆ. ವಿವಿಧೆಡೆ ಬೀದಿ ನಾಯಿಗಳು ಬಿಸಿಲಿನ ತಾಪಮಾನಕ್ಕೆ ಪ್ರಾಣ ಕಳೆದುಕೊಳ್ಳುತ್ತಿವೆ. ಹೀಟ್ ಸ್ಟ್ರೋಕ್‌ನಿಂದ ರಕ್ಷಿಸಲು ಅವುಗಳಿಗೆ ಕುಡಿಯಲು ನೀರು ಪೂರೈಸಬೇಕಾಗಿದೆ. ರಸ್ತೆ, ಮನೆ ಮುಂದೆ ನೆರಳಿರುವ ಜಾಗದಲ್ಲಿ ಚಿಕ್ಕ ಚಿಕ್ಕ ಬಟ್ಟಲು ಇಟ್ಟು ನಾಯಿಗಳಿಗೆ ನೀರು ಪೂರೈಸಿದರೆ, ಅವುಗಳ ಜೀವ ಉಳಿಸಬಹುದಾಗಿದೆ.

ಜಾನುವಾರುಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ



ಈ ಬಾರಿ ಬಿಸಿಲಿನ ತಾಪಮಾನ ಹೆಚ್ಚಾಗಿದೆ. ಜನರಂತೆ ಜಾನುವಾರುಗಳೂ, ಪಕ್ಷಿ ಸಂಕುಲವು ಬಿಸಿಲಿನ ಬೇಗೆಗೆ ತತ್ತರಿಸಿವೆ. ಸರ್ಕಾರದ ಸೂಚನೆ ಮೇರೆಗೆ ಜಿಲ್ಲೆಯಲ್ಲಿರುವ 204 ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ಹೀಟ್‌ಸ್ಟ್ರೋಕ್‌ಗೆ ಒಳಗಾದ ಜಾನುವಾರು ಹಾಗೂ ಸಾಕು ಪ್ರಾಣಿಗಳ ಚಿಕಿತ್ಸೆಗೆ ಬೇಕಾದ ಔಷಧಿ ಸಂಗ್ರಹಿಸಲಾಗಿದೆ. ಬಿಸಿಲಿನ ತಾಪದಿಂದ ಜಾನುವಾರುಗಳನ್ನು ರಕ್ಷಿಸಲು ಹೆಚ್ಚಿನ ಪ್ರಮಾಣದ ತಣ್ಣೀರು ಕುಡಿಸಬೇಕು. ನೆರಳಿನಲ್ಲಿ ಕಟ್ಟಿಹಾಕಬೇಕು. ಹೆಚ್ಚು ಬಿಸಿಲಿನಲ್ಲಿದ್ದರೆ ನಿರ್ಜಲೀಕರಣವಾಗಿ ಕಿಡ್ನಿ ಸಮಸ್ಯೆಯಾಗುತ್ತದೆ. ಲವಣಾಂಶ ಕಡಿಮೆಯಾಗುತ್ತದೆ. ರೋಗನಿರೋಧಕ ಶಕ್ತಿ ಕಡಿಮೆಯಾಗಿ ಸಾವನ್ನಪ್ಪುವ ಸಾಧ್ಯತೆ ಇದೆ. ಈ ಕಾರಣದಿಂದ ಅಗತ್ಯ ಔಷಧಿ ದಾಸ್ತಾನು ಇಟ್ಟುಕೊಳ್ಳಲಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳು, ಜಿ.ಪಂ ಸಿಇಓ ಸಭೆ ನಡೆಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಜಾನುವಾರುಗಳಲ್ಲಿ ಏನಾದರೂ ಅನಾರೋಗ್ಯದ ಲಕ್ಷಣ ಕಂಡು ಬಂದರೆ ಪಶುವೈದ್ಯರಿಂದ ತಪಾಸಣೆ ಮಾಡಿಸಲು ಮುಂದಾಗಬೇಕು.

– **ಡಾ. ನಾಗರಾಜ್,** ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ.

ಸಾಕು ಶ್ವಾನಗಳಿಂದ ಇದನ್ನು ಮಾಡಿಸಬೇಡಿ

ಹೀಟ್ ಸ್ಟ್ರೋಕ್ ಸಾಕು ಶ್ವಾನಗಳ ಮೇಲೆ ತೀವ್ರ ರೀತಿಯಲ್ಲಿ ದುಷ್ಪರಿಣಾಮ ಬೀರಲಿದೆ. ಮುದ್ದಾಗಿ ಸಾಕಿರುವ ವಿವಿಧ ತಳಿಯ ಶ್ವಾನಗಳು ಸೂಕ್ಷ್ಮವಾಗಿದ್ದು, ಅವುಗಳನ್ನು ಬಿಸಿಲಿನಲ್ಲಿ ವಾಯುವಿಹಾರಕ್ಕೆ ಕರೆದೊಯ್ಯಬಾರದು. ಬೆಳಗ್ಗೆ 8 ಗಂಟೆ ನಂತರ ಸಾಕು ನಾಯಿಗಳು ಹೀಟ್‌ಸ್ಟ್ರೋಕ್‌ಗೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬೆಳಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ಸಾಕು ಶ್ವಾನಗಳನ್ನು ವಾಕ್ ಮಾಡಿಸದಂತೆ ಸೂಚಿಸಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ನಟ ಚೇತನ್ ಅಹಿಂಸಾ ತಾಕತ್ತಿದ್ದರೆ ಚುನಾವಣೆಗೆ ಸ್ಪರ್ಧಿಸಿ ನೋಡಲಿ!

ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಸವಾಲು

ಮೈಸೂರು, ಏ.28(ಎಂಕೆ)– ನಟ ಚೇತನ್ ಅಹಿಂಸಾಗೆ ತಾಕತ್ತಿದ್ದರೆ ಯಾವುದಾದರೊಂದು ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಲಿ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.




ನಿಖಿಲ್

ಡಾ.ರಾಜಕುಮಾರ್ ಸ್ಮಾರಕಕ್ಕೆ ಸರ್ಕಾರ ನೀಡಿರುವ ಜಾಗ ಕುರಿತು ಹಾಗೂ ಮೂರು ಬಾರಿ ಸೋತವರಿಗೆ ಯೋಗ್ಯತೆ ಇದೆಯಾ ಎಂದು ಸಾಮಾಜಿಕ ಜಾಲತಾಣದಲ್ಲಿ ನಟ ಚೇತನ್ ಅಹಿಂಸಾ ಹೇಳಿಕೆಗೆ ಮೈಸೂರು ತಾಲೂಕಿನ ಲಲಿತಾದ್ರಿಪುರದಲ್ಲಿ ತಿರುಗೇಟು ನೀಡಿದ ನಿಖಿಲ್ ಕುಮಾರಸ್ವಾಮಿ, ಕನ್ನಡದ ಮೇರು ನಟರಾದ ಡಾ.ರಾಜಕುಮಾರ್, ವಿಷ್ಣುವರ್ಧನ್ ಹಾಗೂ ಅಂಬರೀಶ್ ಅವರುಗಳು ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇದೇ ಕಾರಣದಿಂದ ಇವರೆಲ್ಲ ನಿಧನರಾದಾಗ ರಾಜ್ಯ ಸರ್ಕಾರ ಸೂಕ್ತ ಗೌರವ ನೀಡಿದೆ ಎಂದರು.

ಡಾ.ರಾಜಕುಮಾರ್ ಅವರು ನಿಧನರಾದ ಸಂದರ್ಭದಲ್ಲಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿಯವರು ಸ್ಮಾರಕ ನಿರ್ಮಾಣಕ್ಕೆ ಜಾಗ ನೀಡಿದರು. ಅಂಬರೀಶಣ್ಣ ನಿಧನರಾದಾಗಲೂ ಕುಮಾರಣ್ಣ ಸಿಎಂ ಆಗಿದ್ದರು. ಆಗಲೂ ಅಂಬರೀಶ್ ಅವರಿಗೆ ಸೂಕ್ತ ಗೌರವ ನೀಡಿದ್ದರು. ಇದರಲ್ಲಿ ತಪ್ಪೇನಿದೆ. ಚೇತನ್ ಅಹಿಂಸಾ ಸಾಮಾಜಿಕ ಜಾಲತಾಣದಲ್ಲಿ ಅದು ಇದು ಬರೆದುಕೊಂಡು ಇದ್ದಾರೆ. ಇದರ ಬದಲು ಅವರಿಗೆ ತಾಕತ್ತು ಇದ್ದರೆ ಯಾವುದಾದರೊಂದು ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಲಿ ಎಂದು ಪಂಥಾಹ್ವಾನ ನೀಡಿದರು.

ಟಿಕೆ ಬಡಾವಣೆಯಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟ

ಮನೆಯಲ್ಲಿದ್ದವರು ತಕ್ಷಣ ಹೊರ ಓಡಿಬಂದ ಹಿನ್ನೆಲೆಯಲ್ಲಿ ತಪ್ಪಿದ ಅನಾಹುತ



ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಬೆಂಕಿ ಉರಿಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಏ.28(ಪಿಎಂ)– ಅಡುಗೆ ಅನಿಲದ ಸಿಲಿಂಡರ್ ಸ್ಫೋಟಗೊಂಡು ಮನೆಯಲ್ಲಿದ್ದ ಸಾಮಗ್ರಿಗಳು ಬೆಂಕಿಗಾಹುತಿಯಾದ ಘಟನೆ ಟಿಕೆ ಬಡಾವಣೆಯ 9ನೇ ಮೇನ್‌ನ 4ನೇ ಕ್ರಾಸ್‌ನಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಗ್ಯಾಸ್ ಸಿಲಿಂಡರ್‌ನ ಪೈಪ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ಮನೆಯಲ್ಲಿದ್ದವರು ಹೊರ ಓಡಿಬಂದ ಹಿನ್ನೆಲೆಯಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಅಡುಗೆ ಮನೆಯಿಂದ ಹಾಲ್‌ಗೆ ಸ್ಟವ್ ಮತ್ತು ಸಿಲಿಂಡರ್ ತಂದು ಅಡುಗೆ ಮಾಡುವ ವೇಳೆ ಈ ಘಟನೆ ನಡೆದಿದೆ.

ಫ್ರಿಡ್ಜ್ ಸೇರಿದಂತೆ ಹಾಲ್‌ನಲ್ಲಿದ್ದ ಹಲವು ಸಾಮಗ್ರಿಗಳು ಬೆಂಕಿಗಾಹುತಿಯಾಗಿವೆ. ಅಮೃತೇಶ್ ಎಂಬುವರ ಮನೆಯಲ್ಲಿ ಈ ದುರ್ಘಟನೆ ನಡೆದಿದ್ದು, ಮನೆಯೊಳಗಿದ್ದವರು ಹೊರಗೆ ಬಂದಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ಮೊದಲ ಅಂತಸ್ತಿನ ಮನೆಯಲ್ಲಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಬೆಂಕಿ ಉರಿಯಲಾರಂಭಿಸಿದ್ದು, ಇದರಿಂದ ಸ್ಥಳೀಯ ನಿವಾಸಿಗಳು ಕೆಲಕಾಲ ಆತಂಕಗೊಂಡಿದ್ದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸರಸ್ವತಿಪುರಂ ಅಗ್ನಿ ಶಾಮಕ ಠಾಣೆ ಸಿಬ್ಬಂದಿ ಕಾರ್ಯಾಚರಣೆ ನಡೆಸುವ ಮೂಲಕ ಬೆಂಕಿ ನಂದಿಸಿದರು. ಸ್ಥಳದಲ್ಲಿ ಸರಸ್ವತಿಪುರಂ ಪೊಲೀಸರು ಹಾಜರಿದ್ದು, ಬೆಂಕಿ ನಂದಿಸುವ ಕಾರ್ಯಾಚರಣೆಗೆ ಸಹಕರಿಸಿದರು.

ಮಕ್ಕಳ ಡಿಜಿಟಲ್ ವ್ಯಸನಕ್ಕೆ ಸರ್ಕಾರ ಮದ್ದು

ಶಾಲೆಗಳಲ್ಲಿ ಪ್ರತಿನಿತ್ಯ 10–15 ನಿಮಿಷ ಪತ್ರಿಕೆ ಓದುವುದು ಕಡ್ಡಾಯ.!

ಬೆಂಗಳೂರು: ಮಕ್ಕಳಲ್ಲಿ ಹೆಚ್ಚುತ್ತಿರುವ ಡಿಜಿಟಲ್ ವ್ಯಸನವನ್ನು ನಿಯಂತ್ರಿಸಲು ಶಿಕ್ಷಣ ಇಲಾಖೆ ಹೊಸ ಕ್ರಮ ಕೈಗೊಂಡಿದೆ. ಇನ್ನು ಮುಂದೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪ್ರತಿದಿನ 10 ರಿಂದ 15 ನಿಮಿಷಗಳ ಕಾಲ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಕ್ರಮದಿಂದ ವಿದ್ಯಾರ್ಥಿಗಳ ಓದುವ ಅಭ್ಯಾಸವನ್ನು ಉತ್ತೇಜಿಸಿ, ಡಿಜಿಟಲ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಡಿಜಿಟಲ್ ಯುಗದಲ್ಲಿ ಮಕ್ಕಳು ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಮತ್ತು ಇಂಟರ್ನೆಟ್ ವ್ಯಸನಕ್ಕೆ ತುತ್ತಾಗುತ್ತಿರುವುದನ್ನು ಗಮನಿಸಿದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಈ ಕುರಿತು ಶಿಫಾರಸು ಮಾಡಿತ್ತು.

ಈ ಶಿಫಾರಸಿನ ಆಧಾರದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ನಿರ್ಧಾರಕ್ಕೆ ಅನುಮೋದನೆ ನೀಡಿದ್ದಾರೆ.



ಮಕ್ಕಳನ್ನು ಮತ್ತೆ ಓದಿನ ಕಡೆಗೆ ಸೆಳೆಯುವುದು ಮತ್ತು ಅವರಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಪ್ರೋತ್ಸಾಹಿಸುವುದು ಇದರ ಮುಖ್ಯ ಗುರಿಯಾಗಿದೆ.

ಶಿಕ್ಷಣ ಇಲಾಖೆಯ ಆದೇಶದಂತೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಿಗೂ ಈ ನಿಯಮ ಅನ್ವಯಿಸುತ್ತದೆ. ಅಷ್ಟೇ ಅಲ್ಲದೆ, ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ, ಸಂತ ರೋಷಾ, ಮತ್ತು ಎಲ್ಲಾ ಹಾಸ್ಟೆಲ್‌ಗಳಲ್ಲೂ ಈ ಕ್ರಮ ಕಡ್ಡಾಯವಾಗಿದೆ. ಆದೇಶ ಉಲ್ಲಂಘಿಸಿದ ಶಾಲೆಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ಪ್ರತಿದಿನ ಬೆಳಗಿನ ಪ್ರಾರ್ಥನೆಯ ನಂತರ ಕನಿಷ್ಠ 10 ರಿಂದ 15 ನಿಮಿಷಗಳ ಕಾಲ ವಿದ್ಯಾರ್ಥಿಗಳು ಕನ್ನಡ ದಿನಪತ್ರಿಕೆಯನ್ನು ಓದಬೇಕು. ಈ ಸಮಯದಲ್ಲಿ ಪತ್ರಿಕಾ ವಾಚನಕ್ಕೆ ಪ್ರತ್ಯೇಕ ಕಾಲಾವಕಾಶವನ್ನು ವೇಳಾಪಟ್ಟಿಯಲ್ಲಿ ನಮೂದಿಸಬೇಕು. ವಿದ್ಯಾರ್ಥಿಗಳು ತಮ್ಮ ಇಷ್ಟದ ಯಾವುದೇ ಕನ್ನಡ ದಿನಪತ್ರಿಕೆಯಾದರೂ ಆರಿಸಿಕೊಳ್ಳಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ನಿಷೇಧಿಸುವ ಬಗ್ಗೆ ಬಜೆಟ್‌ನಲ್ಲಿ ಘೋಷಿಸಿದ್ದು, ಅದರ ಮುಂದಿನ ಭಾಗವಾಗಿ ಈ ಶೈಕ್ಷಣಿಕ ಸುಧಾರಣೆ ಜಾರಿಗೆ ಬಂದಿದೆ.

ಈ ನೂತನ ನಿಯಮವು ಮಕ್ಕಳನ್ನು ಬಾಹ್ಯ ಜಗತ್ತಿನ ವಿದ್ಯಮಾನಗಳೊಂದಿಗೆ ಸಂಪರ್ಕಿಸಲು ಮತ್ತು ಅವರಲ್ಲಿ ಓದುವ ಆಸಕ್ತಿ ಮೂಡಿಸಲು ಸಹಕಾರಿಯಾಗಲಿದೆ ಎಂದು ಶಿಕ್ಷಣ ಇಲಾಖೆ ವಿಶ್ವಾಸ ವ್ಯಕ್ತಪಡಿಸಿದೆ.

92 ಶತಕೋಟಿ ಡಾಲರ್‌ಗೇರಿದ ರಕ್ಷಣಾ ಬಜೆಟ್

ವಿಶ್ವದ ಟಾಪ್ 5 ಎಲೈಟ್ ಗ್ರೂಪ್ ಸೇರಿದ ಭಾರತ

ನವದೆಹಲಿ: ರಕ್ಷಣಾ ವಿಭಾಗದಲ್ಲಿ ಭಾರತ ಐತಿಹಾಸಿಕ ಮೈಲುಗಲ್ಲು ಸಾಧಿಸಿದ್ದು, ದೇಶದ ರಕ್ಷಣಾ ಬಜೆಟ್ 92 ಶತಕೋಟಿ (ಸುಮಾರು 7.6 ಲಕ್ಷ ಕೋಟಿ) ಗೇರಿದೆ.

ಈ ಮೂಲಕ ಭಾರತ ಟಾಪ್ 5 ಎಲೈಟ್ ಗ್ರೂಪ್ ಸೇರಿದ್ದು, ಅತೀ ಹೆಚ್ಚು ರಕ್ಷಣಾ ಬಜೆಟ್ ಹೊಂದಿರುವ ಜಗತ್ತಿನ ಐದನೇ ರಾಷ್ಟ್ರ ಎಂಬ ಕೀರ್ತಿಗೆ ಭಾಜನವಾಗಿದೆ.

ಸ್ಟಾಕ್‌ಹೋಮ್ ಇಂಟರ್ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಎಸ್‌ಐಪಿಆರ್‌ಐ) ಸೋಮವಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ, 2025 ರಲ್ಲಿ ಭಾರತವು ವಿಶ್ವದ ಐದನೇ ಅತಿದೊಡ್ಡ ಮಿಲಿಟರಿ ಖರ್ಚು ಮಾಡುವ ದೇಶವಾಗಿ ಹೊರಹೊಮ್ಮಿತು. ಅಮೆರಿಕ, ಚೀನಾ, ರಷ್ಯಾ ಮತ್ತು ಜರ್ಮನಿಯ ನಂತರ, ಜಾಗತಿಕ ಮಿಲಿಟರಿ ವೆಚ್ಚದ ಶೇಕಡಾ 3.2ರಷ್ಟನ್ನು ಹೊಂದಿದೆ.

ಭಾರತದ ಮಿಲಿಟರಿ ವೆಚ್ಚವು ಕಳೆದ ವರ್ಷ 92.1 ಬಿಲಿಯನ್ ಡಾಲರ್‌ಗಳನ್ನು ತಲುಪಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 8.9 ರಷ್ಟು ಏರಿಕೆಯಾಗಿದೆ. ಯುದ್ಧ ಸನ್ನದ್ಧತೆಯನ್ನು ಕಾಪಾಡಿಕೊಳ್ಳಲು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಸಮಯದಲ್ಲಿ ಸಶಸ್ತ್ರ ಪಡೆಗಳು ಕೈಗೊಂಡ ತುರ್ತು ಖರೀದಿಗಳು ಸೇರಿದಂತೆ, ರಕ್ಷಣಾ ಸನ್ನದ್ಧತೆಯ ಹೆಚ್ಚಳದ ನಡುವೆ ಈ ಹೆಚ್ಚಳ ಕಂಡುಬಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನಾಳೆ ಮೈಸೂರಲ್ಲಿ ಬಡಮಕ್ಕಳ ಶಿಕ್ಷಣ ಕಸಿಯುತ್ತಿರುವ ಬಗ್ಗೆ ವಿಚಾರ ಸಂಕಿರಣ

ಮೈಸೂರು, ಏ.28(ಜಿಎ)–ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆಯಿಂದ ಬಿ.ಆರ್.ಅಂಬೇಡ್ಕರ್ 135ನೇ ಜನ್ಮದಿನಾಚರಣೆ ಅಂಗವಾಗಿ ಏ.30ರಂದು ಬೆಳಿಗ್ಗೆ 10.30ಕ್ಕೆ ನಗರದ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಬಡಮಕ್ಕಳ ಶಿಕ್ಷಣ ಕಸಿಯುತ್ತಿರುವ ವಿಷಯ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಂಘಟನಾ ಸಂಚಾಲಕ ಯಡದೊರೆ ಮಹದೇವಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಆರ್.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಉಪಾಧ್ಯಕ್ಷ ವಿ.ಎನ್.ರಾಜಶೇಖರ್ ವಿಷಯ ಮಂಡಿಸುವರು. ಪ್ರೊ.ಆನಂದ, ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಮೈಸೂರು ವಿಶ್ವವಿದ್ಯಾಲಯ ದಲಿತ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಹೆಚ್.ಪಿ.ವಿಶ್ವಪ್ರಸಾದ್, ಸಮಿತಿ ಜಿಲ್ಲಾ ಸಂಚಾಲಕ ಕೆ.ವಿ.ದೇವೇಂದ್ರ ಅತಿಥಿಗಳಾಗಿ ಪಾಲ್ಗೊಳ್ಳುವರು. ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಅಧ್ಯಕ್ಷತೆ ವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಜಿಲ್ಲಾ ಖಜಾಂಚಿ ಶಿವಮೂರ್ತಿ ಶಂಕರಪುರ, ವಿವಿಧ ತಾಲ್ಲೂಕು ಸಮಿತಿ ಪದಾಧಿಕಾರಿಗಳಾದ ಸೋಮನಾಯಕ, ಚಿಕ್ಕಲಿಂಗಯ್ಯ, ರವಿಕುಮಾರ್ ಏಚಗಳ್ಳಿ, ಗೋಪಾಲಕೃಷ್ಣ ಉಪಸ್ಥಿತರಿದ್ದರು.

ವಿವಿಧ ಯೋಜನೆಗಳಿಗೆ ಖಾಸಗಿ ಕಂಪನಿಗಳು ಪಾಲಿಕೆಗೆ ಸಹಭಾಗಿತ್ವ ನೀಡಬಹುದು

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್

ಮೈಸೂರು,ಏ.28(ಪಿಎಂ)– ಅನೇಕ ಯೋಜನೆಗಳಿಗೆ ಖಾಸಗಿ ಕಂಪನಿಗಳು ಮೈಸೂರು ಮಹಾನಗರ ಪಾಲಿಕೆಗೆ ಸಹಭಾಗಿತ್ವ ನೀಡಬಹುದು ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹೇಳಿದರು.

ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಹಾಲ್‌ನಲ್ಲಿ ಮೈಸೂರು ಮಹಾನಗರ ಪಾಲಿಕೆ, ನರೆಡ್ಕೊ, ಕ್ರೆಡಾಯ್, ಬಿಎಐ ಮೈಸೂರು ಕೇಂದ್ರದ ಸಂಯುಕ್ತಾಶ್ರಯದಲ್ಲಿ 'ಸ್ವಚ್ಛ, ಹಸಿರು ಮತ್ತು ಗ್ರೇಟರ್ ಮೈಸೂರು ನಿರ್ಮಾಣ; ವಿಷನ್ ಮೈಸೂರು 2050' ಶೀರ್ಷಿಕೆಯಡಿ ಮಂಗಳವಾರ ಹಮ್ಮಿಕೊಂಡಿದ್ದ ಪಾಲುದಾರರ ಸಭೆಯಲ್ಲಿ ಅವರು ಮಾತನಾಡಿದರು.



ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಹಾಲ್‌ನಲ್ಲಿ ವಿಷನ್ ಮೈಸೂರು ಕುರಿತು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿದರು.

ಭವಿಷ್ಯದ ಮೈಸೂರು ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಾಲಿಕೆ ವತಿಯಿಂದ ನಾನಾ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಎಲ್ಲಾ ಯೋಜನೆಗಳಿಗೂ ಸರ್ಕಾರವೇ ಹಣ ಒದಗಿಸುವುದು ಕಷ್ಟಸಾಧ್ಯ. ಖಾಸಗಿ ಸಂಸ್ಥೆಗಳೂ ಸಹಭಾಗಿತ್ವದ ಯೋಜನೆಗಳಿಗೆ ಹಣಕಾಸು ಒದಗಿಸಬಹುದು. ನಗರದಲ್ಲಿ ಸದ್ಯ ಘನತ್ಯಾಜ್ಯ, ಜೈವಿಕ ಅನಿಲ ಉತ್ಪಾದನೆ, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಬಹುಮಹಡಿ ವಾಹನ ಪಾರ್ಕಿಂಗ್ ವ್ಯವಸ್ಥೆಯಂತಹ ಯೋಜನೆಗಳಿಗೆ ಸಹಭಾಗಿತ್ವದ ಅಗತ್ಯವಿದೆ. ಎಲ್ಲಾ ಕಟ್ಟಡಗಳಿಗೆ ಸೌರವಿದ್ಯುತ್ ಘಟಕ ಅಳವಡಿಕೆ ಮೂಲಕ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಇಂತಹ ವಿನೂತನ ಯೋಜನೆಗಳಿಗೆ ಖಾಸಗಿ ಕಂಪನಿಗಳು ಸಹಭಾಗಿತ್ವ ಒದಗಿಸಬಹುದು ಎಂದರು.

ನಗರದಲ್ಲಿ ಮಾದರಿಯಾದ ಕೆಲವೊಂದು ಬದಲಾವಣೆಗಳನ್ನು ತಂದು ಸ್ವಚ್ಛ ಸರ್ವೇಕ್ಷಣೆ ಅಭಿಯಾನದಲ್ಲಿ ಮತ್ತೆ ಉನ್ನತ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಕೆಲವೊಂದು ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ನಗರದ ಸ್ವಚ್ಛತೆಗೆ ಇನ್ನಷ್ಟು ಸಾರ್ವಜನಿಕ ಜಾಗೃತಿಯ ಅಗತ್ಯವಿದೆ. ನಾಗರಿಕ ಸೊಸೈಟಿಗಳ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಮೈಸೂರಿನ ಸ್ವಚ್ಛತೆಯನ್ನು ಇನ್ನಷ್ಟು ಉತ್ತಮಗೊಳಿಸಿ, ಪ್ರವಾಸಿಗರನ್ನು ಆಕರ್ಷಿಸಬಹುದು ಎಂದು ಹೇಳಿದರು.

ಹಸಿ ತ್ಯಾಜ್ಯವನ್ನು ಬಯೋಗ್ಯಾಸ್ ಆಗಿ ಪರಿವರ್ತಿಸುವ ಯೋಜನೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಎರಡು ವರ್ಷಗಳಲ್ಲಿ ಯೋಜನೆ ಪೂರ್ಣಗೊಳ್ಳಲಿದೆ. ಖಾಸಗಿ ಕಂಪನಿಗಳು ಪ್ರಮುಖ ರಸ್ತೆ, ವೃತ್ತ, ಉದ್ಯಾನಗಳನ್ನು ದತ್ತು ಪಡೆದು ನಿರ್ವಹಣೆ ಅಥವಾ ಅಭಿವೃದ್ಧಿಗೊಳಿಸಬಹುದು. ಜೊತೆಗೆ ತಮ್ಮ ಬ್ರಾಂಡಿಂಗ್ ಚಟುವಟಿಕೆಗಳಿಗೂ ಬಳಸಲು ಅವಕಾಶವಿದೆ. ಈಗಾಗಲೇ ಹಲವು ಪ್ರಮುಖ ಕಂಪನಿಗಳು ಇದನ್ನು ಬಳಕೆ ಮಾಡಿಕೊಳ್ಳುತ್ತಿವೆ ಎಂದು ತಿಳಿಸಿದರು.

ಹಸಿರೀಕರಣಕ್ಕಾಗಿ ಈ ಸಾಲಿನಲ್ಲಿ ನಾನಾ ಸಂಸ್ಥೆಗಳ ಸಹಯೋಗದಲ್ಲಿ ಮಿಯಾವಕಿ ಶೈಲಿಯಲ್ಲಿ 15 ಸಾವಿರ ಮರಗಳನ್ನು ನೆಟ್ಟು ಅರಣ್ಯೀಕರಣ ಮಾಡಲು ಯೋಜನೆ ರೂಪಿಸಲಾಗಿದೆ. ಕಳೆದ ವರ್ಷ ನಾನಾ ಕಡೆಗಳಲ್ಲಿ ಇದೇ ಶೈಲಿಯಲ್ಲಿ 30 ಸಾವಿರ ಸಸಿಗಳನ್ನು ನೆಡಲಾಗಿದೆ. ತನ್ಮೂಲಕ ಮೈಸೂರಿನಲ್ಲಿ ಹಸಿರು ಹೊದಿಕೆ ಹೆಚ್ಚಿಸಲಾಗುತ್ತಿದೆ ಎಂದರು.

ಬಿಎಐ ಮೈಸೂರು ಘಟಕದ ಅಧ್ಯಕ್ಷ ಕೆ.ಆರ್.ಪ್ರಭಾಕರ್ ರಾವ್, ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ. ಲಿಂಗರಾಜು, ಜಿಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಕ್ರೆಡಾಯ್ ಮೈಸೂರು ಘಟಕದ ಅಧ್ಯಕ್ಷ ಹರೀಶ್‌ಶೆಣೈ, ತಾತಯ್ಯ ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್ ಸೇರಿದಂತೆ ನಾನಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಜರಿದ್ದರು.

ತ್ರಿವೇಣಿ, ಕೆಎಸ್‌ಎನ್, ದೇವನೂರು ಮಹಾದೇವರ ಬರಹ ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆ ಭಾಗ

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಅಭಿಮತ

ಮೈಸೂರು, ಏ.28(ಎಂಕೆ)– ಹಿರಿಯ ಸಾಹಿತಿಗಳಾದ ತ್ರಿವೇಣಿ, ಕೆ.ಎಸ್.ನರಸಿಂಹಸ್ವಾಮಿ ಮತ್ತು ದೇವನೂರು ಮಹಾದೇವ ಅವರ ಬರಹಗಳು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿದ್ದು, ಪ್ರತ್ಯೇಕ ಉಲ್ಲೇಖ, ಅಧ್ಯಯನ ಮತ್ತು ಮರು ಓದಿಗೆ ಸದಾ ಪ್ರೇರೇಪಿಸುತ್ತವೆ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ತಿಳಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಿದ್ದ 'ಸಾಹಿತ್ಯ ಸಹವಾಸ: ಆಧುನಿಕ ಕನ್ನಡ ಸಾಹಿತ್ಯ ಸಂವೇದನೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಮೂವರು ಸಾಹಿತಿಗಳು ಶೃಂಗಾರ, ಸಂವೇದನೆ ಮತ್ತು ಸ್ತ್ರೀ ಕೇಂದ್ರಿತ ಸಾಹಿತ್ಯವನ್ನು ನೀಡಿದ್ದಾರೆ ಎಂದು ಸ್ಮರಿಸಿದರು.



'ಸಾಹಿತ್ಯ ಸಹವಾಸ: ಆಧುನಿಕ ಕನ್ನಡ ಸಾಹಿತ್ಯ ಸಂವೇದನೆ' ಕಾರ್ಯಕ್ರಮವನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಉದ್ಘಾಟಿಸಿ, ಮಾತನಾಡಿದರು.

ಪ್ರೇಮ ಕವಿ, ರಮ್ಯ ಕವಿ, ಶೃಂಗಾರ ಕವಿ, ದಾಂಪತ್ಯ ಕವಿ ಎಂಬಿತ್ಯಾದಿ ಹೆಸರುಗಳಲ್ಲಿ ಗೊತ್ತಿಲ್ಲದೆಯೇ ಜನಸಾಮಾನ್ಯರ ಮನದಲ್ಲಿ ಸ್ಥಾನ ಪಡೆದಿರುವ ಕೆ.ಎಸ್. ನರಸಿಂಹಸ್ವಾಮಿ, ದಲಿತ ಸಂವೇದನೆಗಳನ್ನು ಅತ್ಯಂತ ಸೃಜನಶೀಲವಾಗಿ ಪ್ರಕಟಿಸಿ, ಆಧುನಿಕ ಸಾಹಿತ್ಯ ಕಥಾ ಪ್ರಪಂಚದಲ್ಲಿ ಹೊಸ ಸಂಚಲನ ಮತ್ತು ಹೊಸ ಇತಿಹಾಸ ಸೃಷ್ಟಿಸಿದ ಮಾಂತ್ರಿಕ ಕಥೆಗಾರ, ಚಿಂತಕ, ಕವಿ, ಸಾಮಾಜಿಕ ಹೋರಾಟಗಾರ ದೇವನೂರು ಮಹಾದೇವ ಹಾಗೂ ಸ್ತ್ರೀ ಬದುಕಿಗೆ, ಅಸ್ತಿತ್ವಕ್ಕೆ, ಸ್ತ್ರೀಯರ ಮೌನಕ್ಕೆ ಮಾತು ತುಂಬಿ ಸ್ತ್ರೀ ಕೇಂದ್ರಿತ ಕೌಟುಂಬಿಕ ಕಥೆ–ಕಾದಂಬರಿಗಳನ್ನು ರಚಿಸಿ ಹೆಂಗಳೆಯರಲ್ಲಿ ಓದಿನ ರುಚಿ ಹುಟ್ಟಿಸಿದ ತ್ರೀವೇಣಿ ಬರಹಗಳು ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿ ಪ್ರತ್ಯೇಕ ಉಲ್ಲೇಖ, ಅಧ್ಯಯನ ಮತ್ತು ಮರು ಓದಿಗೆ ಸದಾ ಕಾಲಕ್ಕೂ ಪ್ರೇರಣೆ ನೀಡುತ್ತವೆ ಎಂದು ಅಭಿವ್ಯಕ್ತಪಡಿಸಿದರು.

ಪ್ರೀತಿ ಕುವೆಂಪು ಅವರ ಪಾಲಿಗೆ ಆಧ್ಯಾತ್ಮದ ಭಾಗವಾದರೆ, ಪುತಿನಾ ಅವರ ಪಾಲಿಗೆ ಚಿಂತನೆಯ ವಸ್ತುವಾಗಿತ್ತು. ಬೇಂದ್ರೆಯವರ ಪಾಲಿಗೆ ಬದುಕನ್ನು ಅರಿತುಕೊಳ್ಳುವ ಒಂದು ಮಾಧ್ಯಮವಾದರೆ, ಕೆ.ಎಸ್.ನರಸಿಂಹಸ್ವಾಮಿ ಅವರ ಪಾಲಿಗೆ ಎಲ್ಲವೂ ಆಗಿದೆ. ಅವರ ದೃಷ್ಟಿಯಲ್ಲಿ ಪ್ರೀತಿ, ಬಾಳಿನ ನಿಜ ಶಕ್ತಿ. ಶುದ್ಧ ಮತ್ತು ಸೌಂದರ್ಯ. ಬಾಳಿನ ನೋವು–ನಲಿವು, ಸಿಟ್ಟು–ಸೆಡವು ಇತ್ಯಾದಿ ಭಾವಗಳಿಗೆ ಸ್ಪಂದಿಸಿದ ಕವಿಗಳಲ್ಲಿ ಕೆ.ಎಸ್.ನರಸಿಂಹಸ್ವಾಮಿ ಅವರಂತೆ ಮತ್ತೊಬ್ಬರಿಲ್ಲ. ಶೃಂಗಾರ ಸ್ವಾದವಿದ್ದರೂ ಎಲ್ಲಿಯೂ ಕೂಡ ಅಶ್ಲೀಲತೆ ಎಡೆ ಮಾಡಿಕೊಡಲಿಲ್ಲ. ಅವರ ಕಾವ್ಯ ರಚನೆ ಚಿನ್ನದ ಕುಸುರಿ ಕೆಲಸ ಮಾಡಿದಂತಿದೆ ಎಂದು ನೆನೆದರು.

ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ಮಾತನಾಡಿ, ಕವಿ ನರಸಿಂಹಸ್ವಾಮಿಯವರ ಬದುಕಿನ ಪ್ರೀತಿ, ದೇವನೂರರ ನಿಲುವಿನ ಸ್ಪಷ್ಟತೆ, ತ್ರಿವೇಣಿಯವರ ಹೆಣ್ಣುಮಕ್ಕಳ ಅನುಭವ ಮತ್ತು ಅವಳನ್ನು ಆಧುನಿಕತೆಗೆ ಒಡ್ಡುವ ಪ್ರಯತ್ನ ಇವತ್ತಿಗೂ ಮರು ಓದಿನ ಮೂಲಕ ಹೊಸ ಹೊಳಹು ನೀಡುತ್ತವೆ ಎಂದು ತಿಳಿಸಿದರು. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಅಜೀಂ ಪ್ರೇಮ್‌ಜೀ ಫೌಂಡೇಷನ್ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್, ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದ ಸಿ.ಎಸ್. ಮಹೇಶ್ ಕುಮಾರ್ ಮತ್ತಿತರರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್ (ರಿ.)
ಮೈಸೂರು



ಸ್ವಾಭಿಮಾನಿ ಚಕ್ರವರ್ತಿ
ವಿ. ಶ್ರೀನಿವಾಸ ಪ್ರಸಾದ್ ಅವರ
2ನೇ ವರ್ಷದ
ಪುಣ್ಯಸ್ಮರಣೆ

“ಅಂದು ನೀವು ಶೋಷಿತರ-ಅಶಕ್ತರ ಏಳಿಗೆಗಾಗಿ ರಚಿಸಿದ
ಈ ಸಾಮಾಜಿಕ ಸಂಘಟನೆಯನ್ನು ಮುಂದುವರೆಸಿಕೊಂಡು ಹೋಗುವ
ಜವಾಬ್ದಾರಿಯು ಇಂದು ನಮ್ಮದಾಗಿದೆ. ನೀವು ನಮ್ಮ ಮೇಲೆ ಇರಿಸಿದ
ಭರವಸೆಗೆ ಕೊಂಚವೂ ಚ್ಯುತಿಬಾರದಂತೆ ನಮ್ಮ ಕರ್ತವ್ಯವನ್ನು
ಪ್ರಾಮಾಣಿಕವಾಗಿ ನಿಭಾಯಿಸುತ್ತಿದ್ದೇವೆ.
ನೀವು ನಮ್ಮಲ್ಲಿ ತುಂಬಿದ ಅರಿವೇ ಇಂದು ನಮಗೆ ಗುರುವಾಗಿದೆ.”

ಶ್ರೀಮತಿ ಡಿ. ಭಾಗ್ಯಲಕ್ಷ್ಮಿ ಶ್ರೀನಿವಾಸಪ್ರಸಾದ್
ಅಧ್ಯಕ್ಷರು

ಶ್ರೀ ಪಿ. ನಂದಕುಮಾರ್
ಉಪಾಧ್ಯಕ್ಷರು

ಶ್ರೀಮತಿ ಪ್ರತಿಮಾ ಪ್ರಸಾದ್
ಖಜಾಂಚಿಗಳು

ಶ್ರೀ ಭರತ್ ರಾಮಸ್ವಾಮಿ
ಕಾರ್ಯದರ್ಶಿಗಳು

ಶ್ರೀ ಗೋಪಿನಾಥ್ ಜಾಗಿರ್ದಾರ್
ಜಂಟಿ ಕಾರ್ಯದರ್ಶಿಗಳು